بِسْمِ اللهِ الرَّحْمٰنِ الرَّحِيْم نَحْمَدُهٗ وَنُصَلِّی عَلٰی رَسُوْلِهِ الْكَرِيْم وَعَلٰی عَبْدِهِ الْمَسِيْحِ الْمَوْعُوْد

وَلَقَدْ نَصَرَكُمُ اللّٰهُ بِبَدْرٍ وَّاَنْتُمْ اَذِلَّةٌ

ವರ್ಷ: 02

ಕನ್ನಡ ಬದರ್ ವಾರ ಪತ್ರಿಕೆ

WEEKLY BADAR QADIAN KANNADA

ಸಂಚಿಕೆ: 44

ವಾರ್ಷಿಕ ಶುಲ್ಕ ರೂ.575/-

ಸಂಪಾದಕರು: ತಾರಿಖ್ ಅಹ್ಮದ್ ಇದ್ರೀಸ್.

04 ನವೆಂಬರ್ 2021, 04 ನಬುವ್ವತ್ 1400 ತಬ್‌ಲೀಗ್ ಹಿಜರಿ ಶಮ್‌ಸಿ, 28 ರಬೀಉಲ್ ಅವ್ವಲ್ 1443 ಹಿಜರಿ ಖಮರಿ.


## ಅಹ್ಮದಿಯಾ ವಾರ್ತೆ

ಅಲ್‌ಹಮ್ದುಲಿಲ್ಲಾಹ್! ಹುಝೂರ್ ಅನ್ವರ್ ಅಯ್ಯದಹುಲ್ಲಾಹುತಆಲ ಬಿನಸ್ರಿಹಿಲ್ ಅಝೀಝ್‌ರವರು ಆರೋಗ್ಯವಾಗಿದ್ದಾರೆ. ಹುಝೂರ್ ರವರ ಯೋಗಕ್ಷೇಮಕ್ಕಾಗಿ, ಶುಭಕಾರ್ಯಗಳಲ್ಲಿ ಯಶಸ್ಸುಗಳಿಸಲಿಕ್ಕಾಗಿ ದುಆ ಮಾಡುತ್ತಾ ಇರಿ, ಅಲ್ಲಾಹನು ಹುಝೂರ್ ರವರನ್ನು ಪ್ರತಿಕ್ಷಣ ಸಂರಕ್ಷಿಸಲಿ– **ಆಮೀನ್**

اَللّٰهُمَّ اَيِّدْ اِمَامَنَا بِرُوْحِ الْقُدُسِ
وَبَارِكْ لَنَا فِیْ عُمُرِهٖ وَاَمْرِهٖ

## ಅಲ್ಲಾಹನ ಉಪದೇಶ

وَاَطِيْعُوا اللّٰهَ وَاَطِيْعُوا الرَّسُوْلَ وَاحْذَرُوْا ۚ فَاِنْ تَوَلَّيْتُمْ فَاعْلَمُوْٓا اَنَّمَا عَلٰى رَسُوْلِنَا الْبَلٰغُ الْمُبِيْنُ

**(ಅಲ್‌ಮಾಇದ: 93)**

**ಅಂದರೆ: ನೀವು ಅಲ್ಲಾಹನಿಗೆ ವಿಧೇಯರಾಗಿರಿ ಮತ್ತು ಈ ಸಂದೇಶವಾಹಕನಿಗೂ ವಿಧೇಯರಾಗಿರಿ ಹಾಗೂ ಜಾಗರೂಕರಾಗಿದ್ದುಕೊಳ್ಳಿರಿ. ಆದರೆ ನೀವು ವಿಮುಖರಾದರೆ, ನಮ್ಮ ಸಂದೇಶವನ್ನು ಸ್ಪಷ್ಟವಾದ ರೀತಿಯಲ್ಲಿ ನಿಮಗೆ ತಲಪಿಸುವುದು ಮಾತ್ರವೇ ನಮ್ಮ ಸಂದೇಶವಾಹಕನ ಕರ್ತವ್ಯವೆಂದು ತಿಳಿದುಕೊಳ್ಳಿರಿ.**

## ಪ್ರವಾದಿ ಮುಹಮ್ಮದ್[ಸ]ರವರ ಉಪದೇಶ

### ಬಡವನ ಪರಿಭಾಷೆ

(1476) ಹಝುರತ್ ಅಬೂಹುರೈರ(ರ) ವರದಿ ಮಾಡುತ್ತಾರೆ. ಹಝ್‌ರತ್ ರಸೂಲುಲ್ಲಾಹ್(ಸ) ನುಡಿದರು. ಬಡವನೆಂದರೆ ಒಂದೆರಡು ತುತ್ತಿಗಾಗಿ ಅಲ್ಲಲ್ಲಿ ಬೇಡುತ್ತಾ ತಿರುಗಾಡುವವನಲ್ಲ, ಬದಲು ಅಗತ್ಯ ಉಳ್ಳವನಾಗಿಯೂ ನಾಚಿಕೆಪಟ್ಟು ಜನರ ಹಿಂದೆ ಬಿದ್ದು ಭಿಕ್ಷೆ ಬೇಡದವನೇ ನಿಜವಾದ ಬಡವ.

### ಸಂಪತ್ತಿನ ವ್ಯಯ ಹಾಗೂ ಅಧಿಕ ಪ್ರಶ್ನೆ ಮಾಡುವವರನ್ನು ಅಲ್ಲಾಹನು ಇಷ್ಟಪಡುವುದಿಲ್ಲ.

(1477) ಹಝ್‌ರತ್ ಮುಆವಿಯಾ(ರ) ಹಝ್‌ರತ್ ಮುಗ್ಹೀರ ಬಿನ್ ಸೋಬ್ತ ಅವರಿಗೆ ಬರೆದರು. ನನಗೆ ತಾವು ನಬಿ(ಸ) ರವರಿಂದ ಆಲಿಸಿದಂತಹ ಯಾವುದಾದರೊಂದು ಹದೀಸನ್ನು ಬರೆದು ಕಳುಹಿಸಿ. ಹಾಗೆ ಅವರು ಮುಆವಿಯಾ ಅವರಿಗೆ ಬರೆದು ಕಳುಹಿಸಿದರು. ನಾನು ನಬಿ(ಸ) ರವರಿಂದ ಅಲಿಸಿದ್ದೇನೆ. ಅವರು ನುಡಿದರು. ಅಲ್ಲಾಹನು ನಿಮಗಾಗಿ ಮೂರು ಮಾತುಗಳನ್ನು ಇಷ್ಟಪಡುವುದಿಲ್ಲ. ಪ್ರಯೋಜನವಿಲ್ಲದ ಮಾತುಗಳು, ಸಂಪತ್ತಿನ ದುರ್ವ್ಯಯ ಮತ್ತು ಅಧಿಕ ಪ್ರಶ್ನೆ ಮಾಡುವುದು **(ಸಹೀಹ್ ಬುಖಾರಿ, ಸಂಪುಟ–3, ಕಿತಾಬುರ್‍ರುಖಾತ್, ಮುದ್ರಣ ಖಾದಿಯಾನ್ 2008)**

**ಪ್ರೀತಿ ಎಲ್ಲರಲ್ಲು, ದ್ವೇಶವಿಲ್ಲ ಯಾರಲ್ಲು**

**Love for All, Hatred for None**

**ಇನ್ಸಾನಿಯತ್ ಝಿಂದಾಬಾದ್**

**ಮಾನವೀಯತೆ ಚಿರಕಾಲ ಬಾಳಲಿ**

**ಮನುಷ್ಯನು ಅತ್ಯಂತ ದುರ್ಬಲನಾಗಿದ್ದಾನೆ, ಅವನು ಅಲ್ಲಾಹನ ಅನುಗ್ರಹ, ಸಹಾಯವಿಲ್ಲದೆ ಮುಂದೆಸಾಗಲು ಸಾಧ್ಯವಿಲ್ಲ.**

**ಅವನು ಅಷ್ಟೊಂದು ದುರ್ಬಲತೆಗಳ ಆಗರವಾಗಿರುವಾಗ ಅವನ ಶಾಂತಿ ಮತ್ತು ಸುರಕ್ಷತೆಗೆ ಇರುವ ಮಾರ್ಗವೆಂದರೆ ಅಲ್ಲಾಹನೊಡನೆ ಅವನ ವ್ಯವಹಾರ ಪರಿಶುದ್ಧವಾಗಿರಬೇಕು.**

## ಸಯ್ಯದುನಾ ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಅಧ್ಯಾಪನೆಗಳು

ಅಲ್ಲಾಹನ ಅನುಗ್ರಹ ಮತ್ತು ಸಹಕಾರವಿಲ್ಲದೇ ಮನುಷ್ಯನು ಏನನ್ನು ಮಾಡಲು ಸಾಧ್ಯವಿಲ್ಲ. ಮನುಷ್ಯನು ಅಲ್ಲಾಹನೆಡೆ ಸೆಳೆಯಲ್ಪಟ್ಟಾಗ ಮತ್ತು ಅಲ್ಲಾಹನಲ್ಲಿ ಸಮರ್ಪಿತನಾದಾಗ ಅವನಿಂದ ಉಂಟಾಗುವ ಕಾರ್ಯವೆಲ್ಲ ದೈವಿಕ ಕಾರ್ಯಗಳಾಗಿರುತ್ತವೆ. ಅವನ ಮೇಲೆ ಉತ್ಯುನ್ನತ ಪ್ರಕಾಶಗಳು ಜಾಹೀರಾಗುತ್ತವೆ. ಮನುಷ್ಯನು ಅತ್ಯಂತ ದುರ್ಬಲನಾಗಿದ್ದಾನೆ ಅವನು ಅಲ್ಲಾಹನ ಅನುಗ್ರಹ, ಸಹಕಾರವಿಲ್ಲದೆ ಒಂದು ಹೆಜ್ಜೆ ಸಹ ಮುಂದೆ ಹಾಕಲು ಸಾಧ್ಯವಿಲ್ಲ. ನನ್ನ ನಂಬಿಕೆ ಎಲ್ಲಿಯವರೆಗೆ ಇದೆ ಎಂದರೆ ಅಲ್ಲಾಹನ ಸಹಕಾರ ದೊರೆಯದಿದ್ದರೆ ಮನುಷ್ಯನು ಶೌಚಾಲಯಕ್ಕೆ ಹೋಗಿ ಬಂದು ತನ್ನ ಪೈಜಾಮ ಕಟ್ಟಿಕೊಳ್ಳಲು ಸಹ ಶಕ್ತನಲ್ಲ ವೈದ್ಯರು ಮನುಷ್ಯನು ಸೀನಿದರೆ ಆವಾಗಲೇ ಸಾಯಬಹುದಾದ ಒಂದು ಕಾಯಿಲೆಯೂ ಇದೆ ಎನ್ನುತ್ತಾರೆ. ದಿಟವಾಗಿಯೂ ನೆನಪಿಡಿರಿ. ಮನುಷ್ಯನು ದುರ್ಬಲತೆಗಳ ಅಗರನಾಗಿದ್ದಾನೆ. ಆದುದರಿಂದ ಅಲ್ಲಾಹನು ಹೇಳಿದನು. "ಖಲಿಖಲ್ ಇನ್ಸಾನು ಝೀಫನ್" (ಅನ್ನಿಸಾಅ–29) ಅವನ ಸ್ವಂತದ್ದಂತೂ ಏನೂ ಇಲ್ಲ. ತಲೆಯಿಂದ ಹಿಡಿದು ಪಾದಗಳವರೆಗೆ ಇರುವ ಅಂಗಗಳಿಂತಲೂ ಹೆಚ್ಚು ಅವನಿಗೆ ತಗಲುವ ರೋಗಗಳು ಇರಬಹುದು. ಇಷ್ಟೆಲ್ಲಾ ದುರ್ಬಲತೆಗಳ ಅಗರವಾಗಿರುವಾಗ ಅವನು ಶಾಂತಿ ಮತ್ತು ಸುರಕ್ಷತೆಯ ಯಥಾರ್ಥ ಹಾಗೂ ನಿಷ್ಠಾವಂತ ದಾಸನಾಗಿರಬೇಕು. ಅವನು ಸತ್ಯತೆಯ ಹಾದಿ ಹಿಡಿಯಬೇಕಾಗುತ್ತದೆ. ದೈಹಿಕ ರಚನೆಯು ಸುವ್ಯವಸ್ಥಿತವಾಗಿದೆ. ಯಾರು ಸತ್ಯವನ್ನು ಬಿಡುವರು ಮತ್ತು ವಂಚನೆಗೈದು ಅಪರಾಧಗಳ ದಾರಿ ಹಿಡಿಯುತ್ತಾರೆ ಅವರು ತಪ್ಪು ದಾರಿಯಲ್ಲಿದ್ದಂತೆ.

### ಸುಳ್ಳಿನ ದಾರಿ ಹಿಡಿಯುವಂತಾದರೆ ಮನುಷ್ಯನ ಹೃದಯ ಅಂಧಕಾರಮಯವಾಗುವುದು

ಕೆಲ ಸಮಯದವರೆಗೆ ಅಥವಾ ತಾತ್ಕಾಲಿಕವಾಗಿ ಬಹುಶಃ ಮನುಷ್ಯನೊಬ್ಬನು ತಾನು ಪ್ರಯೋಜನ ಪಡೆಯಬಹುದೆಂದು ಭಾವಿಸಬಹುದು. ಆದರೆ ವಾಸ್ತವವೇನೆಂದರೆ ಸುಳ್ಳಿನ ದಾರಿ ಹಿಡಿಯುವುದರಿಂದ ಮನುಷ್ಯನ ಹೃದಯ ಅಂಧಕಾರಮಯವಾಗುವುದು ಮತ್ತು ಒಳಗಿಂದೊಳಗೆ ಕುತ್ತು ಹಿಡಿದಂತಾಗುತ್ತದೆ. ಒಂದು ಸುಳ್ಳನ್ನು ಸಮರ್ಥಿಸಲು ಹಲವು ಸುಳ್ಳುಗಳನ್ನು ಸೃಷ್ಟಿಸಬೇಕಾಗುತ್ತದೆ. ಏಕೆಂದರೆ ಅದನ್ನು ಸತ್ಯ ಎಂದು ನಂಬಿಸಬೇಕಾಗುತ್ತದೆ. ಅಂದ ಹಾಗೆ ಆ ರೀತಿ ಒಳಗಿಂದೊಳಗೆ ಅವನ ನೈತಿಕತೆ ಮತ್ತು ಆಧ್ಯಾತ್ಮಿಕ ಶಕ್ತಿಗಳು ಕುಂದಿ ಹೋಗುತ್ತವೆ. ಮತ್ತು ಅವನಿಗೆ ಸುಳ್ಳು ಹೇಳಲು ಧೈರ್ಯ ಬಂದುಬಿಡುತ್ತದೆ. ಅಲ್ಲಾಹನ ಮೇಲೂ ಸುಳ್ಳು ಸೃಷ್ಟಿಸಲು ಮುಂದಾಗುತ್ತಾನೆ. ಅವನು ಪ್ರವಾದಿಗಳನ್ನು ದಿಕ್ಕರಿಸುತ್ತಾನೆ. ಹೀಗೆ ಅಲ್ಲಾಹನ ದೃಷ್ಟಿಯಲ್ಲಿ ಅವನು **"ಅಝುಲಮ್"** ಅನ್ಯಾಯಿಯಾಗುತ್ತಾನೆ. ಅಲ್ಲಾಹನು ಹೇಳಿದಂತೆ **ಮನ್ ಅಝುಲಮ್ ಮಿಮ್ಮನಿಫ್ತರ ಅಲಲ್ಲಾಹಿ ಕಝಿಬ ಔ ಕಝ್ಝಬ ಬಿಆಯಾತಿಹಿ** (ಅಲ್ ಅನ್‌ಆಮ್: 21) ಅಲ್ಲಾಹನ ಮೇಲೆ ಸುಳ್ಳು ಸೃಷ್ಟಿಸುವವನಿಗಿಂತ ಅವನ ದೃಷ್ಟಾಂತಗಳನ್ನು ದಿಕ್ಕರಿಸುವವರಿಗಿಂತ ದೊಡ್ಡ ದುಷ್ಕರ್ಮಿಯಾಗಬಹುದು. ನೆನಪಿಡಿರಿ ಸುಳ್ಳು ಒಂದು ಘೋರ ಪಾಪವಾಗಿದೆ. ಅದು ಮನುಷ್ಯನನ್ನು ನಾಶಮಾಡಿಬಿತ್ತದೆ. ಅದಕ್ಕಿಂತ ಮಿಗಿಲಾದ ಸುಳ್ಳಿನ ಪರಿಣಾಮ ಇನ್ನೇನಾಗಬಹುದು.

ಮನುಷ್ಯನು ಅಲ್ಲಾಹನ ಮಾರ್ಗದರ್ಶಕರನ್ನು (ಪ್ರವಾದಿಗಳನ್ನು) ಮತ್ತು ಅವನ ದೃಷ್ಟಾಂತಗಳನ್ನು ಧಿಕ್ಕರಿಸಿ ಶಿಕ್ಷೆಗಳಿಗೆ ಅರ್ಹನಾಗುತ್ತಾನೆ. ಆದುದರಿಂದ ಸತ್ಯವನ್ನು ಪಾಲಿಸಿರಿ.

**(ಮಲ್ಫೂಝಾತ್, ಸಂಪುಟ–1, ಪುಟ–333, ಮುದ್ರಣ 2018 ಖಾದಿಯಾನ್)**

**ಸ್ವರ್ಗ ಅಂದರೆ ಆಲಸಿಗರ ತಾಣವಲ್ಲ. ಬದಲು ಅಲ್ಲಿ ವಾಸಿಸುವವರು ಕೆಲಸದಲ್ಲಿ ನಿರತರಾಗಿರುತ್ತಾರೆ. ಕಾರ್ಯವಿಲ್ಲದಿರುತ್ತಿದ್ದರೆ ಅಲ್ಲಿ ದಣಿಯುವುದಿಲ್ಲ ಎಂದು ಹೇಳುವ ಅವಶ್ಯಕತೆಯೇನಿತ್ತು. ಸ್ವರ್ಗದ ಎಲ್ಲಾ ಸಾರಸ್ಯವಿರುವುದು, ಭಾವನೆಗಳ ತಳಮಳವಿಲ್ಲದೇ ಮನುಷ್ಯನು ಸ್ವತಂತ್ರವಾಗಿ ಆರಾಧನೆಗಳಲ್ಲಿ ಅಭಿರುಚಿ ಪಡೆಯುತ್ತಾನೆ.**

ಸಯ್ಯದ್‌ನಾ ಹಝ್‌ರತ್ ಮುಸ್ಲಿಹ್ ಮೌಊದ್(ರ) ಸೂರಃ ಅಲ್–ಹಿಜ್ರ ವಚನ 49 **ಲಾ ಯಮುಸ್ಸೂಹುಮ್ ಫೀಹಾ ನಸೀಬುವ್ವ ಮಾಹುಮ್ ಮಿನ್‌ಹಾ ಬಿ ಮುಖ್‌ರಿಜೀನ್** ರ ವ್ಯಾಖ್ಯಾನ ಮಾಡುತ್ತ ಹೇಳುತ್ತಾರೆ. ಸ್ವರ್ಗದಲ್ಲಿ ಅವರನ್ನು ದಣಿವು ಸ್ಪರ್ಶಿಸದು. ಅವರು ಅಲ್ಲಿಂದ ಹೊರಹಾಕಲ್ಪಡಲಾರರು. ಆದ್ದರಿಂದ ತಿಳಿದುಬರುವುದೇನೆಂದರೆ ಸ್ವರ್ಗದಲ್ಲಿಯೂ ಮನುಷ್ಯನು ಕಾರ್ಯನಿರತನಾಗಿರುವನು. ಆದರೆ ವ್ಯತ್ಯಾಸವೇನೆಂದರೆ ಅದು ನಶ್ವರವಲ್ಲ. ಏಕೆಂದರೆ ದಣಿವು ನಾಶದ

*(ಪುಟ ಸಂಖ್ಯೆ–10 ರಲ್ಲಿ ಮುಂದುವರಿಸಲಾಗಿದೆ)*

لَا اِلٰہَ اِلَّا اللّٰہُ مُحَمَّدٌ رَّسُوْلُ اللّٰہِ

## ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಬಹುಮಾನದ ಪಂಥಾಹ್ವಾನ

**ಹರ್ ಮುಖಾಲಿಫ್ ಕೊ ಮುಖಾಬಿಲ್ ಪೆ ಬುಲಾಯ ಹಮ್ ನೇ**

ಎಲ್ಲಾ ವಿರೋಧಿಯರನ್ನು ಪ್ರತಿವಾದಿಸಲು ಆಹ್ವಾನಿಸಿದೆವು ನಾವು.

اِنَّ السُّمُوْمَ لَشَرٌّ مَا فِی الْعَالَمِ ✿ شَرَّ السُّمُوْمِ عَدَاوَۃُ الصُّلَحَاءِ

**ಅರಬಿ ಭಾಷೆಯು ಉಮ್ಮುಲ್ ಅಲ್‌ಸಿನಾ (ಎಲ್ಲಾ ಭಾಷೆಗಳ ಮೂಲ) ಮತ್ತು ದೈವಿಕ ಭಾಷೆಯಾಗಿದೆ. ಅದನ್ನು ಅಲ್ಲಾಹನು ತನ್ನ ದಿವ್ಯವಾಣಿಯ ಮೂಲಕ ಮನುಷ್ಯನನ್ನು ಒದಗಿಸಿದ್ದಾನೆ. ಯಾರಾದರೂ ತನ್ನ ಭಾಷೆಗೂ ಆ ಶ್ರೇಷ್ಠತೆ ಲಭ್ಯವಿದೆ ಎಂದು ಸಾಬೀತುಪಡಿಸಿದರೆ ಅವರಿಗಾಗಿ ಐದು ಸಾವಿರ ರೂಪಾಯಿಗಳ ಬಹುಮಾನ.**

ಹಿಂದಿನ ಸಂಚಿಕೆಯಲ್ಲಿ ಅರಬಿಯು ಉಮ್ಮುಲ ಅಲ್‌ಸಿನಾ (ಎಲ್ಲಾ ಭಾಷೆಗಳ ಮೂಲ) ಮತ್ತು ದಿವ್ಯವಾಣಿಯ ಭಾಷೆಯಾಗಿರುವ ಕುರಿತು ನಾವು ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ರವರ ಕೆಲ ಅಧ್ಯಾಪನೆ, ಸಾಕ್ಷ್ಯಗಳು, ಮತ್ತು ಅವರ ಗ್ರಂಥ "ಮಿನನುರ್ ರಹ್ಮಾನ್" ರಿಂದ ಪ್ರಸ್ತುತಪಡಿಸಿದೆವು. ಈ ಸಂಚಿಕೆಯಲ್ಲಿ ಅದೇ ವಿಷಯವಾಗಿ ಅವರ ಕೆಲವು ಇನ್ನಷ್ಟು ಸಾಕ್ಷ್ಯಗಳನ್ನು ನಾವು ಪ್ರಸ್ತುತಪಡಿಸುವೆವು.

### ಅರಬಿ ಭಾಷೆಯಲ್ಲಿ ಮುಫ್ರದಾತ್ (ಧಾತುಗಳ) ನಿಧಿಯೇ ಇದೆ.

ಅರಬಿ ಭಾಷೆಯ ಒಂದು ಬಹು ದೊಡ್ಡ ಗುಣವೆಂದರೆ ಮಾನವನ ಯೋಚನೆ ಮತ್ತು ಭಾವನಾ ಲಹರಿಯನ್ನು ಪದಗಳಲ್ಲಿ ಬಳಸುವ ಸಲುವಾಗಿ ಅದರಲ್ಲಿ ಬೇಕಾದಷ್ಟು ಶಬ್ದಕೋಶಗಳ ಒಂದು ದೊಡ್ಡ ಖಜಾನೆಯೇ ಇದೆ. ಆದರೆ ಇತರ ಭಾಷೆಗಳಲ್ಲಿ ಅದರ ಕೊರತೆ ಎದ್ದು ಕಾಣುತ್ತದೆ. ಅರಬಿ ಭಾಷೆಯ ಈ ಗುಣ ಕುರಿತು ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ.

ಪರಿಪೂರ್ಣ ಭಾಷೆಯಾಗಿ ಶಬ್ದಗಳ ಪರಿಪೂರ್ಣ ವ್ಯವಸ್ಥಿತ ಯೋಜನೆ ಅಗತ್ಯವಾಗಿದೆ. ಅಂದರೆ ಒಂದು ಭಾಷೆಯನ್ನು ಪರಿಪುರ್ಣ ಭಾಷೆ, ದಿವ್ಯವಾಣಿಯ ಭಾಷೆ ಮತ್ತು ಎಲ್ಲಾ ಭಾಷೆಗಳ ಮೂಲ (ಉಮ್ಮುಲ್ ಅಲ್‌ಸಿನಾ) ಎಂದು ಪರಿಗಣಿಸಲ್ಪಡಬೇಕಾದರೆ ಮಾನವನ ಭಾವನೆಗಳನ್ನು ಪದಗಳ ಬಳಕೆಯಲ್ಲಿ ತರುವಾಗ ಶಬ್ದಗಳ ಮೂಲ ತನ್ನೊಳಗೆ ಇರಿಸಿಕೊಳ್ಳಬೇಕಾಗುತ್ತದೆ ಆಗ ಈ ಮಾತಿಗೆ ಪುಷ್ಟಿ ದೊರೆಯುತ್ತದೆ. ಸರ್ವಶಕ್ತನಾದ ಸರ್ವಜ್ಞನಾದ ಅಲ್ಲಾಹನೇ ಮಾನವನನ್ನು ಮತ್ತು ಅವನ ಭಾವನೆಗಳನ್ನು ಸೃಷ್ಟಿಸಿದ್ದಾನೆ ಎಂದು. ಅವನೇ ಈ ಭಾವನೆಗಳನ್ನು ವ್ಯಕ್ತಪಡಿಸಲು ಆದಿಯಿಂದ ಈ ಶಬ್ದಗಳನ್ನು ಸೃಷ್ಟಿಸಿದ್ದಾನೆ. ಆಗ ನಮ್ಮ ಮನಸ್ಸು ಈ ಮಾತನ್ನು ಒಪ್ಪಲು ವಿವಶವಾಗುತ್ತದೆ. ಯಾವುದೇ ಒಂದು ಭಾಷೆಯಲ್ಲಿ ಮಾನವ ಭಾವನೆಗಳ ಏರಿಳಿತದನ್ವಯ ಸುಂದರವಾದ ಶಬ್ದಗಳನ್ನು ಹೊಂದಿದ್ದರೆ ಮತ್ತು ಪ್ರತಿಯೊಂದು ಸೂಕ್ಷ್ಮ ವ್ಯತ್ಯಾಸ ಕೃತಿಗಳಲ್ಲಿರುವಂತಹದ್ದು. ಅದೇ ರೀತಿಯ ಸೂಕ್ಷ್ಮ ವ್ಯತ್ಯಾಸ ನುಡಿಗಳ ಮೂಲಕವೂ ಸ್ಪಷ್ಟಪಡಿಸಿದರೆ ಅದರ ಶಬ್ದಗಳು ಭಾವನೆಗಳ ಎಲ್ಲಾ ಅಗತ್ಯಗಳನ್ನು ಪೂರೈಸುವಂತಿದ್ದರೆ ನಿಸ್ಸಂಶಯವಾಗಿಯೂ ಆ ಭಾಷೆ ದಿವ್ಯವಾಣಿಯ ಭಾಷೆ ಆಗಿರುತ್ತದೆ. ಏಕೆಂದರೆ ಇದು ಅಲ್ಲಾಹನ ಕಾರ್ಯವಾಗಿದೆ. ಅದನ್ನು ಅವನು ಮನುಷ್ಯನಿಗೆ ಸಾವಿರಾರು ವಿಧದ ಭಾವನೆಗಳನ್ನು ವ್ಯಕ್ತಪಡಿಸಲು ಸಿದ್ಧಗೊಳಿಸಿದ್ದಾನೆ. ಆದರೆ ಅಗತ್ಯಬಿದ್ದಾಗ ಸಂಯೋಜನೆಯಿಂದ ಕಾರ್ಯಪ್ರವೃತ್ತವಾಗುವುದು ಭಾಷೆಯ ವಿಶೇಷ ವೈಶಿಷ್ಟ್ಯಗಳಲ್ಲಿ ಒಂದು. ಸಾವಿರಾರು ಭಾಷೆಗಳು ಈ ತೊಂದರೆಯನ್ನು ಎದುರಿಸುತ್ತವೆ ಮತ್ತು ಅದರಲ್ಲಿ ಈ ನ್ಯೂನತೆಯಿದೆ. ಅದು ಶಬ್ದಗಳ ಬದಲು ಮುರಕ್ಕಬಾತ್ (ಪದಗಳಿಂದ) ಕಾರ್ಯ ಕೈಗೊಳ್ಳುತ್ತವೆ. ಅದರಿಂದ ಸ್ಪಷ್ಟವಾಗುವುದೇನೆಂದರೆ ಅಗತ್ಯಬಿದ್ದಾಗ ಆ ಪದಗಳು (ಮುರಕ್ಕಬಾತ್) ಮನುಷ್ಯನು ಸ್ವಯಂ ಸೃಷ್ಟಿಸಿಕೊಳ್ಳುತ್ತಾನೆ. (ಮಿನನುರ್–ರಹ್ಮಾನ್, ರೂಹಾನಿ ಖಝಾಈನ್, ಸಂಪುಟ–9, ಪುಟ–140)

### ಅರಬಿ ಭಾಷೆಯಲ್ಲಿ ಯಾವುದೇ ಸ್ಪಷ್ಟತೆ ಕಾಣದ, ಯಾವುದೇ ವಿಶ್ವಾಸ, ಯಾವುದೆ ಪ್ರಾರ್ಥನೆಗಳು (ದುಆ), ಯಾವುದೇ ಆರಾಧನೆಗಳು, ಯಾವುದೇ ಭಾವನೆಗಳು, ಕಾಮಭಾವನೆಗಳು, ಹೀಗೆ ಯಾವುದೆ ಸಂಧರ್ಭದಲ್ಲಿ ವ್ಯಕ್ತಪಡಿಸು ಶಬ್ದಗಳನ್ನು ಲಭ್ಯವಿಲ್ಲದೆ ಇಲ್ಲ.

ಅರಬಿ ಭಾಷೆಯ ಈ ಗುಣಗಳ ಮತ್ತು ಅದರಲ್ಲಿರುವ ಶಬ್ದಗಳ ಖಜಾನೆಗಳ ಕುರಿತು ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ನುಡಿಯುತ್ತಾರೆ. ನೀನು ಅದರ ಕುರಿತು ಪರಿಪೂರ್ಣತೆ ಕಾಣುವೆ ಮತ್ತು ಮನುಷ್ಯನ ಎಲ್ಲಾ ಉದ್ದೇಶಗಳನ್ನು ಈಡೇರಿಸುವುದನ್ನು ಕಾಣುವಿರಿ. ಅಂದ ಹಾಗೆ ಯಾವುದೇ ಅಂತಹ ಕರ್ಮ, ಅದು ಅಂತ್ಯ ಕಾಲದವರೆಗೆ ಪರಿಗಣಿಸಲಾಗುವುದು. ಅಲ್ಲಾಹನ ಗುಣನಾಮಗಳಿಗೆ ಅನ್ವಯಿಸದಂತಹ, ಮತ್ತು ಯಾವುದೇ ನಂಬಿಕೆಗಳಿಗೆ ಅನ್ವಯಿಸದಂತಹ ಶಬ್ದ ಅರಬಿಯಲ್ಲಿ ಇಲ್ಲದೆ ಇಲ್ಲ. ಅಂದ ಹಾಗೆ ಪರೀಕ್ಷಿಸಬೇಕಾದರೆ ಪರೀಕ್ಷಿಸಿಕೊಳ್ಳಿ. ಸಂಶಯವಿದ್ದರೆ ಸತ್ಯ ಹಾಗೂ ವಾಸ್ತವ ತಿಳಿಯಬಯಸುವವರಂತೆ ಮುಂಬರಲಿ, ದೇವವಿಧಿಯಲ್ಲಿ ಯಾವುದೇ ಅಂತಹ ಕಾರ್ಯ ಕಾಣಲಿಕ್ಕಿಲ್ಲ. ದೇವ ರಹಸ್ಯಗಳಲ್ಲಿ ಯಾವ ರಹಸ್ಯವು ಈ ಪೈಕಿ ಗೌಪ್ಯವಿರುವಂತೆ ಕಾಣಲಿಕ್ಕಿಲ್ಲ. ಅದರ ಮುಂದೆ ಯಾವ ಪದದವು ಈ ಭಾಷೆಯಲ್ಲಿ ಇಲ್ಲದಂತೆ ಕಾಣಲಿಕ್ಕಿಲ್ಲ. ಅಂದ ಹಾಗೆ ಸೂಕ್ಷ್ಮ ದೃಷ್ಟಿಯಿಂದ ನೋಡುವವರಾದರೆ, ಬುರುಡೆ ಬಿಡುವವರ ಹಾಗೆ ನನ್ನ ಮಾತನ್ನು ಭಾವಿಸಲಿಕ್ಕಿಲ್ಲ. ಸತ್ಯ ಹೇಳಬೇಕಾದರೆ ಅರಬಿ ಭಾಷೆಯು ಒಂದು ವೃತ್ತದ ಹಾಗೆ. ಎಲ್ಲಾ ಉದ್ದೇಶಗಳ ಮೇಲೆ ಆವರಿಸಿದೆ. ಈ ಭಾಷೆಯು ಅಂದರೆ ಅರಬಿ ಭಾಷೆಯು ದೈವಿಕ ಗ್ರಂಥಧಂತೆ, ಎರಡು ಕನ್ನಡಿಯಂತೆ, ಅಂದರೆ ಎದುರು ಬದುರು ಇರುವ ಕನ್ನಡಿಯಂತೆ. ಹೀಗೆ ನೀನು ಯಾವುದೇ ಇಂತಹ ಸೃಷ್ಟಿ ಕಾಣಲಿಕ್ಕಿಲ್ಲ. ಇಂತಹ ಯಾವುದೆ ವಿಶ್ವಾಸ, ಇಂತಹ ಯಾವುದೇ ಪ್ರಾರ್ಥನೆಗಳು (ದುಆ), ಇಂತಹ ಆರಾಧನೆಗಳು ಇಂತಹ ಭಾವನೆಗಳು, ಇಂತಹ ಕಾಮಭಾವನೆಗಳು, ಹೀಗೆ ಇದೆಲ್ಲ ಮ್ಯಕ್ತಪಡಿಸಲು ಅರಬಿ ಬಾಷೆಯಲ್ಲಿ ಶಬ್ದಗಳು ಲಭ್ಯವಿಲ್ಲದೆ ಇಲ್ಲ. ಈ ಗುಣ ಯಾವುದೆ ಇನ್ನಿತರ ಭಾಷೆಯಲ್ಲಿ ಕಾಣಲು ಸಾಧ್ಯವೇ ಇಲ್ಲ (ಅದೇ ಪುಟ 194)

### ದೇವ ನಿಯಮ ಹಾಗೂ ಈ ಭಾಷೆಯ ಧಾತುಗಳು ಹೆಗಲಿಗೆ ಹೆಗಲು ಮುಟ್ಟುವಂತೆ ನಡೆಯುತ್ತದೆ.

ಸಯ್ಯದುನಾ ಹಝ್ರತ್ ಮಸೀಹ್ ಮೌಊದ್(ಅ) ನುಡಿಯುತ್ತಾರೆ: ನಾವು ಅದನ್ನು ಯಾವ ಸ್ಥಳದಲ್ಲೂ ಮೂಕರಂತೆ ಕಾಣುವುದಿಲ್ಲ. ಏಕೆಂದರೆ ಅದಕ್ಕೆ ಒಂದು ಪರಿಪೂರ್ಣವಾದ ವ್ಯವಸ್ಥೆ ಇದೆ. ಇದರ ಸ್ಥಾನ ಮಹೋನ್ನತವಾಗಿದೆ. ಅದರ ಪದಗಳು ಬೇಕಾದಷ್ಟಿವೆ. ಅದರ ಶಬ್ದಕೋಶಗಳು ಹೇರಳವಾಗಿವೆ. ಅದರಲ್ಲಿ ಅನುಪಾತ ಮತ್ತು ಸಾಮಗ್ರಿಗಳು ತುಂಬಾ ಇವೆ. ಅದರ ಸಂಬಂಧ ದೀರ್ಘವಾದುದು. ಸಂಬಂಧದಲ್ಲಿ ಐಕ್ಯತೆ ಇದೆ. ಅದರ ನಿರೀಕ್ಷೆಯ ಶ್ರೇಣಿ ನಿರಂತರವಾಗಿವೆ. ಮತ್ತು ದೇವನಿಯಮ ಹಾಗೂ ಈ ಭಾಷೆಯ ಶಬ್ದಗಳು ಹೆಗಲಿಗೆ ಹೆಗಲು ಮುಟ್ಟುವಂತೆ ನಡೆಯುತ್ತವೆ. ಉದಾಹರಣೆಗೆ ನೊಗದ ಎರಡು ಎತ್ತುಗಳಂತೆ, ಅಥವಾ ಒಂದು ಅಂಗಳದ ಸಮಾನಾಂತರ ಗೋಡೆಗಳಂತೆ (ಅದೇ ಪುಟ 219).

### ಧಾತುಗಳ ಪರಿಪೂರ್ಣ ವ್ಯವಸ್ಥೆಯ ನಮೂನೆ

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ. ದೇವನಿಯಮದಲ್ಲಿ ನಮಗೆ ಕಂಡುಬರುವ ವೈವಿಧ್ಯಮಯ ವಸ್ತುಗಳು ವೈವಿಧ್ಯಮಯ ಕಾಲಘಟ್ಟಗಳು ಅಥವಾ ವಸ್ತುಗಳಲ್ಲಿ ಕಂಡುಬರುವ ವ್ಯತ್ಯಾಸ ಭಿನ್ನತೆ, ಅವೆಲ್ಲಾ ಭಿನ್ನತೆ ಮತ್ತು ವ್ಯತ್ಯಾಸವನ್ನು ಸ್ಪಷ್ಟಪಡಿಸಲು ಅರಬಿಯಲ್ಲಿ ಬೇಕಾದ ಶಬ್ದಗಳಿವೆ. ಈ ಬಗ್ಗೆ ಮನುಷ್ಯನ ಜನನದಿಂದ ಹಿಡಿದು ಮರಣದವರೆಗೆ ವಿವಿಧ ಕಾಲಘಟ್ಟಗಳ ಅತ್ಯಂತ ಆಸಕ್ತಿದಾಯಕ ಮತ್ತು ಜ್ಞಾನದಿಂದ ತುಂಬಿದ ಉದಾಹರಣೆ ಪ್ರಸ್ತುತಪಡಿಸಿದೆ.

ಅವರು ಹೇಳುತ್ತಾರೆ. ತಿಳಿದುಕೊಳ್ಳಿ, ಮಾತುಗಳ ವ್ಯತ್ಯಾಸವು ಪ್ರಪಂಚದಲ್ಲಿರುವ ವೈವಿಧ್ಯಮಯ ಅನುಸರಣೆಗೆ ಅನುಗುಣವಾಗಿವೆ. ಅದಕ್ಕಾಗಿಯೇ ಸೃಷ್ಟಿಕರ್ತನು ಹೇಳಿದನು. ಪ್ರಪಂಚದ ಸೃಷ್ಟಿಯಲ್ಲಿರುವ ವ್ಯತ್ಯಾಸ, ದೈವಿಕ ಗ್ರಂಥಗಳಲ್ಲಿ ಸ್ಪಷ್ಟವಾಗಿ ಗೋಚರಿಸುತ್ತವೆ. ಹಾಗೆ ನಾವು ನಿಮಗಾಗಿ ಒಂದು ನಮೂನೆಯ ರೂಪದಲ್ಲಿ ಮನುಷ್ಯನ ಸೃಷ್ಟಿಯು ಮುಖಾಂತರ ತೆರೆದಿಡುತ್ತೇವೆ. ಏಕೆಂದರೆ ವಿವೇಕವಂತರು ತಿಳಿದುಕೊಳ್ಳಲಿ ಅಥವಾ ತಿಳಿಯುವ ಹಂಬಲ ಉಂಟಾಗಲಿ ಎಂದು. ಅಂದ ಹಾಗೆ ನೀವು ನೋಡುತ್ತಿರುವ ಮನುಷ್ಯನು ಸೃಷ್ಟಿಯ ಹಂತದಲ್ಲಿರುವಾಗ, **ಹಯ್ಯುಝ್** ಶಕ್ತಿಯಿಂದ **ಹಯ್ಯುಝ್** ಕೃತಿಯಡೆಗೆ ತರಲಾಯಿತು ಮತ್ತು ಭೌತಿಕ ಪ್ರದರ್ಶನದ ವಿವಿಧ ರೂಪಗಳನ್ನು ಕೊಡಲಾಯಿತು. ಕೆಲ ವಿಧದ ಸೃಷ್ಟಿ ಕೆಲವರ ಹಿಂದೆ ಆಯಿತು. ಮತ್ತು ಅವುಗಳಲ್ಲಿ ಪರಸ್ಪರ ಭಿನ್ನತೆ ಉಂಟಾಯಿತು. ಅಂದ ಹಾಗೆ ಆಗ ಹಲವು ದರ್ಜೆಗಳು (ಹಂತಗಳು) ಉತ್ಪನ್ನವಾಯಿತು. ಅವು ಅವುಗಳಿಗೆ ಹೆಸರು ಪಡೆಯಬೇಕಾಗಿತ್ತು. ಅಂತೂ ಅರಬಿ ಭಾಷೆಯು ಅವುಗಳಿಗೆ ಹೆಸರು ದಯಪಾಲಿಸಿತು. ಮತ್ತು ಅದನ್ನು ಪರಿಪೂರ್ಣತೆಗೆ ತಲುಪಿಸಲಾಯಿತು. ಉದಾಹರಣೆಗೆ "ಸಖೀ" (ಧಾನಶೂರ) ಮತ್ತು ಮಾಲ್ದಾರ್ (ಶ್ರೀಮಂತ) ಜನರ ಕಾರ್ಯವಾಗಿರುತ್ತದೆ. ಅದರ ವಿವರ

*(ಪುಟ 09 ರಲ್ಲಿ ಮುಂದುವರಿಸಲಾಗಿದೆ)*

# ಖುತ್‌ಬ ಜುಮುಅ

**ಹಝ್ರತ್ ಉಮರ್ ಫಾರೂಖ್‌ರ ಖಿಲಾಫತ್ ಕಾಲದಲ್ಲಿ, ಇಸ್ಲಾಮಿನ ಆಡಳಿತ ಪೂರ್ವದಲ್ಲಿ ಜೈಜೂನ್ ನದಿ ಮತ್ತು ಸಿಂಧ್ ನದಿಯಿಂದ ಪಶ್ಚಿಮದಲ್ಲಿ ಆಫ್ರಿಕದ ಮರುಭೂಮಿ ತನಕ ಹಾಗೂ ಉತ್ತರ ದಿಕ್ಕಿನ ಏಶ್ಯದ ಕೋಚಕ್ ಪರ್ವತಗಳು ಮತ್ತು ಆರ್ಮೇನಿಯದಿಂದ ದಕ್ಷಿಣದಲ್ಲಿ ಅಲ್‌ಕಾಹಿಲ್ ಸಮುದ್ರ ಮತ್ತು ನೋಬ ತನಕ ಒಂದು ಜಾಗತಿಕ ದೇಶದ ರೂಪದಲ್ಲಿ ಲೋಕದ ನಕಾಶೆಯಲ್ಲಿ ಪ್ರಕಟವಾಗಿತ್ತು. ಎಲ್ಲರೂ ಇಸ್ಲಾಮಿನ ನ್ಯಾಯ ಮತ್ತು ಕರುಣೆಯ ನೆರಳಿನಲ್ಲಿ ಶಾಂತಿ ಮತ್ತು ನೆಮ್ಮದಿಯ ಜೀವಿತವನ್ನು ಕಳೆದರು. ಇಸ್ಲಾಂ ಧರ್ಮವು ತಮ್ಮ ವಿರೋಧಿಗಳಿಗೂ, ಸಾವಿರಾರು ವಿರೋಧಗಳಿದ್ದರೂ ಈ ಲೋಕದಲ್ಲಿ ಸಂಪೂರ್ಣ ಹಕ್ಕುಗಳನ್ನು ನೀಡಿತು. ಅವರ ಜೀವಿತವನ್ನು ಸಂಪೂರ್ಣವಾಗಿ ಗೌರವಿಸಿದರು.**

**ರಸೂಲುಲ್ಲಾಹ್(ಸ) ರವರ ಪ್ರೀಯ ಬದರಿ ಹಾಗೂ ನಿಷ್ಠಾವಂತ ಸಹಾಬಿ ಖಲೀಫ ರಾಶಿದ, ಫಾರೂಖೇ ಆಝಮ್ ಹಝ್ರತ್ ಉಮರ್ ಬಿನ್ ಖತ್ತಾಬ್(ರ)ರವರ ಪವಿತ್ರ ಜೀವನ ಚರಿತ್ರೆಯ ಪ್ರಸ್ತಾವನೆ**

**ಫರಾಮ ಯುದ್ಧ, ಬಿಲ್ಬೀಸ್‌ನ ವಿಜಯ, ಉಮ್ಮೆ ದುನೈನ್ ವಿಜಯ, ಫುಸ್ತಾತ್ ಯುದ್ಧ, ಅಲೆಕ್ಸೆಂಡರಿಯಾಗೆ ಹತೋಟಿಗೆ ತರುವುದು, ಬರ್ಖಾ ಹಾಗೂ ತರಾಬೀಲಸ್‌ನ ವಿಜಯ ಮತ್ತು ಮುಂತಾದ ವಿಷಯಗಳ ಬಗ್ಗೆ ವಿವರಾತ್ಮಕವಾದ ಪ್ರಸ್ತಾವನೆ.**

**ಆಪತ್ತುಗಳು ಮತ್ತು ಕಷ್ಟತೆಗಳು ನಮ್ಮನ್ನು ಅಲ್ಲಾಹನ ಸಮೀಪಗೊಳಿಸುವಂತದ್ದಾಗಿರಬೇಕು. ಇವೇ ಅನಂತರ ವಿಜಯಕ್ಕೆ ಕಾರಣವಾಗುತ್ತವೆ. ನಾವು ಕೇವಲ ಈ ಸಂಗತಿಗಳಿಗೆ ಹೆದರಿ ಹಿಂದೆಸರಿಯುವುದಾದರೆ ಮತ್ತು ತಮ್ಮ ಸುಧಾರಣೆಯ ಕಡೆಗೆ ಗಮನಹರಿಸುವುದಿಲ್ಲವೆಂದಾದರೆ, ಪ್ರಗತಿ ಉಂಟಾಲಾರದು. ಅಭಿವೃದ್ಧಿಗಳು ಲಭಿಸುವ ಮತ್ತು ವಿಪತ್ತುಗಳೂ ಕೊನೆಗೊಳ್ಳುವ ದಿನಗಳಲ್ಲಿ ಅಲ್ಲಾಹನ ಕಡೆಗೆ ವಿಶೇಷವಾಗಿ ಹೆಚ್ಚು ಗಮನಹರಿಸಬೇಕಾಗಿದೆ. ನಾವು ನಮ್ಮ ಆಧ್ಯಾತ್ಮಿಕ ಏಳಿಗೆ ಮತ್ತು ಆಧ್ಯಾತ್ಮಿಕ ಒಳಿತಿನ ಕಡೆಗೆ ಗಮನಹರಿಸಬೇಕು. ಇಂದು ಸಹ ಅಹ್ಮದಿಯರು ಈ ಸಂಗತಿಯನ್ನು ಅರಿಯಬೇಕು.**

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **01-10-2021** ರಂದು ನೀಡಿದ **ಖುತ್‌ಬ ಜುಮುಅ**

أَشْهَدُ أَنْ لَّا إِلٰهَ إِلَّا اللّٰهُ وَحْدَهُ لَا شَرِيكَ لَهُ وَأَشْهَدُ أَنَّ مُحَمَّدًا عَبْدُهُ وَرَسُولُهُ

أَمَّا بَعْدُ فَأَعُوذُ بِاللّٰهِ مِنَ الشَّيْطٰنِ الرَّجِيمِ ۔ بِسْمِ اللّٰهِ الرَّحْمٰنِ الرَّحِيمِ

اَلْحَمْدُ لِلّٰهِ رَبِّ الْعٰلَمِينَ ۔ اَلرَّحْمٰنِ الرَّحِيمِ ۔ مٰلِكِ يَوْمِ الدِّينِ ۔

إِيَّاكَ نَعْبُدُ وَإِيَّاكَ نَسْتَعِينُ ۔ اِهْدِنَا الصِّرَاطَ الْمُسْتَقِيمَ ۔

صِرَاطَ الَّذِينَ أَنْعَمْتَ عَلَيْهِمْ غَيْرِ الْمَغْضُوبِ عَلَيْهِمْ وَلَا الضَّآلِّينَ ۔

ಹಝ್ರತ್ ಮುಸ್ಲಿಹ್ ಮೌಊದ್(ರ) ಒಂದು ಸಂದರ್ಭದಲ್ಲಿ ಒಂದು ಭಾಷಣದಲ್ಲಿ ತಬ್ಲೀಗ್ ಕುರಿತು ಹೇಳುವಾಗ ಹಝ್ರತ್ ಉಮರ್ ರಝಿಯಲ್ಲಾಹುರ ಕಾಲದ ಘಟನೆಗಳ ಬಗ್ಗೆ ಪ್ರಸ್ತಾಪಿಸುತ್ತಾ ಹೇಳುತ್ತಾರೆ: ಹಝ್ರತ್ ಪೈಗಂಬರರ(ಸ) ನಿಧನದ ನಂತರ ನಡೆದ ಯುದ್ಧಗಳಲ್ಲಿ ಹೆಚ್ಚಾಗಿ ಮುಸ್ಲಿಮರು ಕಡಿಮೆ ಸಂಖ್ಯೆಯಲ್ಲಿ ಇರುತ್ತಿದ್ದರು.

ಸೀರಿಯದ ಯುದ್ಧದಲ್ಲಿ ಸಿಪಾಯಿಗಳ ಬಹಳ ಕೊರತೆಯಿತ್ತು. ಶತ್ರುಗಳು ಬಹಳ ಹೆಚ್ಚಿನ ಸಂಖ್ಯೆಯಲ್ಲಿ ಇರುವರು, ಆದ್ದರಿಂದ ಸೈನಿಕರನ್ನು ಕಳುಹಿಸುವ ಏರ್ಪಾಡು ಮಾಡಿರಿ ಎಂದು ಹಝ್ರತ್ ಉಮರ್‌ರಿಗೆ(ರ) ಹಝ್ರತ್ ಅಬುಉಬೈದ(ರ) ಪತ್ರ ಬರೆದರು. ಅವಲೋಕನ ನಡೆಸಲಾದಾಗ, ಹೊಸ ಸೈನಿಕರನ್ನು ಭರ್ತಿ ಮಾಡುವುದು ಅಸಾಧ್ಯವೆಂದು ಹಝ್ರತ್ ಉಮರ್‌ರಿಗೆ(ರ) ಗೊತ್ತಾಯಿತು. ಏಕೆಂದರೆ, ಅರೇಬಿಯದ ಸುತ್ತುಮುತ್ತಲಿನ ಯುವಕರಲ್ಲಿ ಹೆಚ್ಚಿನವರು ಕೊಲ್ಲಲ್ಪಟ್ಟಿದ್ದರು. ಉಳಿದವರು ಸೈನ್ಯದಲ್ಲಿ ಮೊದಲೇ ಭಾಗಿಯಾಗಿದ್ದರು. ಸಮಾಲೋಚನೆಗಾಗಿ ಹಝ್ರತ್ ಉಮರ್(ರ) ಒಂದು ಸಭೆಯನ್ನು ಕರೆದರು. ಅದರಲ್ಲಿ ವಿವಿಧ ಗೋತ್ರಗಳ ಜನರನ್ನು ಕರೆದು ಈ ವಿಷಯವನ್ನು ಅವರ ಮುಂದಿರಿಸಿದರು. ಒಂದು ಗೋತ್ರವಿದೆ, ಅದರಿಂದ ಕೆಲವು ವ್ಯಕ್ತಿಗಳು ಲಭ್ಯವಾಗಬಹುದು ಎಂದು ಜನರು ಹೇಳಿದರು. ಬೇಗನೇ ಆ ಗೋತ್ರದಿಂದ ಯುವಕರನ್ನು ಒಟ್ಟುಸೇರಿಸಲು ಹಝ್ರತ್ ಉಮರ್(ರ) ಒಬ್ಬ ಅಧಿಕಾರಿಯುನ್ನು ಆಜ್ಞಾಪಿಸಿದರು. ಹಝ್ರತ್ ಉಮರ್(ರ) ಹಝ್ರತ್ ಅಬೂಉಬೈದರಿಗೆ ಹೀಗೆ ಬರೆದು ತಿಳಿಸಿದರು: ಆರು ಸಾವಿರ ಸಿಪಾಯಿಗಳು ನಿನ್ನ ಸಹಾಯಕ್ಕಾಗಿ ಕಳುಹಿಸುತ್ತಿದ್ದೇನೆ. ಅವರು ಕೆಲವು ದಿನಗಳಲ್ಲಿ ನಿನ್ನ ಬಳಿಗೆ ತಲುಪುವರು. ಇಂತಿಂತಹ ಗೋತ್ರಗಳಿಂದ ಮೂರು ಸಾವಿರ ಸಿಪಾಯಿಗಳು ನಿನ್ನ ಬಳಿ ತಲುಪುವರು. ಉಳಿದ ಮೂರು ಸಾವಿರಕ್ಕೆ ಸಮವಾಗಿ ಉಮರ್ ಬಿನ್ ಮಾಅದಿ ಕರ್‌ಬರನ್ನು ಕಳುಹಿಸುತ್ತಿದ್ದೇನೆ. ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ನಮ್ಮ ಒಬ್ಬ ಯುವಕನನ್ನು ಮೂರು ಸಾವಿರ ಜನರನ್ನು ಎದುರಿಸಲು ಕಳುಹಿಸಿದರೆ ಅವನು ಹೀಗೆ ಹೇಳುವೆನು: ಇದೆಂತಹ ಬುದ್ಧಿಗೆ ವಿರುದ್ಧವಾದ ಸಂಗತಿಯಾಗಿದೆ. ಖಲೀಫರ ತಲೆ ಸರಿಯಿಲ್ಲವೇ? ಒಬ್ಬ ವ್ಯಕ್ತಿಗೆ ಮೂರು ಸಾವಿರ ಜನರನ್ನು ಎದುರಿಸಲು ಸಾಧ್ಯವೇ? ಆದರೆ ಈ ಜನರ ವಿಶ್ವಾಸ ಎಷ್ಟು ದೃಢವಾಗಿತ್ತು. ಹಝ್ರತ್ ಅಬೂಉಬೈದರಿಗೆ ಹಝ್ರತ್ ಉಮರರ ಪತ್ರ ಲಭಿಸಿದಾಗ ಅವರು ಆ ಪತ್ರವನ್ನು ಓದಿ ತನ್ನ ಸೈನಿಕರೊಡನೆ ಹೀಗೆ ಹೇಳಿದರು: ಸಂತೋಷಗೊಳ್ಳಿರಿ, ನಾಳೆ ಉಮರ್ ಬಿನ್ ಮಅದಿ ಕರ್‌ಬ್ ನಿಮ್ಮ ಬಳಿಗೆ ತಲುಪುತ್ತಿದ್ದಾರೆ. ಮರುದಿನ ಸಿಪಾಯಿಗಳು ಬಹಳ ಖುಶಿಯಿಂದ ಅಮ್ರ್ ಬಿನ್ ಮಅದಿಯನ್ನು ಸ್ವಾಗತಿಸಿದರು ಮತ್ತು ತಕ್ಬೀರ್ ಹೇಳಿದರು. ಮುಸ್ಲಿಮರ ಸಹಾಯಕ್ಕಾಗಿ ಒಂದೆರಡು ಲಕ್ಷದಷ್ಟು ಸೈನಿಕರು ಬರುತ್ತಿದ್ದಾರೆ, ಆದ್ದರಿಂದ ಅವರು ಇಷ್ಟು ಸಂತೋಷಗೊಂಡಿರುವರು ಎಂದು ಶತ್ರುಗಳು ಭಾವಿಸಿದರು. ಆದರೆ ಅಮ್ರ್ ಬಿನ್ ಮಅದಿ ಮಾತ್ರವಿದ್ದರು. ಅನಂತರ ಮೂರು ಸಾವಿರ ಸೈನಿಕರು ಸಹ ತಲುಪಿದರು. ಮುಸ್ಲಿಮರು ಶತ್ರುಗಳನ್ನು ಸೋಲಿಸಿದರು. ಖಡ್ಗದ ಯುದ್ಧದಲ್ಲಿ ಒಬ್ಬ ವ್ಯಕ್ತಿ ಮೂರು ಸಾವಿರ ಜನರನ್ನು ಹೇಗೆ ಎದುರಿಸುವುದು. ಮಾತಿನ ಜಗಳದಲ್ಲಿ ಒಬ್ಬ ವ್ಯಕ್ತಿ ಅನೇಕ ಸಾವಿರ ಜನರಿಗೆ ತನ್ನ ಮಾತನ್ನು ತಲುಪಿಸಬಹುದಾಗಿದೆ. ಆದರೆ ಆ ಜನರು ಖಲೀಫರ ಮಾತಿಗೆ ಎಷ್ಟು ಬೆಲೆಕೊಡುತ್ತಿದ್ದರು ಎಂದು ನೋಡಿರಿ. ಅಮ್ರ್ ಬಿನ್ ಮಅದಿಯನ್ನು ಹಝ್ರತ್ ಉಮರ್(ರ) ಮೂರು ಸಾವಿರ ಸಿಪಾಯಿಗಳ ಬದಲಾಗಿ ಕಳುಹಿಸಿದರು. ಒಬ್ಬ ವ್ಯಕ್ತಿ ಹೇಗೆ ಮೂರು ಸಾವಿರ ವ್ಯಕ್ತಿಗಳನ್ನು ಎದುರಿಸುವುದು ಎಂದು ಅವರು ಆಕ್ಷೇಪವೆತ್ತಲಿಲ್ಲ. ಬದಲಾಗಿ ಅವರನ್ನು ಮೂರು ಸಾವಿರಕ್ಕೆ ಸಮಾನವೆಂದೇ ಭಾವಿಸಿದರು. ಬಹಳ ವೈಭವಶಾಲಿಯಾಗಿ ಅವರನ್ನು ಸ್ವಾಗತಿಸಿದರು. ಮುಸ್ಲಿಮರ ಈ ಸ್ವಾಗತದ ಕಾರಣದಿಂದ ಶತ್ರುಗಳು ಹೆದರಿದರು. ಒಂದೆರಡು ಲಕ್ಷದಷ್ಟು ಸೈನಿಕರು ಮುಸ್ಲಿಮರ ಸಹಾಯಕ್ಕಾಗಿ ಬಂದಿರಬಹುದು ಎಂದು ಭಾವಿಸಿದರು. ಆದ್ದರಿಂದ ಯುದ್ಧ ಮೈದಾನದಲ್ಲಿ ಅವರು ಚಂಚಲಚಿತ್ತರಾದರು. ಅವರು ಸೋತು ಪರಾರಿಯಾದರು. ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಮೊತ್ತಮೊದಲು ನಾವು ಸಹ ಇದೇ ರೀತಿಯಲ್ಲಿ ನಮ್ಮ ಮನಸ್ಸನ್ನು ಸಮಾಧಾನಪಡಿಸಬೇಕು. (ಸ್ಪೇನ್ ಔರ್ ಸಿಸ್ಲಿ ಮೇ ತಬ್ಲೀಗೆ ಇಸ್ಲಾಮ್ ಔರ್ ಜಮಾಅತೆ ಅಹ್ಮದಿಯಾ, ಅನ್ವಾರುಲ್ ಉಲೂಮ್, ಸಂಪುಟ-18, ಪುಟ-359-360)

ಯುರೋಪ್, ಸ್ಪೇನ್, ಸಿಸ್‌ಲಿ ಮುಂತಾದ ದೇಶಗಳಲ್ಲಿ ತಬ್ಲೀಗ್ ಹೇಗೆ ಮಾಡಬೇಕೆಂಬುದಕ್ಕೆ ಸಂಬಂಧಿಸಿ ಈ ಘಟನೆಯನ್ನು ಅವರು ಹೇಳಿದ್ದರು. ಈಗ ಈಜಿಪ್ಟ್ ವಿಜಯದ ಬಗ್ಗೆ ಪ್ರಸ್ತಾಪಿಸುವೆನು. ಅದರಲ್ಲಿ ಒಂದು ಫರ್ಮಾ ಯುದ್ಧವಾಗಿತ್ತು. ಫರ್ಮಾ ಈಜಿಪ್ಟಿನ ಒಂದು ಪ್ರಸಿದ್ಧ ಪಟ್ಟಣವಾಗಿತ್ತು. ರೋಮಿನ ಸಮುದ್ರ ಮತ್ತು ಪಲೋಝಿಯ ಬಲಗಡೆಯ ಸಮೀಪ ನೈಲ್ ನದಿಯೊಂದಿಗೆ ಇರುವ ಭಾಗಗಳಲ್ಲಿ ಒಂದು ಭಾಗವಾಗಿತ್ತು. ಒಂದು ಪರ್ವತದ ಮೇಲೆ ಈ ಪಟ್ಟಣ ನೆಲೆಸಿತ್ತು. (ಸಂಯ್ಯುದುನಾ

ಹಝ್ರತ್ ಉಮರ್ ಫಾರೂಖ್ ಆಝಮ್(ರ), ಮುಹಮ್ಮದ್ ಹುಸೈನ್ ಹೈಕಲ್ ಅನುವಾದಕ ಹಬೀಬ್ ಅಶ್‌ಅರಿ, ಪುಟ–556–557, ಇಸ್ಲಾಮಿ ಕುತುಬ್ ಖಾನ ಉರ್ದು ಬಜಾರ್ ಕರಾಚಿ)

ಅಲ್ಲಾಮ ಶಿಬ್ಲಿ ನುಅ್‌ಮಾನಿಯರ ಪ್ರಕಾರ ಬೈತುಲ್ ಮಖ್‌ದಿಸಿನ ವಿಜಯದ ನಂತರ ಹಝ್ರತ್ ಅಮ್ರ್ ಬಿನ್ ಆಸ್‌ರ ಒತ್ತಾಯದ ಮೇರೆಗೆ ಹಝ್ರತ್ ಉಮರ್(ರ) ನಾಲ್ಕು ಸಾವಿರದಷ್ಟು ಸೈನಿಕರನ್ನು ಕೊಟ್ಟು ಹಝ್ರತ್ ಅಮ್ರ್ ಬಿನ್ ಆಸ್‌ರನ್ನು ಈಜಿಪ್ಟ್ ಕಡೆಗೆ ರವಾನೆ ಮಾಡಿದರು. ಆದರೆ ಈಜಿಪ್ಟ್ ತಲುಪುವುದಕ್ಕೆ ಮುಂಚೆ ನನ್ನ ಪತ್ರ ಸಿಕ್ಕಿದರೆ ಮರಳಿ ಬರಬೇಕೆಂದು ಹಝ್ರತ್ ಉಮರ್(ರ) ಆದೇಶಿಸಿದರು. ಅವರು ಅರೇಶ್ ದಾಟಿದ ನಂತರ ಹಝ್ರತ್ ಉಮರರ ಪತ್ರ ಅವರಿಗೆ ಸಿಕ್ಕಿತು. ಅದರಲ್ಲಿ ಮುಂದೆ ಹೋಗುವುದರಿಂದ ತಡೆಯಲಾಗಿತ್ತು. ಆದರೆ ಗಡಿ ತಲುಪುವುದಕ್ಕೆ ಮುಂಚೆ ಪತ್ರ ಸಿಕ್ಕಿದರೆ ಮರಳಿ ಬರಬೇಕೆಂದು ಹೇಳಲಾಗಿತ್ತು. ಹಝ್ರತ್ ಅಮ್ರ್ ಹೇಳಿದರು: ಈಗ ನಾವು ಅರೇಶಿನಿಂದ ಸಾಗುತ್ತಾ ಈಜಿಪ್ಟಿನ ಗಡಿಯಾದ ಫರ್ಮಾಗೆ ತಲುಪಿದ್ದೇವೆ. (ಅಲ್‌ಫಾರೂಖ್, ಶಿಬ್ಲಿ ನುಮಾನಿ, ಪುಟ–160, ದಾರುಲ್ ಇಶಾಅತ್ ಕರಾಚಿ 1991)

ಇಸ್ಲಾಮಿನ ಯುದ್ಧಗಳ ಕುರಿತು ಬರೆಯಲಾದ ಒಂದು ಪುಸ್ತಕವಾಗಿದೆ ಅಲ್‌ಇಕ್‌ತಿಫಾ. ಅದರಲ್ಲಿ ಹೀಗೆ ಬರೆಯಲಾಗಿದೆ: ಹಝ್ರತ್ ಅಮ್ರ್ ಬಿನ್ ಆಸ್(ರ) ರಫಹ್ ಎಂಬ ಸ್ಥಳಕ್ಕೆ ತಲುಪಿದಾಗ ಅವರಿಗೆ ಹಝ್ರತ್ ಉಮರರ(ರ) ಪತ್ರ ಲಭಿಸಿತು. ಆದರೆ ಈ ಪತ್ರದಲ್ಲಿ ಮರಳಿಬರಲು ಆಜ್ಞಾಪಿಸಲಾಗಿದೆಯೋ ಎಂಬ ಭಯದಿಂದ ಅವರು ದೂತನಿಂದ ಆ ಪತ್ರವನ್ನು ಪಡೆಯದೇ ಸಾಗುತ್ತಾ ಹೋದರು. ಹೀಗೆ ಅವರು ರಫಹ್ ಮತ್ತು ಉರೈಶಿನ ನಡುವೆ ಇರುವ ಸಣ್ಣ ಗ್ರಾಮಕ್ಕೆ ತಲುಪಿದರು. ಅದರ ಕುರಿತು ಕೇಳಿದರು. ಇದು ಈಜಿಪ್ಟಿನ ಗಡಿಪ್ರದೇಶವಾಗಿದೆ ಎಂದು ಹೇಳಲಾಯಿತು. ಆಗ ಅವರು ಆ ಪತ್ರವನ್ನು ಪಡೆದು ಅದನ್ನು ಓದಿದರು. ಜೊತೆಗೆ ಇರುವ ಮುಸ್ಲಿಮರೊಂದಿಗೆ ಮರಳಿ ಬರಬೇಕೆಂದು ಅದರಲ್ಲಿ ಆಜ್ಞಾಪಿಸಲಾಗಿತ್ತು. ಅಮ್ರ್ ಬಿನ್ ಆಸ್(ರ) ಜನರೊಡನೆ ಹೇಳಿದರು: ನಾವು ಈಗಿರುವ ಜಾಗ ಈಜಿಪ್ಟಿನಲ್ಲಾಗಿದೆ ಎಂದು ನಿಮಗೆ ಗೊತ್ತಿಲ್ಲವೇ? ಹೌದೆಂದು ಜನರು ಹೇಳಿದರು. ಅವರು ಹೇಳಿದರು: ನನಗೆ ಈ ಪತ್ರ ಈಜಿಪ್ಟಿಗೆ ತಲುಪುವುದಕ್ಕೆ ಮುಂಚೆ ಲಭಿಸಿದರೆ, ಮರಳಿ ಬರಬೇಕೆಂದು ಅಮೀರುಲ್ ಮೂಮಿನೀನ್ ಆದೇಶಿಸಿದ್ದಾರೆ. ನನಗೆ ಈ ಪತ್ರ ಈಜಿಪ್ಟಿಗೆ ತಲುಪಿದ ನಂತರ ಲಭಿಸಿದೆ. ಆದ್ದರಿಂದ ಅಲ್ಲಾಹನ ಹೆಸರಿನಿಂದ ಮುಂದೆ ಸಾಗಿರಿ. ಒಂದು ವರದಿಯಲ್ಲಿ ಹೀಗಿದೆ. ಹಝ್ರತ್ ಅಮ್ರ್ ಬಿನ್ ಆಸ್ ಫೆಲಸ್ತೀನಿನಲ್ಲಿದ್ದರು. ಅವರು ಅನುಮತಿ ವಿನಾ ತನ್ನ ಸಂಗಡಿಗರೊಂದಿಗೆ ಈಜಿಪ್ಟಿಗೆ ಹೋದರು ಎಂದೂ ಬಂದಿದೆ. ಈ ಸಂಗತಿ ಹಝ್ರತ್ ಉಮರ್‌ರಿಗೆ(ರ) ಇಷ್ಟವಾಗಲಿಲ್ಲ. ಹಝ್ರತ್ ಉಮರ್(ರ) ಅಮ್ರ್‌ರಿಗೆ ಪತ್ರ ಬರೆದರು. ಅವರು ಉರೈಶಿನ ಸಮೀಪ ತಲುಪಿದಾಗ ಅವರಿಗೆ ಆ ಪತ್ರ ಲಭಿಸಿತ್ತು. ಉರೀಶಿಗೆ ತಲುಪುವ ತನಕ ಅವರು ಆ ಪತ್ರವನ್ನು ಓದಲಿಲ್ಲ. ಅನಂತರ ಓದಿದರು. ಅದರಲ್ಲಿ ಹೀಗೆ ಬರೆಯಲಾಗಿತ್ತು: ಉಮರ್ ಬಿನ್ ಖತ್ತಾಬ್‌ರ ಕಡೆಯಿಂದ ಅಮ್ರ್ ಬಿನ್ ಆಸ್‌ರ ಹೆಸರಲ್ಲಿ, ಖಂಡಿತವಾಗಿಯೂ ನೀನು ನಿನ್ನ ಸಂಗಡಿರೊಡನೆ ಈಜಿಪ್ಟಿಗೆ ಹೋಗಿದ್ದೀಯ. ಅಲ್ಲಿ ರೋಮನರು ಹೆಚ್ಚು ಸಂಖ್ಯೆಯಲ್ಲಿದ್ದಾರೆ. ನಿನ್ನೊಂದಿಗೆ ಕೆಲವೇ ಮಂದಿಯಿರುವರು. ನನ್ನ ಪ್ರಾಯದ ಆಣೆ, ಅಲ್ಲಾಹನು ನಿಮಗೆ ಒಳ್ಳೆಯದು ಮಾಡಲಿ. ಅವರನ್ನು ಜೊತೆಗೆ ಕೊಂಡು ಹೋಗದಿದ್ದರೆ ಚೆನ್ನಾಗಿತ್ತು. ನೀನು ಈಜಿಪ್ಟಿಗೆ ತಲುಪಿಲ್ಲವೆಂದಾದರೆ, ಮರಳಿ ಬಾ. (ಅಲ್‌ಇಕ್ತಿಫಾ ಬಿಮಾ ತಝ್‌ಮನ ಮಿನ್ ಮಗಾಝಿ..... ಸಂಪುಟ–2, ಪುಟ–324–325, ಇಸ್ತಿಖ್ಲಾಫ್ ಉಮರ್ ಬಿನ್ ಖತ್ತಾಬ್, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 1420ಹಿಜರಿ)

ಈ ಯಾತ್ರೆಯಲ್ಲಿ ಫರ್ಮಾ ತಲುಪುವುದಕ್ಕೆ ಮುಂಚೆ ಯಾವುದೇ ರೋಮಿ ಸಿಪಾಯಿಯನ್ನು ಮುಸ್ಲಿಮರ ಸೈನ್ಯ ಭೇಟಿಯಾಗಿರಲಿಲ್ಲ. ಎಲ್ಲ ಕಡೆ ಈಜಿಪ್ಟಿನವರು ಅವರನ್ನು ಸ್ವಾಗತಿಸುತ್ತಿದ್ದರು. ಇದರ ಕುರಿತು ಬೇರೆ ಬೇರೆ ವರದಿಗಳು ಇವೆ. ಆದರೆ ಈಜಿಪ್ಟಿನ ಗಡಿಯೊಳಗಿನ ಪ್ರದೇಶವಾದ ಉರೈಶ್‌ನಲ್ಲಿ ಅವರಿಗೆ ಪತ್ರ ಲಭಿಸಿತ್ತು ಎಂಬ ವರದಿಯೇ ಸರಿಯೆಂದು ತೋರುತ್ತದೆ. ಇಲ್ಲದಿದ್ದರೆ, ಈಜಿಪ್ಟಿಗೆ ತಲುಪಿದ ನಂತರವೇ ಪತ್ರವನ್ನು ತೆರೆಯುವೆನು ಎಂಬ ನೆಪ ಸರಿಯೆಂದು ತೋರುವುದಿಲ್ಲ. ಹೇಗಿದ್ದರೂ ಈಜಿಪ್ಟಿಗೆ ಪ್ರವೇಶಿಸಿದ ನಂತರ ಅವರಿಗೆ ಮುಂದೆಯೇ ಹೋಗಬೇಕಾಗಿತ್ತು, ಏಕೆಂದರೆ, ಮುಂದೆ ಹಾಕಿದ ಹೆಜ್ಜೆಯಿಂದ ಸತ್ಯವಿಶ್ವಾಸಿಯು ಹಿಂದೆ ಸರಿಯುವುದಿಲ್ಲ. ಇಸ್ಲಾಮಿನ ಮಾಮೂಲಿ ಸಂಖ್ಯೆಯಲ್ಲಿರುವ ಸೈನ್ಯವನ್ನೂ ಹಾಗೂ ತಮ್ಮ ಹೆಚ್ಚಿನ ಸಂಖ್ಯೆ ಮತ್ತು ತಯಾರಿಯನ್ನು ನೋಡಿಕೊಂಡು, ಮುಸ್ಲಿಮರು ಬೇಗನೇ ಧೈರ್ಯಗುಂದಿ ಸಹನೆಗೆಟ್ಟು ಮರಳಿ ಹೋಗುವರು ಎಂಬ ಭಾವನೆಯಿಂದ ರೋಮನರು ತಮ್ಮ ಕೋಟೆಯನ್ನು ಮುಚ್ಚಿದರು. ಅನೇಕ ತಿಂಗಳ ಮುತ್ತಿಗೆಯ ನಂತರ, ಕೋಟೆಯಿಂದ ಹೊರಗೆ ಬಂದ ರೋಮ್ ಸೈನ್ಯದ ಒಂದು ಗುಂಪಿನೊಂದಿಗೆ ಹಝ್ರತ್ ಅಮ್ರ್ ಬಿನ್ ಆಸ್(ರ) ಯುದ್ಧ ಮಾಡಿ ಅವರನ್ನು ಸೋಲಿಸಿ, ಹಿರಿಯ ವಿಜಯಕ್ಕೆ ಬೇಕಾಗಿರುವ ಮಾರ್ಗವನ್ನು ತೆರೆದರು. (ಸುಯ್ಯದುನಾ ಉಮರ್ ಬಿನ್ ಖತ್ತಾಬ್ ಅಝ್ ಅಸ್ಸಲಾಬಿ, ಅನುವಾದಕ ಉರ್ದು ಪುಟ–755–756, ಅಲ್‌ಫುರ್‌ಖಾನ್ ಟ್ರಷ್ಟ್ ಖಾನ್‌ಗಡ್ ಪಾಕಿಸ್ತಾನ್)

ಬಿಲ್ಬಿಸ್ ವಿಜಯ, ಅದು ಹೇಗೆ ಸಂಭವಿಸಿತು? ಫರಮಾದ ನಂತರ, ಹಝ್ರತ್ ಅಮ್ರ್ ಬಿನ್ ಆಸ್(ರ) ಬಿಲ್ಬಿಸ್ ಕಡೆಗೆ ತಿರುಗಿದಾಗ ರೋಮನ್ ಸೈನ್ಯವು ಅವರ ದಾರಿಯನ್ನು ನಿರ್ಬಂಧಿಸಿದರು. ಬಿಲ್ಬಿಸ್ ಫುಸ್ತಾತ್‌ನಿಂದ ಸುಮಾರು ಮೂವತ್ತು ಮೈಲಿ ದೂರದಲ್ಲಿರುವ ಸಿರಿಯಾಕ್ಕೆ ಹೋಗುವ ರಸ್ತೆಯಲ್ಲಿರುವ ಒಂದು ಪಟ್ಟಣವಾಗಿದೆ. ಆದಾಗ್ಯೂ, ಮುಸ್ಲಿಮರು ಬ್ಯಾಬಿಲೋನ್ ಕೋಟೆಯನ್ನು ತಲುಪಲು ಸಾಧ್ಯವಾಗದಂತೆ ರಸ್ತೆಯನ್ನು ನಿರ್ಬಂಧಿಸಲಾಯಿತು. ಬ್ಯಾಬಿಲೋನ್ ಎಂಬ ಹೆಸರನ್ನು ಪ್ರಾಚೀನ ನಿಘಂಟಿನಲ್ಲಿ ಈಜಿಪ್ಟ್ ದೇಶಕ್ಕೆ ಬಳಸಲಾಗಿದೆ, ವಿಶೇಳವಾಗಿ ಫುಸ್ತಾತ್ ನೆಲೆಸಿದ್ದ ಸ್ಥಳದಲ್ಲಿ ಇದನ್ನು ಹಿಂದೆ ಬ್ಯಾಬಿಲೋನ್ ಎಂದು ಕರೆಯಲಾಗುತ್ತಿತ್ತು. ರೋಮನ್ ಸೈನ್ಯವು ಇಲ್ಲಿ ಹೋರಾಡಲು ಬಯಸಿತು, ಆದರೆ ಅಮ್ರ್ ಇಬ್ನ್ ಆಸ್ ಅವರಿಗೆ ಹೇಳಿದರು, ನಾವು ನಮ್ಮ ವಿಷಯವನ್ನು ನಿಮ್ಮ ಮುಂದೆ ಇಡುವವರೆಗೆ ಆತುರಪಡಬೇಡಿ, ಇದರಿಂದ ನಾಳೆ ಯಾವುದೇ ರೀತಿಯ ಕ್ಷಮಾಪಣೆ ಇರುವುದಿಲ್ಲ. ನಂತರ ಅವರು ಹೇಳಿದರು: ಅಬು ಮರ್ಯಮ್ ಮತ್ತು ಅಬು ಮರ್ಯಾಮ್ ಅವರನ್ನು ನಿಮ್ಮಿಂದ ನನಗೆ ರಾಯಭಾರಿಗಳಾಗಿ ಕಳುಹಿಸಿ. ಆದ್ದರಿಂದ ಅವರು ಯುದ್ಧವನ್ನು ನಿಲ್ಲಿಸಿದರು ಮತ್ತು ಇಬ್ಬರು ರಾಯಭಾರಿಗಳನ್ನು ಕಳುಹಿಸಿದರು. ಇಬ್ಬರೂ ರಾಯಭಾರಿಗಳು ಬಿಲ್ಬಿಸ್ ಜನರ ಸನ್ಯಾಸಿಗಳಾಗಿದ್ದರು. ಹಝ್ರತ್ ಅಮ್ರ್ ಅವರಿಗೆ ಇಸ್ಲಾಂಗೆ ಮತಾಂತರಗೊಳ್ಳಲು ಅಥವಾ ಜಿಝಿಯವನ್ನು ಪಾವತಿಸಲು ಪ್ರಸ್ತಾಪಿಸಿದರು ಮತ್ತು ಅದೇ ಸಮಯದಲ್ಲಿ ನೀವು ಈಜಿಪ್ಟ್ ಅನ್ನು ವಿಜಯಗೊಳಿಸುತ್ತೀರಿ ಎಂದು ಈಜಿಪ್ಟ್ ಜನರ ಬಗ್ಗೆ ಪ್ರವಾದಿ(ಸ) ರವರ ಆಜ್ಞೆಯನ್ನು ಮಂಡಿಸಿದರು. ಆ ಪ್ರದೇಶದಲ್ಲಿ ಖಿರಾತ್ ಎಂಬ ಹೆಸರು ಬಹಳ ಹೆಸರುವಾಸಿಯಾಗಿತ್ತು. ಹೀಗಾಗಿ ನೀವು ಅದನ್ನು ವಿಜಯಗೊಳಿಸಿದಾಗ, ಅದರ ನಿವಾಸಿಗಳನ್ನು ದಯೆಯಿಂದ ನೋಡಿಕೊಳ್ಳಿ, ಏಕೆಂದರೆ ಅವರಿಗೆ ಜವಾಬ್ದಾರಿ ಮತ್ತು ಕರುಣೆಯ ಪ್ರತಿಫಲವಿದೆ. ಇದನ್ನು ಕೇಳಿದ ಇಬ್ಬರು ರಾಯಭಾರಿಗಳು ಇದು ಬಹಳ ದೂರದ ಸಂಬಂಧವಾಗಿದೆ ಅದನ್ನು ಪ್ರವಾದಿಗಳು ಮಾತ್ರ ಪೂರೈಸುತ್ತಾರೆ ಎಂದು ಹೇಳಿದರು. ನಮಗೆ ಹೋಗಲು ಅನುಮತಿ ನೀಡಿ. ನಾವು ಹಿಂತಿರುಗಿ ಬಂದು ನಿಮಗೆ ಹೇಳುತ್ತೇವೆ ಎಂದು ಹೇಳಿದಾಗ ಹಝ್ರತ್ ಅಮ್ರ್ ಬಿನ್ ಆಸ್(ರ) ಹೇಳಿದರು: ನನ್ನಂತಹ ವ್ಯಕ್ತಿಯನ್ನು ಮೋಸಗೊಳಿಸಲು ಸಾಧ್ಯವಿಲ್ಲ. ವಿಳಯವನ್ನು ಎಚ್ಚರಿಕೆಯಿಂದ ಪರಿಗಣಿಸಲು ನಾನು ನಿಮಗೆ ಮೂರು ದಿನಗಳನ್ನು ನೀಡುತ್ತೇನೆ. ಇಬ್ಬರು ರಾಯಭಾರಿಗಳು ಇನ್ನೂ ಒಂದು ದಿನವನ್ನು ಕೇಳಿದಾಗ ಅವರು ಅವರಿಗೆ ಇನ್ನೂ ಒಂದು ದಿನ ನೀಡಿದರು. ಇಬ್ಬರು ರಾಯಭಾರಿಗಳು ಕುಬ್ತಿಯರ ಮುಖ್ಯಸ್ಥ ಮಕೋಕಸ್ ಮತ್ತು ಈಜಿಪ್ಟ್‌ನ ಆಡಳಿತಗಾರ ರೋಮನ್ ಚಕ್ರವರ್ತಿ ಅರ್ತಬೂನ್‌ಗೆ ಹಿಂದಿರುಗಿ ಮುಸ್ಲಿಮರ ಮಾತನ್ನು ಪ್ರಸ್ತುತಪಡಿಸಿದರು. ಅರ್ತಬೂನ್ ನಂಬಲು ನಿರಾಕರಿಸಿದನು ಮತ್ತು ಯುದ್ಧವಾಡಲು ನಿರ್ಧರಿಸಿದನು, ರಾತ್ರೋರಾತ್ರಿ ಆತನು ಮುಸ್ಲಿಮರ ಮೇಲೆ ದಾಳಿ ಮಾಡಿದನು. ಅರ್ತಬೂನ್‌ನ ಈ ಸೇನೆಯ ಸಂಖ್ಯೆ ಹನ್ನೆರಡು ಸಾವಿರ ಎಂದು ಹೇಳಲಾಗಿದೆ. ಈ ಯುದ್ಧದಲ್ಲಿ ಉತ್ತಮ ಸಂಖ್ಯೆಯ ಮುಸ್ಲಿಮರು ಹುತಾತ್ಮರಾದರು ಮತ್ತು ಒಂದು ಸಾವಿರ ರೋಮನ್ ಸೈನಿಕರು ಕೊಲ್ಲಲ್ಪಟ್ಟರು ಮತ್ತು ಮೂರು ಸಾವಿರ ಸೈನಿಕರನ್ನು ಸೆರೆಹಿಡಿಯಲಾಯಿತು ಮತ್ತು ಅರ್ತಬೂನ್ ಕ್ಷೇತ್ರದಿಂದ ಓಡಿಹೋದನು ಮತ್ತು ಕೆಲವರ ಪ್ರಕಾರ ಅದೇ ಯುದ್ಧದಲ್ಲಿ ಕೊಲ್ಲಲ್ಪಟ್ಟನು ಎಂದು ಹೇಳಿದ್ದಾರೆ. ಇಸ್ಕಂದರಿಯಾದವರೆಗೂ ಮುಸ್ಲಿಮರು ಅವನನ್ನು ಮತ್ತು ಅವನ ಸೈನ್ಯವನ್ನು ಸೋಲಿಸಿದರು. ಮುಸ್ಲಿಮರು ಬಿಲ್ಬಿಸ್‌ನಲ್ಲಿ ಒಂದು ತಿಂಗಳ ಕಾಲ ಇದ್ದರು ಎಂದು ಇತಿಹಾಸಕಾರರು ಒಪ್ಪುತ್ತಾರೆ. ಈ ಕಾಲದಲ್ಲಿ ಯುದ್ಧವು ಮುಂದುವರೆಯಿತು ಮತ್ತು ಕೊನೆಯಲ್ಲಿ ಮುಸ್ಲಿಮರು ವಿಜಯಶಾಲಿಯಾದರು ಆದರೆ ಈ ಯುದ್ಧವು ತೀವ್ರವಾಗಿದೆಯೇ ಅಥವಾ ಕಡಿಮೆಯಾಗಿದೆಯೇ ಎಂಬುದರ ಕುರಿತು ಅವರು ಭಿನ್ನಾಭಿಪ್ರಾಯ ಹೊಂದಿದ್ದರು.

(ಉಮರ್ ಬಿನ್ ಖತ್ತಾಬ್, ಅಸ್ಸಲಾಬಿ ಅನುವಾದಕ, ಪುಟ–757–758, ಅಲ್‌ಫುರ್‌ಖಾನ್ ಟ್ರಷ್ಟ್ ಖಾನ್ ಗಡ್ ಪಾಕಿಸ್ತಾನ) (ಉಮರ್ ಫಾರೂಖ್ ಆಝಮ್, ಮುಹಮ್ಮದ್ ಹುಸೈನ್ ಹೈಕಲ್ ಅನುವಾದಕ ಹಬೀಬ್ ಅಶ್‌ಅರಿ, ಪುಟ–564–565, ಇಸ್ಲಾಮಿ ಕುತುಬ್ ಖಾನ ಉರ್ದು ಬಜಾರ್ ಲಾಹೋರ್) (ಅಲ್‌ಇಕ್ತಿಫಾ ಬಿಮಾ ತಝ್‌ಮನ ಮಿನ್ ಮಗಾಝಿ... ಭಾಗ–2, ಪುಟ–346, ದಾರುಲ್ ಕುತುಬ್ ಇಲ್‌ಮಿಯ ಬೈರೂತ್

1420ಹಿ) (ಮುಜಮುಲ್ ಬಲದಾನ್, ಸಂಪುಟ-1, ಪುಟ-567, ಬಿಲ್ಬೀಸ್, ದಾರುಲ್ ಕುತುಬ್ ಇಲ್ಮಿಯ ಬೈರೂತ್) (ಅಟ್ಲಸ್ ಫತೂಹಾತೆ ಇಸ್ಲಾಮಿಯ, ಸಂಪುಟ-2, ಪುಟ-225, ದಾರುಸ್ಸಲಾಮ್ ರಿಯಾಝ್ 1428 ಹಿಜರಿ)

ಯುದ್ಧದ ಸಂಘರ್ಷದ ನಡುವೆ ಒಂದು ಘಟನೆ ನಡೆಯಿತು. ಅದು ಮುಸ್ಲಿಮರ ಬುದ್ಧಿ ಮತ್ತು ನೈತಿಕತೆಯ ಪುರಾವೆಯಾಗಿದೆ. ಅದೇನೆಂದರೆ, ಬಲ್‌ಬೀಸ್‌ನಲ್ಲಿ ಅಲ್ಲಾಹನು ಮುಸ್ಲಿಮರಿಗೆ ವಿಜಯ ನೀಡಿದಾಗ, ಆ ವೇಳೆ ಖಿಬ್ತಿಯರ ಸರದಾರ ಮಖೋಖಸಿನ ಮುದ್ದಿನ ಮಗಳಾದ ಅರ್ಮಾನೂಸ ಬಂಧಿಯಾದಳು. ಅವಳ ಹೆಸರು ಅರ್ಮಾನೂಸ ಎಂದಾಗಿತ್ತು. ಅವಳು ತಂದೆಯ ಮುದ್ದಿನ ಮಗಳಾಗಿದ್ದಳು. ಖುಸ್ತಂತೀನನ ಮಗನಾದ ಹಿರ್ಖಿಲ್‌ನೊಂದಿಗೆ ಅವಳ ಮದುವೆಯನ್ನು ಮಾಡಿಸಲು ಅವಳ ತಂದೆ ಬಯಸಿದ್ದರು. ಆದರೆ ಅವಳಿಗೆ ಆ ವಿವಾಹ ಇಷ್ಟವಿರಲಿಲ್ಲ. ಅವಳು ಸುತ್ತಾಡಲು ತನ್ನ ಸೇವಕಿಯೊಂದಿಗೆ ಬಲ್‌ಬೀಸಿಗೆ ಬಂದಿದ್ದಳು. ಹೀಗೆ ಅವಳು ಬಂಧಿಯಾದಾಗ ಹಝ್ರತ್ ಅಮ್ರ್ ಬಿನ್ ಆಸ್(ರ) ಎಲ್ಲ ಸಹಾಬರನ್ನು ಕರೆದು ಒಂದು ಸಭೆ ಮಾಡಿದರು. ಅವರು ಪವಿತ್ರ ಖುರ್‌ಆನಿನ **"ಹಲ್ ಜಝಾಉಲ್ ಇಹ್‌ಸಾನ್ ಇಲ್ಲಲ್ ಇಹ್‌ಸಾನ್"** ಎಂದರೆ, ಔದಾರ್ಯಕ್ಕೆ ಬದಲಾಗಿ ಔದಾರ್ಯ ಮಾಡಬೇಕಲ್ಲವೇ? ಎಂಬ ವಚನವನ್ನು ಓದಿ ಹೇಳಿದ ನಂತರ ಹೀಗೆ ಹೇಳಿದರು: ಮಖೋಖಸನು ಹಝ್ರತ್ ಪೈಗಂಬರ್‌ರಿಗೆ(ಸ) ಕೊಡುಗೆಯನ್ನು ಕಳುಹಿಸಿದ್ದರು. ಆದ ಕಾರಣ **"ಹಲ್ ಜಝಾಉಲ್ ಇಹ್‌ಸಾನ್ ಇಲ್ಲಲ್ ಇಹ್‌ಸಾನ್"** ಎಂಬ ಆಯತ್ತಿನ ಆಧಾರದಲ್ಲಿ ಹಝ್ರತ್ ಅಮ್ರ್ ಬಿನ್ ಆಸ್(ರ) ಮಖೋಖಸಿನ ಮಗಳನ್ನು ಅವಳ ಎಲ್ಲ ಆಭರಣಗಳು ಮತ್ತು ಸೇವಕರೊಂದಿಗೆ ಮರಳಿ ಕಳುಹಿಸಬೇಕೆಂಬುದು ಆಗಿದೆ ನನ್ನ ಅಭಿಪ್ರಾಯ. ಹಝ್ರತ್ ಅಮ್ರ್ ಬಿನ್ ಆಸ್‌ರ(ರ) ತೀರ್ಮಾನವನ್ನು ಎಲ್ಲ ಸಹಾಬರು ಸರಿಯೆಂದು ಹೇಳಿದರು. ಅನಂತರ ಹಝ್ರತ್ ಅಮ್ರ್ ಬಿನ್ ಆಸ್(ರ) ಮಖೋಖಸಿನ ಮಗಳನ್ನು ಅವಳ ಎಲ್ಲ ಆಭರಣಗಳು ಮತ್ತು ಸೇವಕರೊಂದಿಗೆ ಅತ್ಯಂತ ಗೌರವಾದರದಿಂದ ಮರಳಿ ಕಳುಹಿಸಿದರು. ಮರಳಿ ಹೋಗುವಾಗ ಅವಳ ಸೇವಕಿ ಅರ್ಮಾನೋಸಿನೊಡನೆ ಹೀಗೆ ಹೇಳಿದಳು: ನಾವು ಎಲ್ಲ ಕಡೆಯಿಂದಲೂ ಅರೇಬಿಯರಿಂದ ಸುತ್ತುವರೆಯಲ್ಪಟ್ಟಿದ್ದೇವೆ. ಅರ್ಮಾನೋಸ್ ಹೇಳಿದಳು: ಅರೇಬಿಯರ ಡೇರೆಯಲ್ಲಿ ನನ್ನ ಜೀವ ಮತ್ತು ಮಾನ ಸುರಕ್ಷಿತವೆಂದು ಭಾವಿಸುತ್ತೇನೆ. ಆದರೆ ನನ್ನ ತಂದೆಯ ಕೋಟೆಯಲ್ಲಿ ನನ್ನ ಜೀವ ಸುರಕ್ಷಿತವೆಂದು ನನಗೆ ಅನಿಸುವುದಿಲ್ಲ. ಅನಂತರ ಅವಳು ತನ್ನ ತಂದೆಯ ಬಳಿಗೆ ಹೋದಾಗ, ಅವಳೊಡನೆ ಮುಸ್ಲಿಮರು ತೋರಿಸಿದ ವರ್ತನೆಯಿಂದ ಅವಳ ತಂದೆ ಸಂತೋಷಗೊಂಡರು. (ಸಯ್ಯದುನಾ ಉಮರ್ ಬಿನ್ ಖತ್ತಾಬ್, ಅಲಿ ಮುಹಮ್ಮದ್ ಸಲಾಬಿ, ಉರ್ದು ಅನುವಾದ, ಪುಟ-758-759, ಅಲ್‌ಫುರ್‌ಖಾನ್ ಟ್ರಸ್ಟ್ ಖಾನ್ ಗಡ್ ಪಾಕಿಸ್ತಾನ್)

ಅಮ್‌ದನೀನ್ ಸಮೀಪಕ್ಕೆ ಹೋಗಿ ಮುಸ್ಲಿಮರು ತಂಗಿದರು. ರೋಮನರು ಬಾಬಿಲೋನಿನ ಕೋಟೆಗೆ ತಮ್ಮ ಅತ್ಯುತ್ತಮ ಸೈನ್ಯವನ್ನು ತಲುಪಿಸಿತ್ತು ಮತ್ತು ಅಮ್‌ದನೀನ ಕೋಟೆಯನ್ನು ಬಹಳ ಉತ್ತಮ ರೀತಿಯಲ್ಲಿ ಸುದೃಢಗೊಳಿಸಿ ಯುದ್ಧಕ್ಕಾಗಿ ತಯಾರಾಗಿದ್ದರು. ಅರೇಬಿಯರೊಂದಿಗೆ ತೆರೆದ ಮೈದಾನದಲ್ಲಿ ಯುದ್ಧ ಮಾಡುವುದು ಅವರಿಗೆ ಸಾಧ್ಯವಾದ ಸಂಗತಿಯಲ್ಲವೆಂದು ಅವರಿಗೆ ಗೊತ್ತಿತ್ತು. ಅಮ್‌ದನೀನ ಸೈನಿಕರು ಕೆಲವೊಮ್ಮೆ ಹೊರಗೆ ಬಂದು ವಿಫಲ ಹೋರಾಟದ ನಂತರ ಮರಳಿ ಹೋಗುತ್ತಿದ್ದರು. ಅನೇಕ ವಾರಗಳು ಹೀಗೆಯೇ ಕಳೆದುವು.

(ಹಝ್ರತ್ ಉಮರ್ ಫಾರೂಖ್ ಆಝುಮ್(ರ), ಮುಹಮ್ಮದ್ ಹುಸೈನ್ ಹೈಕಲ್ ಅನುವಾದಕ ಹಬೀಬ್ ಅಶ್‌ಅರಿ, ಪುಟ-567-570, ಇಸ್ಲಾಮಿ ಕುತುಬ್ ಖಾನ, ಉರ್ದು ಬಜಾರ್ ಲಾಹೋರ್)

ಇದೇ ವೇಳೆ, ಮುಸ್ಲಿಂ ಸೈನ್ಯದ ಸಹಾಯಕ್ಕಾಗಿ ಹಝ್ರತ್ ಉಮರ್(ರ) ನಾಲ್ಕು ಸಾವಿರ ಸಿಪಾಯಿಗಳನ್ನು ಕಳುಹಿಸುವುದಾಗಿ ಸುದ್ದಿ ಲಭಿಸಿತು. ಇದರಿಂದ ಮುಸ್ಲಿಮರ ಧೈರ್ಯ ಮತ್ತು ಶಕ್ತಿ ವರ್ಧಿಸಿತು. ಮುಸ್ಲಿಂ ಸೈನ್ಯದ ಸಹಾಯಕ್ಕಾಗಿ ಹಝ್ರತ್ ಉಮರ್(ರ) ನಾಲ್ಕು ಸಾವಿರ ಸಿಪಾಯಿಗಳನ್ನು ಕಳುಹಿಸಿದರು. ಪ್ರತಿ ಸಾವಿರಕ್ಕೆ ಒಬ್ಬ ಅಮೀರರನ್ನು ನಿಶ್ಚಯಿಸಿದರು. ಅವರು ಹೆಸರುಗಳು ಹೀಗಿವೆ: ಹಝ್ರತ್ ಝುಬೇರ್ ಬಿನ್ ಅವಾಂ, ಹಝ್ರತ್ ಮಿಖ್‌ದಾದ್ ಬಿನ್ ಅಸ್‌ವದ್, ಹಝ್ರತ್ ಉಬಾದ ಬಿನ್ ಸಾಮಿತ್ ಮತ್ತು ಹಝ್ರತ್ ಮಸ್ಲಿಮ ಬಿನ್ ಮಖ್ಲದ್. ಒಂದು ಹೇಳಿಕೆಯ ಪ್ರಕಾರ ಹಝ್ರತ್ ಮಸ್ಲಿಮ ಬಿನ್ ಮಖ್ಲದ್‌ನ ಬದಲಾಗಿ ಖಾರಿಜ ಬಿನ್ ಹುಧೈಫ ಅಮೀರಾಗಿದ್ದರು. ಈ ಸಹಾಯಕ ಸೈನ್ಯವನ್ನು ಕಳುಹಿಸುವುದರೊಂದಿಗೆ ಹಝ್ರತ್ ಅಮ್ರ್ ಬಿನ್ ಆಸ್‌ರಿಗೆ ಹಝ್ರತ್ ಉಮರ್(ರ) ಹೀಗೆ ಪತ್ರ ಬರೆದರು: "ಈಗ ನಿಮ್ಮೊಂದಿಗೆ 12 ಸಾವಿರ ಯೋಧರ ಸೈನ್ಯವಿದೆ. ಕಡಿಮೆ ಸಂಖ್ಯೆಯಲ್ಲಿರುವ ಕಾರಣದಿಂದ ಅದು ಎಂದಿಗೂ ಪರಾಜಯಗೊಳ್ಳದು." ರೋಮಿನ ಸಂಗ್ರಾಮಿಗಳು ಖಿಬ್ತಿಯರೊಂದಿಗೆ ಮುಸ್ಲಿಮರನ್ನು ಎದುರಿಸಲು ಹೊರಟರು. ಉಭಯ ಸೈನ್ಯಗಳ ನಡುವೆ ಘೋರ ಯುದ್ಧ ನಡೆಯಿತು. ಯುದ್ಧತಂತ್ರ ಅನುಸಾರ ಹಝ್ರತ್ ಅಮ್ರ್ ಬಿನ್ ಆಸ್(ರ) ತನ್ನ ಸೈನ್ಯವನ್ನು ಮೂರು ಭಾಗಗಳಾಗಿ ವಿಂಗಡಿಸಿದರು. ಒಂದು ಭಾಗವನ್ನು ಅಹ್ಮರ್ ಪರ್ವತದ ಸಮೀಪ ಒಂದು ಜಾಗದಲ್ಲಿ ನಿಲ್ಲಿಸಿದರು. ಮತ್ತೊಂದು ಭಾಗವನ್ನು ಅಮ್‌ದನೀನ ಸಮೀಪ ನೈಲು ನದಿಯ ತೀರದ ಒಂದು ಜಾಗದಲ್ಲಿ ನಿಲ್ಲಿಸಿದರು. ಉಳಿದ ಭಾಗದ ಜೊತೆಗೆ ಶತ್ರುಗಳನ್ನು ಎದುರಿಸಲು ಹೊರಟರು. ಉಭಯ ಸೈನ್ಯಗಳ ನಡುವೆ ತೀವ್ರ ಯುದ್ಧ ನಡೆಯುತ್ತಿದ್ದಾಗ, ಅಹ್ಮರ್ ಪರ್ವತದ ಸಮೀಪ ಅಡಗಿದ್ದ ಸೈನ್ಯ ಹೊರಗೆ ಬಂದು ಹಲ್ಲೆ ನಡೆಸಿತು. ಇದರಿಂದ ಅವರ ಸೈನ್ಯ ಅಸ್ತವ್ಯಸ್ತಗೊಂಡಿತು. ಅವರು ಅಮ್‌ದನೀನ ಕಡೆಗೆ ಪರಾರಿಯಾದರು. ಅಲ್ಲಿ ಮುಸ್ಲಿಂ ಸೈನ್ಯದ ಮತ್ತೊಂದು ಭಾಗ ತಯಾರಾಗಿತ್ತು. ಅವರು ಶತ್ರುಗಳ ಮಾರ್ಗವನ್ನು ತಡೆದರು. ಹೀಗೆ ರೋಮ್ ಸೈನ್ಯವು ಮುಸ್ಲಿಮರ ಮೂರು ಸೈನ್ಯಗಳ ನಡುವೆ ಸಿಲುಕಿತು ಮತ್ತು ಶತ್ರುಗಳು ಪರಾಜಿತರಾದರು. (ಸಯ್ಯದುನಾ ಉಮರ್ ಬಿನ್ ಖತ್ತಾಬ್, ಅಲಿ ಮುಹಮ್ಮದ್ ಸಲಾಬಿ, ಉರ್ದು ಅನುವಾದ, ಪುಟ-759, ಅಲ್‌ಫುರ್‌ಖಾನ್ ಟ್ರಸ್ಟ್ ಖಾನ್ ಗಡ್ ಪಾಕಿಸ್ತಾನ್)

ವಿವಿಧ ವಿಜಯಗಳ ಬಗ್ಗೆ ಪ್ರಸ್ತಾಪವಿದೆ. ಅಮ್‌ದನೀನ ವಿಜಯದ ನಂತರ ಮೊತ್ತಮೊದಲು ಫಯೂಮಿನ ಪೂರ್ತಿ ರಾಜ್ಯದ ಮೇಲೆ ಮತ್ತು ಐನುಶ್ಶಮ್ಸ್‌ನಲ್ಲಿ ಮುಸ್ಲಿಮರು ರೋಮನರ ಮೇಲೆ ವಿಜಯ ಸಾಧಿಸಿದರು. (ಹಝ್ರತ್ ಉಮರ್ ಫಾರೂಖ್ ಆಝುಮ್(ರ), ಮುಹಮ್ಮದ್ ಹುಸೈನ್ ಹೈಕಲ್ ಅನುವಾದಕ ಹಬೀಬ್ ಅಶ್‌ಅರಿ, ಪುಟ-571-572, ಇಸ್ಲಾಮಿ ಕುತುಬ್ ಖಾನ, ಉರ್ದು ಬಜಾರ್ ಲಾಹೋರ್)

ನಂತರ ಐನ್ ಅಲ್-ಶಮ್ಸ್‌ನಲ್ಲಿ ಮುಸ್ಲಿಮರು ರೋಮನ್ನರೊಂದಿಗೆ ಘರ್ಷಣೆ ಮಾಡಿದರು. ಇದಕ್ಕು ಮುಂಚೆ 8000 ಮುಜಾಹಿದೀನ್‌ಗಳ ಸೈನ್ಯವು ಹಝ್ರತ್ ಅಮ್ರ್ ಇಬ್ನ್ ಆಸ್(ರ) ಅವರ ಕಡೆಯಿಂದ ಬೆಂಬಲಿಗರಾಗಿ ಬಂದಿತು. ಈ ಯುದ್ಧದಲ್ಲಿ ಮುಸ್ಲಿಮರೂ ವಿಜಯಶಾಲಿಯಾದರು. ನಂತರ ಮುಸ್ಲಿಮರು ಸಂಪೂರ್ಣ ಫಯೂಮ್ ಪ್ರಾಂತ್ಯವನ್ನು ವಶಪಡಿಸಿಕೊಂಡರು. ಮುಸ್ಲಿಂ ಸೇನೆಯ ಒಂದು ವಿಭಾಗವು ಮನುಫಿಯಾ ಪ್ರಾಂತ್ಯದ ಎರಡು ನಗರಗಳಾದ ಅಸ್‌ರೀಬ್ ಮತ್ತು ಮನೂಫ್‌ನ ಮೇಲೆ ವಿಜಯ ಸಾಧಿಸಿದರು. (ಹಝ್ರತ್ ಉಮರ್ ಫಾರೂಖ್ ಆಝುಮ್(ರ), ಮುಹಮ್ಮದ್ ಹುಸೈನ್ ಹೈಕಲ್ ಅನುವಾದಕ ಹಬೀಬ್ ಅಶ್‌ಅರಿ, ಪುಟ-573, 579, ಇಸ್ಲಾಮಿ ಕುತುಬ್ ಖಾನ, ಉರ್ದು ಬಜಾರ್ ಲಾಹೋರ್) (ಅಟ್ಲಸ್ ಫತೂಹಾತೆ ಇಸ್ಲಾಮಿಯ, ಸಂಪುಟ-2, ಪುಟ-229, ದಾರುಸ್ಸಲಾಮ್ ಅರ್ರಿಯಾಝ್ 1428 ಹಿಜರಿ)

ಬಾಬಿಲೋನ್ ಅಥವಾ ಫಿಸ್‌ತಾತ್‌ನಲ್ಲಿ ಏಳು ತಿಂಗಳ ಮುತ್ತಿಗೆಯ ನಂತರ ಒಳಗೆ ಹೋಗಿ ಯುದ್ಧ ಮಾಡುತ್ತಾ ಕೋಟೆಯ ಮೇಲೆ ಜಯ ಸಾಧಿಸಲಾಯಿತು. ಫಿಸ್‌ತಾತ್ ಎಂದು ಕರೆಯಲ್ಪಡಲು ಕಾರಣವೇನೆಂದರೆ, ಫಿಸ್‌ತಾತ್ ಎಂದು ಅರಬಿ ಭಾಷೆಯಲ್ಲಿ ಡೇರೆಗೆ ಹೇಳಲಾಗುತ್ತದೆ. ಕೋಟೆಯ ಮೇಲೆ ವಿಜಯ ಸಾಧಿಸಿದ ನಂತರ ಅಲ್ಲಿಂದ ಹೊರಡಲು ಹಝ್ರತ್ ಅಮ್ರ್ ಬಿನ್ ಆದೇಶಿಸಿದರು. ಅಲ್ಲಿ ಒಂದು ಡೇರೆಯಲ್ಲಿ ಪಾರಿವಾಳ ಗೂಡು ಕಟ್ಟಿತ್ತು. ಅದನ್ನು ಕಂಡಾಗ, ಆ ಡೇರೆಯನ್ನು ಅಲ್ಲೇ ಬಿಟ್ಟುಬಿಡಲು ಅವರು ಆದೇಶಿಸಿದರು. ಅಲೆಕ್ಸಾಂಡ್ರಿಯದಿಂದ ಮರಳಿಬಂದು ಆ ಹಝ್ರತ್ ಅಮ್ರ್ ಅಲ್ಲಿ ಪಟ್ಟಣವನ್ನು ನೆಲೆಸಿದರು. ಆದ್ದರಿಂದ ಈ ಪಟ್ಟಣ ಫಿಸ್‌ತಾತ್ ಎಂಬ ಹೆಸರಿನಿಂದ ಪ್ರಸಿದ್ಧವಾಯಿತು. (ಅಲ್‌ಫಾರೂಖ್, ಶಿಬ್ಲಿ ನುಮಾನಿ, ಪುಟ-150-151, ದಾರುಲ್ ಇಶಾಅತ್ ಕರಾಚಿ 2004)

ಕೋಟೆಗೆ ಆರು ಸಾವಿರದಷ್ಟು ಕಾವಲುಗಾರರು ಇದ್ದರು. ಅವರು ಆಯುಧಧಾರಿಗಳಾಗಿದ್ದರು. ಬಾಬಿಲೋನ್ ಕೋಟೆಗೆ ಹಝ್ರತ್ ಅಮ್ರ್ ಮುತ್ತಿಗೆ ಹಾಕಿದರು. ಅಲೆಕ್ಸಾಂಡ್ರಿಯದ ನಂತರ ಅದು ಸುದೃಢವಾದ ಕೋಟೆಯಾಗಿತ್ತು. ಮುಸ್ಲಿಮರ ಬಳಿ ಆವಶ್ಯಕ ಆಯುಧಗಳು ಇರಲಿಲ್ಲ. ಅವರು ಅದಕ್ಕಾಗಿ ತಯಾರಾಗಿರಲಿಲ್ಲ. (ಸೀರತ್ ಉಮರ್ ಫಾರೂಖ್(ರ), ಮುಹಮ್ಮದ್ ರಝಾ, ಪುಟ-264-265, ಮಕ್ತಬ ಇಸ್ಲಾಮಿಯ 2010)

ಅದನ್ನು ಮುತ್ತಿಗೆ ಮಾಡಲು ಹಝ್ರತ್ ಅಮ್ರ್ ಮೊದಲು ತಯಾರಿ ಮಾಡಿದರು. ಈಜಿಪ್ಟಿನ ಅಧಿಕಾರಿಯಾಗಿದ್ದ ಮಖೋಖಸನು ಹಝ್ರತ್ ಅಮ್ರ್ ಬಿನ್ ಆಸ್‌ರಿಗೆ ಮುಂಚಿತವಾಗಿಯೇ ಕೋಟೆಯೊಳಗೆ ಪ್ರವೇಶಿಸಿದ್ದನು. ಅವನು ಅಲ್ಲಿ ಯುದ್ಧದ ತಯಾರಿ ಮಾಡುತ್ತಿದ್ದನು. ಕುದುರೆಯಲ್ಲಿ ಸವಾರನಾಗಿ ಹಝ್ರತ್ ಝುಬೇರ್ ಕೋಟೆಯ ನಾಲ್ಕೂ ಕಡೆ ಸುತ್ತಿದ್ದರು. ಆವಶ್ಯವಿದ್ದ ಸ್ಥಳಗಳಲ್ಲಿ ಸರಿಯಾದ ಸಂಖ್ಯೆಯಲ್ಲಿ ಸವಾರರನ್ನು ಮತ್ತು ಸಿಪಾಯಿಗಳನ್ನು ನಿಶ್ಚಯಿಸಿದರು. ಈ ಮುತ್ತಿಗೆ ನಿರಂತರ ಏಳು

ತಿಂಗಳ ತನಕ ಜಾರಿಯಲ್ಲಿತ್ತು. (ಅಲ್‌ಫಾರೂಖ್, ಶಿಬ್ಲಿ ನುಮಾನಿ, ಪುಟ-150, ದಾರುಲ್ ಇಶಾಅತ್ ಕರಾಚಿ 2004)

ಈ ನಡುವೆ ಮಖೋಖಸ್ ಸಂಧಾನ ಮಾಡಲು ಮತ್ತು ಬೆದರಿಕೆ ಹಾಕಲಿಕ್ಕಾಗಿ ತನ್ನ ದೂತರನ್ನು ಹಝ್ರತ್ ಅಮ್ರ್ ಬಿನ್ ಆಸ್‌ರ ಬಳಿಗೆ ಕಳುಹಿಸಿದರು. ಹಝ್ರತ್ ಉಬಾದ ಬಿನ್ ಸಾಮಿತ್‌ರನ್ನು ಹಝ್ರತ್ ಅಮ್ರ್ ಬಿನ್ ಆಸ್ ಕಳುಹಿಸಿದರು. ಸಂಧಾನಕ್ಕೆ ಕೇವಲ ಮೂರು ಶರತ್ತುಗಳನ್ನು ಹಾಕಿದರು. ಇಸ್ಲಾಂ ಸ್ವೀಕರಿಸು, ಜಿಝ್ಯ ಕೊಡು ಅಥವಾ ಯುದ್ಧ ನಡೆಯುವುದು. ಇದಲ್ಲದೆ ಬೇರೆ ಮಾತಿನ ಮೇಲೆ ಸಂಧಾನ ನಡೆಯದು. ಮಖೋಖಸ್‌ನು ಜಿಝ್ಯ ನೀಡಲು ಒಪ್ಪಿದನು. ಈ ಸಂಬಂಧವಾಗಿ ಹಿರ್ಖಲಿನ ಅನುಮತಿ ಪಡೆಯಲು ಸ್ವತಃ ಹಿರ್ಖಲಿನ ಬಳಿಗೆ ಹೋದನು. ಆದರೆ ಹಿರ್ಖಲ್ ಅದನ್ನು ಒಪ್ಪಲಿಲ್ಲ. ಮಾತ್ರವಲ್ಲ ಮಖೋಖಸ್‌ನೊಡನೆ ಕಠಿಣವಾಗಿ ಕೋಪಗೊಂಡು ಅವನಿಗೆ ಶಿಕ್ಷೆ ನೀಡುತ್ತಾ ದೇಶದಿಂದ ಹೊರಗೆ ಅಟ್ಟಿದರು. (ಸಯ್ಯದುನಾ ಹಝ್ರತ್ ಉಮರ್ ಬಿನ್ ಖತ್ತಾಬ್(ರ) ಶಖ್ಸಿಯ್ಯತ್ ಔರ್ ಕಾನಾಮೆ, ಅಲಿ ಅಸ್ಲಾಬಿ, ಉರ್ದು ಅನುವಾದ, ಪುಟ-760, ಅಲ್‌ಫುರ್ಖಾನ್ ಟ್ರಸ್ಟ್ ಖಾನ್‌ಗಡ್ ಪಾಕಿಸ್ತಾನ್) (ಸಯ್ಯದುನ ಹಝ್ರತ್ ಉಮರ್ ಫಾರೂಖ್ ಆಝಮ್(ರ), ಮುಹಮ್ಮದ್ ಹುಸೈನ್ ಹೈಕಲ್ ಅನುವಾದಕ ಹಬೀಬ್ ಅಶ್‌ಅರಿ, ಪುಟ-582,584,590, ಇಸ್ಲಾಮಿ ಕುತುಬ್ ಖಾನ ಉರ್ದು ಬಝಾರ್ ಲಾಹೋರ್)

ಬಾಬಿಲೋನ್ ಮೇಲೆ ವಿಜಯ ಸಾಧಿಸುವುದು ತಡವಾಗುವುದನ್ನು ಕಂಡು ಹಝ್ರತ್ ಝುಬೇರ್ ಬಿನ್ ಅವಾಂ ಹೇಳಿದರು: ಈಗ ನಾನು ನನ್ನ ಜೀವವನ್ನು ಅಲ್ಲಾಹನ ಮಾರ್ಗದಲ್ಲಿ ತ್ಯಾಗಮಾಡಲು ಹೋಗುವೆನು. ಅಲ್ಲಾಹನು ಇದರೊಂದಿಗೆ ಮುಸ್ಲಿಮರಿಗೆ ವಿಜಯ ನೀಡುವನು ಎಂದು ನಾನು ಪ್ರತೀಕ್ಷಿಸುತ್ತೇನೆ. ಹೀಗೆ ಹೇಳುತ್ತಾ ತೆರೆದ ಖಡ್ಗವನ್ನು ಹಿಡಿದು, ಏಣಿ ಹಾಕಿ ಕೋಟೆಯ ಗೋಡೆಯನ್ನು ಹತ್ತಿದರು. ಕೆಲವು ಸಹಾಬಿಯರು ಸಹ ಅವರ ಜೊತೆಗೆ ಕೋಟೆಯ ಗೋಡೆಯನ್ನು ಹತ್ತಿದರು. ಜೊತೆಗಿದ್ದವರು ಅಲ್ಲಾಹು ಅಕ್ಬರ್ ಎಂದು ಹೇಳಿದರು. ಆಗ ಸೈನಿಕರೆಲ್ಲರೂ ತಕ್ಬೀರ್ ಹೇಳಿದರು. ಅದರಿಂದ ಒಂದು ನಡುಕವುಂಟಾಯಿತು. ಮುಸ್ಲಿಮರು ಕೋಟೆಯ ಒಳಗೆ ಪ್ರವೇಶಿಸಿರುವರು ಎಂದು ಭಾವಿಸಿ ಕ್ರೈಸ್ತರು ಹುಚ್ಚರಂತೆ ಓಡಿದರು. ಹಝ್ರತ್ ಝುಬೇರ್(ರ) ಗೋಡೆಯಿಂದ ಇಳಿದು ಕೋಟೆಯ ಬಾಗಿಲನ್ನು ತೆರೆದರು. ಪೂರ್ತಿ ಸೈನ್ಯ ಒಳಗೆ ನುಗ್ಗಿತು. ಹೋರಾಡುತ್ತಾ ಕೋಟೆಯನ್ನು ವಶಪಡಿಸಿದರು. (ಸಯ್ಯದುನಾ ಹಝ್ರತ್ ಉಮರ್ ಬಿನ್ ಖತ್ತಾಬ್(ರ) ಶಖ್ಸಿಯ್ಯತ್ ಔರ್ ಕಾನಾಮೆ, ಅಲಿ ಅಸ್ಲಾಬಿ, ಉರ್ದು ಅನುವಾದ, ಪುಟ-760, ಅಲ್‌ಫುರ್ಖಾನ್ ಟ್ರಸ್ಟ್ ಖಾನ್‌ಗಡ್ ಪಾಕಿಸ್ತಾನ್) (ಅಲ್‌ಫಾರೂಖ್, ಶಿಬ್ಲಿ ನುಮಾನಿ, ಪುಟ-150, ದಾರುಲ್ ಇಶಾಅತ್ ಕರಾಚಿ 2004)

ಫಿಸ್‌ತಾತ್ ವಿಜಯದ ನಂತರ ಅಲೆಕ್ಸಾಂಡ್ರಿಯವನ್ನು ಜಯಿಸಲು ಹಝ್ರತ್ ಉಮರ್(ರ) ಅನುಮತಿ ಕೊಟ್ಟರು. ಅಲೆಕ್ಸಾಂಡ್ರಿಯದ ಮೇಲೆ ಏಳು ತಿಂಗಳ ತನಕ ಮುತ್ತಿಗೆ ಮುಂದುವರೆಯಿತು. ಹಝ್ರತ್ ಉಮರ್(ರ) ಚಿಂತಿತರಾದರು ಮತ್ತು ಹೀಗೆ ಪತ್ರ ಬರೆದರು: ಬಹುಶಃ ನೀವು ಅಲ್ಲಿದ್ದುಕೊಂಡು ಐಷಾರಾಮ ಜೀವಿತಕ್ಕೆ ಒಳಗಾಗಿದ್ದೀರಿ, ಇಲ್ಲದಿದ್ದರೆ ವಿಜಯ ಸಾಧಿಸಲು ಇಷ್ಟು ತಡವಾಗುತ್ತಿರಲಿಲ್ಲ. ಈ ಸಂದೇಶ ತಲುಪಿದ ಕೂಡಲೇ ಮುಸ್ಲಿಮರನ್ನು ಜಿಹಾದ್ ಮಾಡಲು ಹುರಿದುಂಬಿಸಿ ಹಲ್ಲೆ ಮಾಡಿರಿ. ಹಝ್ರತ್ ಉಮರರ(ಸ) ಈ ಪತ್ರವನ್ನು ಓದಿಹೇಳಿದ ನಂತರ ಹಝ್ರತ್ ಅಮ್ರ್ ಬಿನ್ ಆಸ್(ರ) ಹಝ್ರತ್ ಉಬಾದ ಬಿನ್ ಸಾಮಿತ್‌ರನ್ನು ಕರೆದು ಧ್ವಜವನ್ನು ಅವರಿಗೆ ಒಪ್ಪಿಸಿದರು. ಮುಸ್ಲಿಮರು ಅತ್ಯಂತ ತೀವ್ರ ದಾಳಿ ನಡೆಸಿದರು ಮತ್ತು ಪಟ್ಟಣವನ್ನು ಜಯಿಸಿದರು. ಅದೇ ಸಮಯ ಹಝ್ರತ್ ಅಮ್ರ್(ರ) ಮದೀನಕ್ಕೆ ದೂತನನ್ನು ಕಳುಹಿಸುತ್ತಾ ಅವನೊಡನೆ ಹೀಗೆ ಹೇಳಿದರು: ಎಷ್ಟು ಬೇಗನೇ ಹೋಗಲು ನಿನಗೆ ಸಾಧ್ಯವೋ ಅಷ್ಟು ಬೇಗನೇ ಹೋಗಿ ಅಮೀರಲ್ ಮೂಅ್‌ಮಿನೀನ್‌ಗೆ ಸಂತೋಷ ವಾರ್ತೆ ತಿಳಿಸು. ದೂತನು ಮಧ್ಯಾಹ್ನ ಸಮಯದಲ್ಲಿ ಮದೀನಕ್ಕೆ ತಲುಪಿದನು. ಅದು ವಿಶ್ರಾಂತಿ ಮಾಡುವ ಸಮಯವೆಂಬ ಭಾವನೆಯಿಂದ ಅವನು ಮೊದಲು ಮಸ್ಜಿದ್ ನಬವಿಯ ಕಡೆಗೆ ಹೋದನು. ಆಕಸ್ಮಿಕವಾಗಿ ಹಝ್ರತ್ ಉಮರರ(ರ) ಸೇವಕಿ ಅಲ್ಲಿಗೆ ಬಂದಳು. ಅವಳು ತಕ್ಷಣವೇ ಹೋಗಿ ಅಮೀರುಲ್ ಮೂಅ್‌ಮಿನೀನಿಗೆ ತಿಳಿಸಿದಳು. ವಿಜಯದ ಸುದ್ದಿ ಕೇಳಿ ಹಝ್ರತ್ ಉಮರ್(ರ) ನೆಲದಲ್ಲಿ ಸಜದ ಮಾಡುತ್ತಾ ಅಲ್ಲಾಹನಿಗೆ ಕೃತಜ್ಞತೆ ಸಲ್ಲಿಸಿದರು. ಅನಂತರ ಹಝ್ರತ್ ಉಮರ್(ರ) ದೂತನೊಡನೆ ಹೀಗೆ ಕೇಳಿದರು: ನೀನು ನೇರವಾಗಿ ನನ್ನ ಬಳಿಗೆ ಏಕೆ ಬರಲಿಲ್ಲ. ಅವನು ಹೇಳಿದನು: ನೀವು ವಿಶ್ರಾಂತಿ ಪಡೆಯುತ್ತಿರಬಹುದು ಎಂದು ನಾನು ಯೋಚಿಸಿದೆ. ಹಝ್ರತ್ ಉಮರ್(ರ) ಹೇಳಿದರು: ನೀನು ನನ್ನ ಬಗ್ಗೆ ಏಕೆ ಹೀಗೆ ಯೋಚಿಸಿದೆ. ನಾನು ಹಗಲು ಸಮಯದಲ್ಲಿ ನಿದ್ದೆ ಮಾಡಿದರೆ, ಖಿಲಾಫತಿನ ಹೊಣೆಗಾರಿಕೆಯನ್ನು ವಹಿಸಲು ಯಾರಿದ್ದಾರೆ?

ಅಲೆಕ್ಸಾಂಡ್ರಿಯದ ವಿಜಯದೊಂದಿಗೆ ಪೂರ್ತಿ ಈಜಿಪ್ಟಿನ ಮೇಲೆ ವಿಜಯು ಸಾಧಿಸಲಾಯಿತು. ಈ ಯುದ್ಧಗಳಲ್ಲಿ ಅನೇಕರನ್ನು ಬಂಧಿಸಲಾಯಿತು. ಎಲ್ಲ ಕೈದಿಗಳ ಕುರಿತು ಹಝ್ರತ್ ಅಮ್ರ್‌ರಿಗೆ ಹಝ್ರತ್ ಉಮರ್(ರ) ಪತ್ರ ಮೂಲಕ ಹೀಗೆ ನಿರ್ದೇಶನ ನೀಡಿದರು: ಎಲ್ಲ ಕೈದಿಗಳನ್ನು ಕರೆದು, ಅವರಿಗೆ ಮುಸ್ಲಿಮರಾಗಲು ಅಥವಾ ತಮ್ಮ ಧರ್ಮದಲ್ಲಿ ನೆಲೆನಿಲ್ಲಲು ಅವಕಾಶವಿದೆ ಎಂದು ಹೇಳಿರಿ. ಹಝ್ರತ್ ಉಮರ್(ರ)ರವರ ಈ ಪ್ರಸ್ತಾವನೆ ತಿಳಿಸಿದಾಗ ಅನೇಕ ಖೈದಿಗಳು ಇಸ್ಲಾಮ್ ಧರ್ಮವನ್ನು ಸ್ವೀಕರಿಸಿದರು ಮತ್ತು ಅನೇಕ ಖೈದಿಗಳು ತಮ್ಮ ಧರ್ಮದ ಮೇಲೆಯೇ ನೆಲೆನಿಂತಿದ್ದರು. (ಅಲ್‌ಫಾರೂಖ್, ಶಿಬ್ಲಿ ನುಮಾನಿ, ಪುಟ-162-165, ದಾರುಲ್ ಇಶಾಅತ್ ಕರಾಚಿ 1991) (ಸಯ್ಯದುನಾ ಉಮರ್ ಬಿನ್ ಖತ್ತಾಬ್(ರ), ಅಸ್ಸಲಾಬಿ ಉರ್ದು ಅನುವಾದ, ಪುಟ-760-764, ಅಲ್‌ಫುರ್‌ಖಾನ್ ಟ್ರಸ್ಟ್ ಖಾನ್ ಗಡ್ ಪಾಕಿಸ್ತಾನ್)

ಅಲೆಕ್ಸಾಂಡ್ರಿಯದ ವಿಜಯಕ್ಕೆ ಸಂಬಂಧಿಸಿ, ಹಝ್ರತ್ ಉಮರರ(ಸ) ಆದೇಶದ ಪ್ರಕಾರ ಅಲೆಕ್ಸಾಂಡ್ರಿಯದ ಲೈಬ್ರರಿ ಆರು ತಿಂಗಳ ತನಕ ಬೆಂಕಿಗೆ ಆಹುತಿಯಾಯಿತು ಎಂದು ಹೇಳಿ ವಿರೋಧಿಗಳು ವಿಶೇಷವಾಗಿ ಕ್ರೈಸ್ತ ಲೇಖಕರು ಆಕ್ಷೇಪಿಸುತ್ತಾ ಮುಸ್ಲಿಮರು ಅರಿವು ಮತ್ತು ಬುದ್ಧಿಯ ವಿರೋಧಿಗಳಾಗಿದ್ದರು ಎಂಬ ಭಾವನೆಯನ್ನು ಉಂಟುಮಾಡಲು ಪ್ರಯತ್ನಿಸುತ್ತಾರೆ. ನಊಝುಬಿಲ್ಲಾಹ್. ಆದರೆ, ಅರಿವು ಗಳಿಸುವುದು ಪ್ರತಿ ಮುಸ್ಲಿಮನಿಗೆ ಕಡ್ಡಾಯವೆಂದೂ ಅರಿವು ಗಳಿಸಲಿಕ್ಕಾಗಿ ಚೀನಾ ದೇಶಕ್ಕೆ ಹೋಗಬೇಕಾಗಿ ಬಂದರೆ ಹೋಗಿರಿ ಎಂದೂ ಯಾವ ಸಮುದಾಯದೊಡನೆ ಹಝ್ರತ್ ಪೈಗಂಬರ್(ಸ) ಹೇಳಿದ್ದರೋ ಆ ಸಮುದಾಯದ ಮೇಲೆ ಲೈಬ್ರರಿ ಸುಟ್ಟುಹಾಕಿದ ಆರೋಪ ಹೊರಿಸುವುದು ಬುದ್ಧಿ ಮತ್ತು ಸಾಕ್ಷ್ಯಾಧಾರದ ತತ್ವಗಳಿಗೆ ವಿರುದ್ಧವಾಗಿದೆ. ಅಲೆಕ್ಸಾಂಡ್ರಿಯದ ಗ್ರಂಥಾಲಯ ಸುಡಲ್ಪಟ್ಟ ಘಟನೆ ಸಂಪೂರ್ಣವಾಗಿಯೂ ಸುಳ್ಳು ಮತ್ತು ಕೃತ್ರಿಮ ಕಥೆಯಾಗಿದೆ ಎಂದು ಅನೇಕ ಕ್ರೈಸ್ತ ಮತ್ತು ಯುರೋಪಿಯನ್ ಸಂಶೋಧಕರು ಸಾಬೀತುಗೊಳಿಸಿರುವರು.

ಈಜಿಪ್ಟಿನ ಒಬ್ಬ ಪಂಡಿತರಾದ ಮುಹಮ್ಮದ್ ರಝಾ ತನ್ನ ಗ್ರಂಥವಾದ ಸೀರತ್ ಉಮರ್ ಫಾರೂಖ್‌ನಲ್ಲಿ ಈ ಘಟನೆಯನ್ನು ಪ್ರಸ್ತಾಪಿಸುತ್ತಾ ಬರೆಯುತ್ತಾರೆ: ಅಲೆಕ್ಸಾಂಡ್ರಿಯದ ಗ್ರಂಥಾಲಯಕ್ಕೆ ಬೆಂಕಿ ಹೊತ್ತಿಸಿದ ಆಕ್ಷೇಪವನ್ನು ಅಬುಲ್‌ಫರಜ್ ಮಲತಿ ಎಂಬವನು ಮಾಡಿದ್ದಾನೆ. ಈ ಘಟನೆಯನ್ನು ಅವನು ಚರಿತ್ರೆಯ ಒಂದು ಸಂಕ್ಷಿಪ್ತ ಪುಸ್ತಕದಲ್ಲಿ ಮಾಡಿರುವನು. ಈ ಚರಿತ್ರೆಗಾರನು 1226ರಲ್ಲಿ ಜನಿಸಿ 1286ರಲ್ಲಿ ಮೃತಪಟ್ಟನು. ವಿಜಯದ ಸಮಯದಲ್ಲಿ ಯೂಹನ್ನಾನಹ್‌ವಿ ಎಂಬ ಖಿಬ್‌ತಿ ಪಾದ್ರಿಯು ಅಮ್ರ್ ಬಿನ್ ಆಸ್‌ನ ಖಜಾನೆಯಿಂದ ಒಂದು ಗ್ರಂಥವನ್ನು ಬೇಡಿದರು. ಹಝ್ರತ್ ಅಮ್ರ್ ಬಿನ್ ಆಸ್(ರ) ಹೇಳಿದರು: ಹಝ್ರತ್ ಉಮರ್‌ರೊಡನೆ ಅನುಮತಿ ಕೇಳಿದ ನಂತರವೇ ಏನನ್ನಾದರೂ ಹೇಳಲು ನನಗೆ ಸಾಧ್ಯ. ಇದು ಸಂಪೂರ್ಣವಾಗಿಯೂ ಸುಳ್ಳು ಕಥೆಯಾಗಿದೆ. ಆದರೆ ಆಕ್ಷೇಪವನ್ನು ರದ್ದುಪಡಿಸಲು ಹೇಳುತ್ತೇನೆ. ಕಥೆಯ ಪ್ರಕಾರ ಹಝ್ರತ್ ಉಮರ್(ರ) ಹೀಗೆ ಬರೆದರು: ನೀವು ಯಾವ ಪುಸ್ತಕದ ಬಗ್ಗೆ ಪ್ರಸ್ತಾಪಿರುವಿರೋ ಅದು ಪವಿತ್ರ ಖುರ್‌ಆನಿನ ಪ್ರಕಾರವಾಗಿದ್ದರೆ, ಪವಿತ್ರ ಖುರ್‌ಆನೇ ನಮಗೆ ಸಾಕು, ನಮಗೆ ಅದರ ಆವಶ್ಯಕತೆಯಿಲ್ಲ. ಇನ್ನು ಅದು ಪವಿತ್ರ ಖುರ್‌ಆನಿಗೆ ವಿರುದ್ಧವಾಗಿದ್ದರೆ, ಅಂತಹ ಪುಸ್ತಕದ ನಮಗೆ ಆವಶ್ಯಕತೆಯಿಲ್ಲ. ಅಂತಹ ಪುಸ್ತಕಗಳನ್ನು ನಾಶಮಾಡಬೇಕು. ಹೀಗೆ ಹಝ್ರತ್ ಅಮ್ರ್ ಬಿನ್ ಆಸ್(ರ) ಒಂದೊಂದಾಗಿ ತೆಗೆದು ಬೆಂಕಿಗೆ ಹಾಕಿದರು. ಹೀಗೆ ಅದು ಆರು ತಿಂಗಳಲ್ಲಿ ಆ ಪುಸ್ತಕಗಳು ನಾಶವಾದವು.

ಇಂತಹ ಒಂದು ಘಟನೆಯ ಬಗ್ಗೆ ತಾರೀಕೆ ತಬರಿಯಲ್ಲೋ, ಇಬ್ನು ಅಸೀರಲ್ಲೋ, ಯಾಖೂಬಿಯಲ್ಲೋ, ಖಂದಿಯಲ್ಲೋ ಪ್ರಸ್ತಾಪವಿಲ್ಲ. ಇಬ್ನು ಅಬ್ದುಲ್‌ಹುಕುಂ, ಬಲಾದರಿ ಅಥವಾ ಇಬ್ನು ಖಲ್‌ದೂನ್ ಇದರ ಪ್ರಸ್ತಾಪ ಮಾಡಿಲ್ಲ. ಕೇವಲ ಅಬುಲ್‌ಫರಜ್ ಇದನ್ನು ಹದಿಮೂರನೇ ಶತಮಾನದಲ್ಲಿ ಆಧಾರರಹಿತವಾಗಿ ಬರೆದಿರುವನು.

ಪ್ರೊಫೆಸರ್ ಬಟ್ಲರ್ ಯೂಹನ್ನನ ಬಗ್ಗೆ ತನಿಖೆ ನಡೆಸಿ ಹೀಗೆ ಬರೆದರು: 642 ಇಸವಿಯಲ್ಲಿ ಲೈಬ್ರರಿಗೆ ಬೆಂಕಿ ತಗುಲಿತ್ತು ಎಂದು ಹೇಳಲಾಗಿದೆ. ಆ ಸಮಯದಲ್ಲಿ ಯೋಹನ್ನ ನಹ್‌ವಿ ಇರಲೇ ಇಲ್ಲ.

ಅಬುಲ್‌ಫ‌ರಜ್ ಹೇಳಿರುವ ಕಥೆಯೂ ಚಾರಿತ್ರಿಕ ಆಧಾರರಹಿತವಾದ್ದದ್ದು ಮತ್ತು ತಲೆಕಾಲು ಇಲ್ಲದ್ದು ಆಗಿದೆ. ಗಬನ್ ಬರೆಯುತ್ತಾರೆ: ಈ ವರದಿ ಇಸ್ಲಾಮಿನ ಪಾಠಗಳಿಗೆ ವಿರುದ್ಧವಾದುದಾಗಿದೆ. ಯುದ್ಧದಲ್ಲಿ ಯಹೂದಿಯರಿಂದ ಮತ್ತು ಕ್ರೈಸ್ತರಿಂದ ಲಭಿಸುವ ಗ್ರಂಥಾಲಯವನ್ನು ಬೆಂಕಿಗೆ ಹಚ್ಚಬಾರದು ಎಂದಾಗಿದೆ ಇಸ್ಲಾಮಿನ ಅಧ್ಯಾಪನೆ.

ಮುಸ್ಲಿಮರು ಜಯಿಸಿದ ಪ್ರದೇಶಗಳ ಚರ್ಚುಗಳನ್ನು ಮತ್ತು ಅದಕ್ಕೆ ಸಂಬಂಧಪಟ್ಟ ವಸ್ತುಗಳನ್ನು ನಾಶವಾಡಲು ಇಸ್ಲಾಂ ಅನುಮತಿ ಕೊಡುವುದಿಲ್ಲ. ಮಾತ್ರವಲ್ಲ ಅಲ್ಲಿಯ ಜನರಿಗೆ ಧಾರ್ಮಿಕ ಸ್ವಾತಂತ್ರ್ಯವನ್ನು ಸಹ ನೀಡುತ್ತದೆ. ಹೀಗಿರುವಾ ಅಮೀರುಲ್ ಮೂಮಿನೀನ್ ಅಲೆಕ್ಸಾಂಡ್ರಿಯದ ಗ್ರಂಥಾಲವನ್ನು ಬೆಂಕಿಗೆ ಹಚ್ಚಲು ಆಜ್ಞಾಪಿಸಿದರು ಎಂದು ಹೇಳುವುದು ಬುದ್ಧಿಗೆ ನಿಲುಕದ ಸಂಗತಿಯಾಗಿದೆ. (ಸೀರತ್ ಉಮರ್ ಫಾರೂಖ್(ರ) ಮುಹಮ್ಮದ್ ರಝಾ, ಪುಟ–294–297, ಇಸ್ಲಾಮಿಯ ಲಾಹೋರ್ 2010)

ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್(ರ) ಅವರು ಈ ಆಕ್ಷೇಪಣೆಯನ್ನು ತಮ್ಮ "ತಸ್ದೀಖೆ ಬರಾಹೀನೆ ಅಹ್ಮದೀಯ" ಎಂಬ ಪುಸ್ತಕದಲ್ಲಿ ಉಲ್ಲೇಖಿಸುವ ಮೂಲಕ ಉತ್ತರಿಸಿದ್ದಾರೆ. ಅದರಲ್ಲಿ ಅವರು ಹೀಗೆ ಹೇಳುತ್ತಾರೆ: ಫಿಲುನಸ್ ಹಕೀಮ್ ಮತ್ತು ಫಾಜಿಲ್ ಅಜಾಲ್ ಅವರ ಕೋರಿಕೆಯ ಮೇರೆಗೆ, ಅಮೀರುಲ್ ಮುಮಿನೀನ್ ಉಮರ್ ದ್ವಿತೀಯ ಖಲೀಫರು ಈ ಗ್ರಂಥಾಲಯದ ಬಗ್ಗೆ ಕೇಳಿದಾಗ, ಖಲೀಫ ರವರು ಅದನ್ನು ತಕ್ಷಣವೇ ಸುಡಬೇಕೆಂದು ಆದೇಶಿಸಿದರು. ಆರು ತಿಂಗಳ ಕಾಲ ಬಚ್ಚಲಮನೆಗಳು ಬೆಚ್ಚಗಿರುತ್ತಿದ್ದವು. ಅವರು(ರ) ಬರೆಯುತ್ತಾರೆ ಈ ಜನರು ಹೀಗೆ ಹೇಳುತ್ತಾರೆ. ಈ ಆಕ್ಷೇಪಣೆ ಕೇವಲ ಧರ್ಮಗುರುಗಳ(ಪಾದರಿಗಳ) ಫಲಿತಾಂಶವಾಗಿದೆ ಅದರಲ್ಲಿ ವಾಸ್ತವ ಇಲ್ಲ. ವೀಕ್ಷಕರು ಸ್ವತಃ ಯೋಚಿಸಿರಿ. ಹಝ್ರತ್ ಖಲೀಫ ಅವ್ವಲ್(ರ) ಹೇಳುತ್ತಾರೆ ಮೊದಲನೆಯದು ಇದು ಇಸ್ಲಾಮಿನ ಪದ್ಧತಿಯಾಗಿದ್ದರೆ, ಇಸ್ಲಾಂ ಧರ್ಮದ ಜನರು ತಮ್ಮ ಆಳ್ವಿಕೆಯಲ್ಲಿ ಯಹೂದಿಗಳು ಮತ್ತು ಕ್ರಿಶ್ಚಿಯನ್ನರ ಪವಿತ್ರ ಗ್ರಂಥಗಳನ್ನು ಸುಡುತ್ತಿದ್ದರು, ಏಕೆಂದರೆ ಅದೇ ಎರಡು ಧರ್ಮಗಳು, ಹೌದು ಇಸ್ಲಾಮ್ ಧರ್ಮಕ್ಕಿಂತ ಮುಂಚೆ ಈ ಎರಡು ಪವಿತ್ರ ಗ್ರಂಥಗಳ ಧರ್ಮಗಳು ಎಂದೆನಿಸಿಕೊಳ್ಳುತ್ತಿದ್ದರು. ನಂತರ ಇಸ್ಲಾಂ ಅಗ್ನಿ ಆರಾಧಕರ ಮೇಲೆ ಸಂಪೂರ್ಣ ನಿಯಂತ್ರಣವನ್ನು ಹೊಂದಿತ್ತು ಎನ್ನಲಾಗುತ್ತದೆ, ಆದರೆ ಇಸ್ಲಾಂ ಧರ್ಮವು ಅವರ ಪುಸ್ತಕಗಳನ್ನು ಸುಟ್ಟುಹಾಕಿತು ಎಂದು ಯಾವುದೇ ಇತಿಹಾಸವು ಹೇಳುವುದಿಲ್ಲ. ಈ ಕಾಯಿದೆಯು ಇಸ್ಲಾಮಿನಲ್ಲಿ ಅಥವಾ ಇಸ್ಲಾಮಿನ ಖಲೀಫರುಗಳ ಪ್ರಾಬಲ್ಯವಾಗಿರುತ್ತಿದ್ದರೆ, ಅದು ಅವರ ಅಭ್ಯಾಸವಾಗಿರುತ್ತಿದ್ದರೆ, ಅದನ್ನು ಮಾಡುವ ಕಾರಣಗಳು ಇಸ್ಲಾಂನಲ್ಲಿ ಯಾವಾಗಲೂ ಇರುತ್ತಿದ್ದವು ಮತ್ತು ಇಸ್ಲಾಂ ಧರ್ಮಕ್ಕೆ ಹೀಗೆ ಮಾಡುವುದರಲ್ಲಿ ಯಾವುದೇ ಅಡೆ ತಡೆ ಇರಲಿಲ್ಲ. ಹಝ್ರತ್ ಖಲೀಫ ಅವ್ವಲ್(ರ) ಹೇಳುತ್ತಾರೆ: ಎರಡನೆಯದಾಗಿ, ಧಾರ್ಮಿಕ ಪುಸ್ತಕಗಳನ್ನು ಸುಡುವುದು ಇಸ್ಲಾಮಿನ ರಾಜರು ಮತ್ತು ಇಸ್ಲಾಂನ ಜನರ ಕೆಲಸವಾಗಿದ್ದರೆ, ಗ್ರೀಕ್ ತತ್ವಶಾಸ್ತ್ರ, ಗ್ರೀಕ್ ಔಷಧ, ಗ್ರೀಕ್ ವಿಜ್ಞಾನಗಳ ಅನುವಾದಗಳು ಅರೇಬಿಕ್ ಭಾಷೆಯಲ್ಲಿ ಅಸಾಧ್ಯ. ಮೂರನೆಯದಾಗಿ, ಪುಸ್ತಕಗಳನ್ನು ಸುಡುವುದು ಇಸ್ಲಾಮಿನ ಜನರಿಂದಲೇ ಆಗಿದ್ದರೆ, ಬರಾಹೀನೆ ಅಹ್ಮದೀಯವನ್ನು ನಿರಾಕರಿಸುವವನಿಗೆ ಇದರ ಉತ್ತರದಲ್ಲಿ ಖಲೀಫರು ಬರೆಯುತ್ತಿದ್ದಾರೆ, ತಮ್ಮ ದೇಶದಿಂದಲೆ ಯಾವುದಾದರು ಪುರಾವೆ ನೀಡಬೇಕಾಗಿತ್ತು ಮತ್ತು ಅವರನ್ನು ಅಲೆಕ್ಸಾಂಡ್ರಿಯಾಕ್ಕೆ ಸಾಗರೋತ್ತರಕ್ಕೆ ಹೋಗಬೇಕಾಗುತ್ತಿರಲಿಲ್ಲ. ಭಾರತದಲ್ಲಿ ಯಾವ ಪುಸ್ತಕಗಳನ್ನು ಸುಡಲಾಯಿತು ಎಂಬುದನ್ನು ಇಲ್ಲಿ ಬರೆಯಬೇಕಾಗಿತ್ತು. ನಾಲ್ಕನೆಯದಾಗಿ, ಇಸ್ಲಾಂ ಭಾರತವನ್ನು ಏಳು ನೂರು ವರ್ಷಗಳಿಗೂ ಹೆಚ್ಚು ಕಾಲ ಆಳಿತು, ಆ ಸಮಯದಲ್ಲಿ ಭಗ್ವತ್, ರಾಮಾಯಣ, ಗೀತೆ, ಮಹಾಭಾರತ ಮತ್ತು ಲಿಂಗ ಪುರಾಣ, ಮಾರ್ಕುಂಡಿ ಮತ್ತು ಇತರ ಪ್ರಸಿದ್ಧ ಗ್ರಂಥಗಳಾಗಿವೆ. ಅದು ಧಾರ್ಮಿಕ ಗ್ರಂಥಗಳಾಗಿವೆ ಮತ್ತು ಪವಿತ್ರ ಗ್ರಂಥಗಳು ಎಂದು ಪರಿಗಣಿಸಲಾಗಿದೆ. ಅದನ್ನು ಸುಟ್ಟ ಸುದ್ದಿ ಕಿವಿಗೆ ಬೀಳದಿದ್ದರೂ ಕೆಲವು ಪುಸ್ತಕಗಳು ಅನುವಾದಗೊಂಡವು. ಹಾಗಾದರೆ ಮುಸ್ಲಿಮರು ಅವರ ಪುಸ್ತಕಗಳನ್ನು ಸುಡುತ್ತಾರೆ ಎಂದು ಈ ಹಿಂದೂಗಳು ಹೇಗೆ ಅರ್ಥವಾಡಿಕೊಂಡರು ಎಂದು ಆಶ್ಚರ್ಯವಾಗುತ್ತದೆ. ನ್ಯಾಯಯುತವಾಗಿ ಯೋಚಿಸಿ. (ತಸ್ದೀಖ್ ಬರಾಹೀನೆ ಅಹ್ಮದಿಯಾ, ಸಂಪುಟ–1, ಪುಟಗಳು 203–204)

ಈ ಆಕ್ಷೇಪಣೆಗೆ ಪ್ರತಿಕ್ರಿಯೆಯಾಗಿ ಹಝ್ರತ್ ಮೌಲಾನಾ ಅಬ್ದುಲ್ ಕರೀಂ ಸಾಹಿಬ್ ಅವರು ತಸ್ದೀಖೆ ಬರಾಹೀನೆ ಅಹ್ಮದಿಯಾದಲ್ಲಿ ಟಿಪ್ಪಣಿಯನ್ನು ಸಹ ಬರೆದಿದ್ದಾರೆ. ಅವರು ಹೀಗೆ ಬರೆಯುತ್ತಾರೆ: ಘಟನೆಯ ತನಿಖೆ ಮತ್ತು ನೈಜ ಸಂದರ್ಭಗಳು ಬೆಳಕಿಗೆ ಬರುವವರೆಗೂ ಮುಸ್ಲಿಮರ ಮೇಲೆ ಆರೋಪ ಹೊರಿಸಲಾಗಿದ್ದರೂ, ನ್ಯಾಯಯುತ ಮತ್ತು ಬಲಪಂಥೀಯ ವಿದ್ವಾಂಸರಲ್ಲಿ ಮುಸ್ಲಿಮರನ್ನು ಅನ್ಯಾಯವಾಗಿ ದೂಷಿಸುವ ಕೆಲವೇ ಜನರಿದ್ದಾರೆ. ಈ ಆಕ್ಷೇಪಕ್ಕೆ ಕಾರಣ ಪೂರ್ವಾಗ್ರಹ ಅಥವಾ ಅಜ್ಞಾನವನ್ನು ಆಧರಿಸಿದೆ ಮತ್ತು ಆರೋಪಿಗೆ ಯಾವುದೇ ಅಧಿಕೃತ ಪುರಾವೆಗಳಿಲ್ಲದಿದ್ದರೂ ಸಹ, ಈ ಕಥೆಯನ್ನು ವಿವರಿಸಿದ ಇಬ್ಬರು ಇತಿಹಾಸಗಾರರು ಈ ಘಟನೆಯ ನಂತರ ಐನೂರ ಎಂಬತ್ತು ವರ್ಷಗಳ ನಂತರ ಜನಿಸಿದರು ಮತ್ತು ಯಾವುದೇ ಮೊದಲ ಪ್ರಮಾಣಪತ್ರವನ್ನು ಹೊಂದಿರಲಿಲ್ಲ. ಅಲೆಕ್ಸಾಂಡ್ರಿಯಾದ ಗ್ರಂಥಾಲಯದ ಕುರಿತು ತಮ್ಮ ಸಂಶೋಧನೆಯಲ್ಲಿ ಅನೇಕ ಪುಸ್ತಕಗಳನ್ನು ಬರೆದಿರುವ ಸೇಂಟ್ ಕ್ರೊಯಿಕ್ಸ್ ಎಂಬವರು ಈ ಘಟನೆಯನ್ನು ಸಂಪೂರ್ಣವಾಗಿ ನಿರಾಕರಿಸಿದ್ದಾರೆ ಮತ್ತು ಜೂಲಿಯಸ್ ಸೀಸರ್‌ನ ಯುದ್ಧದಲ್ಲಿ ಈ ಪುಸ್ತಕಗಳನ್ನು ಸುಟ್ಟುಹಾಕಲಾಗಿದೆ ಎಂದು ತಿಳಿಸುತ್ತಾರೆ.

ಹಾಗಾಗಿ ಲೈಫ್ ಆಫ್ ಸೀಸರ್‌ನಲ್ಲಿ ಪ್ಲುಟಾರ್ಕ್ ಅವರು ಶತ್ರುಗಳ ಕೈಗೆ ಬೀಳುವ ಭಯದಿಂದ ಜೂಲಿಯಸ್ ಸೀಸರ್ ತನ್ನ ಹಡಗುಗಳಿಗೆ ಬೆಂಕಿ ಹಚ್ಚಿದರು ಮತ್ತು ಅಲೆಕ್ಸಾಂಡ್ರಿಯಾದ ಪ್ರಸಿದ್ಧ ಗ್ರಂಥಾಲಯಗಳಿಗೆ ತಾಗುವಷ್ಟರ ಮಟ್ಟಿಗೆ ಅದೇ ಬೆಂಕಿ ವ್ಯಾಪಿಸಿತು ಎಂದು ಬರೆಯುತ್ತಾರೆ.

ಹೇಡನ್, ತನ್ನ ಪುಸ್ತಕ ಡಿಕ್ಷನರಿ ಆಫ್ ಡೇಟ್ಸ್ ರಿಲೇಟಿಂಗ್ ಟು ಆಲ್ ಏಜಸ್ ನಲ್ಲಿ ಈ ಸುಳ್ಳು ವರದಿಯನ್ನು ದಾಖಲಿಸಿದ್ದಾನೆ, ಈ ಕಥೆಯು ತುಂಬಾ ಅನುಮಾನಾಸ್ಪದವಾಗಿದೆ ಎಂದು ತನ್ನ ತನಿಖೆಯಿಂದ ಗಮನಿಸುತ್ತಾನೆ. ಆ ಪುಸ್ತಕಗಳು ಇಸ್ಲಾಂ ವಿರೋಧಿಯಾಗಿದ್ದರೆ ಸುಟ್ಟು ಹಾಕಬೇಕು' ಎಂಬ ಹಝ್ರತ್ ಉಮರ್(ರ)ರವರ ಹೇಳಿಕೆಯನ್ನು ಮುಸ್ಲಿಮರು ಒಪ್ಪಲಿಲ್ಲ. ಕೆಲವರು ಈ ಹೇಳಿಕೆಯನ್ನು 391ರಲ್ಲಿ ನಿಧನರಾದ ಅಲೆಕ್ಸಾಂಡ್ರಿಯಾದ ಬಿಷಪ್ ಥಿಯೋಫಿಲಸ್‌ಗೆ ಆರೋಪಿಸಿದ್ದಾರೆ ಮತ್ತು ಇತರರು ಇದನ್ನು 1500ರಲ್ಲಿ ನಿಧನರಾದ ಕಾರ್ಡಿನಲ್ ಜಿಮೆನೆಜ್‌ಗೆ ಕಾರಣವೆಂದು ಹೇಳಿದ್ದಾರೆ. ಮತ್ತೆ ಅವರು ವರೆದಿದ್ದಾರೆ: ನಮ್ಮ ಖ್ಯಾತ ಯುವಕ ಡಾ.ಲೀಟ್ನರ್ ಅವರು ತಮ್ಮ ಸಿನಿನ್–ಉಲ್–ಇಸ್ಲಾಂ ಪುಸ್ತಕದಲ್ಲಿ ಈ ಸುಳ್ಳು ವರದಿಯನ್ನು ಅನುಸರಿಸಿದ್ದಾರೆ, ಮತ್ತು ಡಾ.ಸಾಹಿಬ್ ಅವರ ತನಿಖೆಯಲ್ಲಿ ಮೋಸ ಹೋಗಿದ್ದಾರೆ ಎಂದು ದುಃಖದಿಂದ ತಿಳಿದುಬಂದಿದೆ.

ಡರ್‌ಪೀರ್ ಸಾಹಿಬ್, ಜಾನ್ ವಿಲಿಯಂ ಡ್ರೇಪರ್, ಈ ಹೇಳಿಕೆಯನ್ನು ಪ್ರಸಿದ್ಧ ಪುಸ್ತಕದಲ್ಲಿ ತಪ್ಪು ನಿರೂಪಕರಿಂದ ಮೊದಲು ಉಲ್ಲೇಖಿಸಿದ್ದಾರೆ, ಆದರೆ ನಂತರ ಈ ಹೇಳಿಕೆಯ ದೋಷವನ್ನು ಒಪ್ಪಿಕೊಂಡರು ಮತ್ತು ವಾಸ್ತವವಾಗಿ ಈ ಪುಸ್ತಕಗಳು ಜೂಲಿಯಸ್ ಸೀಸರ್ ಯುದ್ಧದಲ್ಲಿ ಸುಟ್ಟುಹೋಗಿವೆ ಎಂದು ಬರೆದರು ಮತ್ತು ಈಗ ಅದು ಆಗಿರಬಹುದು. ಈ ಹೇಳಿಕೆಯು ಸಂಪೂರ್ಣವಾಗಿ ಆಧಾರರಹಿತ ಮತ್ತು ಕೇವಲ ಕಾಲ್ಪನಿಕವಾಗಿದೆ ಎಂದು ಸಂಪೂರ್ಣ ಖಚಿತವಾಗಿ ಹೇಳಿದರು. ಅಳ ಬೇಕಾದ ನಿಜವಾದ ವಿಷಯವೇನೆಂದರೆ ಕಾರ್ಡಿನಲ್ ಜೆಮೇನೆಝ್ ಎಂಬವನು ಎಂಭತ್ತು ಸಾವಿರ ಅರಬಿ ಪುಸ್ತಕಗಳನ್ನು ಗರ್ನಾಡದ ಮೇದಾನಗಳಲ್ಲಿ ಸುಟ್ಟು ಹಾಕಿದ್ದನು. ಸ್ಪೇನ್ ಅನ್ನು ಮುಸ್ಲಿಮರಿಂದ ವಶಪಡಿಸಿಕೊಂಡಾಗ ಮತ್ತು ಕ್ರಿಶ್ಚಿಯನ್ನರು ಆಕ್ರಮಿಸಿಕೊಂಡಾಗ, ಅವರು ಗರ್ನಾಡದ ಗ್ರಂಥಾಲಯದಿಂದ ಎಂಬತ್ತು ಸಾವಿರ ಪುಸ್ತಕಗಳನ್ನು ಸುಟ್ಟುಹಾಕಿದರು. ಇಸ್ಲಾಂ ಧರ್ಮವನ್ನು ದೂಷಿಸುವ ಬದಲು ಅಳಲು ಇದು ನಿಜವಾದ ಸ್ಥಳವಾಗಿದೆ. ವೀಕ್ಷಿಸಿ. ಧರ್ಮ ಮತ್ತು ವಿಜ್ಞಾನದ ನಡುವಿನ ಸಂಘರ್ಷ. (ತಸ್ದೀಖೆ ಬರಾಹೀನೆ ಅಹ್ಮದೀಯ, ಸಂಪುಟ–1, ಪುಟ–203 ಅಡಿಟಿಪ್ಪಣಿ) ಅದೇನೇ ಇರಲಿ, ಇದು ಗ್ರಂಥಾಲಯಕ್ಕೆ ಬೆಂಕಿ ಹಚ್ಚಿದ ಬಗ್ಗೆ ಉಲ್ಲೇಖವಾಗಿದೆ ಎಂದು ಆರೋಪಿಸಲಾಗಿದೆ.

ಅದೇ ರೀತಿ ಬರ್ಖಾ ಮತ್ತು ತರಾಬಿಲಸ್‌ನ ವಿಜಯ ಇತ್ಯಾದಿಗಳನ್ನು ಉಲ್ಲೇಖಿಸಲಾಗಿದೆ. ಈಜಿಪ್ಟ್ ಅನ್ನು ವಶಪಡಿಸಿಕೊಂಡ ನಂತರ ಮತ್ತು ಅಲ್ಲಿ ಶಾಂತಿ ಮತ್ತು ಸುವ್ಯವಸ್ಥೆಯನ್ನು ಸ್ಥಾಪಿಸಿದ ನಂತರ, ಅಮ್ರ್ ಇಬ್ನ್ ಅಸ್ ಪಶ್ಚಿಮದ ಕಡೆಗೆ ತೆರಳಿದರು, ಇದರಿಂದ ವಶಪಡಿಸಿಕೊಂಡ ಪ್ರದೇಶಗಳಿಗೆ ಅಲ್ಲಿಂದ ಯಾವುದೇ ಅಪಾಯವಿರಲಿಲ್ಲ. ಏಕೆಂದರೆ ಕೆಲವು ರೋಮನ್ ಸೈನ್ಯಗಳು ಬರ್ಖಾ ಮತ್ತು ತರಾಬಿಲಸ್‌ನಲ್ಲಿ ರಹಸ್ಯವಾಗಿದ್ದರು ಮತ್ತು ಅವಕಾಶವ ದೊರಡತಾಗ ಜನರನ್ನು ಉತ್ತೇಜಿಸುವ ಮೂಲಕ ಅವರು ಈಜಿಪ್ಟ್‌ನಲ್ಲಿ ಮುಸ್ಲಿಮರ ಮೇಲೆ ದಾಳಿ ಮಾಡಬಹುದಾಗಿತ್ತು. ಅಲೆಕ್ಸಾಂಡ್ರಿಯಾ ಮತ್ತು ಮೊರಾಕೊ ನಡುವಿನ ಪ್ರದೇಶವನ್ನು ಬರ್ಖಾ ಎಂದು ಕರೆಯಲಾಗುತ್ತದೆ. ಈ ಪ್ರದೇಶದಲ್ಲಿ ಅನೇಕ ಪಟ್ಟಣಗಳು ಮತ್ತು ವಸಾಹತುಗಳಿವೆ. ಆದ್ದರಿಂದ ಅಮ್ರ್ ಇಬ್ನ್ ಆಸ್ ತನ್ನ ಸೈನ್ಯದೊಂದಿಗೆ ಬರ್ಖಾ ಕಡೆಗೆ 22 ಹಿಜಿರಿನಲ್ಲಿ ಸಾಗಿದರು. ಅಲೆಕ್ಸಾಂಡ್ರಿಯಾದಿಂದ ಬರ್ಖಾಗೆ ಹೋಗುವ ರಸ್ತೆಯು ತುಂಬಾ ಸೊಂಪಾದ ಮತ್ತು ಜನನಿಬಿಡವಾಗಿತ್ತು. ಆದ್ದರಿಂದ, ಅಲ್ಲಿಗೆ ತಲುಪುವಲ್ಲಿ, ನೀವು ಶತ್ರುಗಳ ಯಾವುದೇ ಪಿತೂರಿಯನ್ನು ಎದುರಿಸಲಿಲ್ಲ ಮತ್ತು ನೀವು ಅಲ್ಲಿಗೆ ತಲುಪಿದಾಗ, ಜನರು ಜಿಝ್ಯ ಪಾವತಿಯ ಮೇಲೆ ಒಪ್ಪಂದ ಮಾಡಿಕೊಂಡರು. ಅದರ ನಂತರ, ಬರ್ಖಾದ ಜನರು ಸ್ವಯಂಚಾಲಿತವಾಗಿ ಈಜಿಪ್ಟ್‌ಗೆ ಹೋಗಿ ತಮ್ಮ ಜಿಝ್ಯವನ್ನು ಸಲ್ಲಿಸುತ್ತಿದ್ದರು. ಮುಸ್ಲಿಮರಿಂದ ಯಾರೂ ಅವರ ಬಳಿಗೆ ಹೋಗಬೇಕಾಗುವ ಅವಶ್ಯಕತೆ ಬೀರುತ್ತಿರಲಿಲ್ಲ. ಈ ಜನರು ಪಾಶ್ಚಾತ್ಯರಲ್ಲಿ ಅತ್ಯಂತ ಸರಳವಾದ ಜನರಾಗಿದ್ದರು. ಅವರಲ್ಲಿ ಯಾವುದೇ ರೀತಿಯ ಪಿತೂರಿತನವೂ ಇರಲಿಲ್ಲ.

ಅಮ್ರ್ ಇಬ್ನ್ ಆಸ್(ರ) ಇಲ್ಲಿಂದ ಹೊರಟುಹೋದಾಗ, ಅವರು ಕೋಟೆಯ ನಗರವಾಗಿದ್ದ ತರಾಬೀಲಸ್ ಕಡೆಗೆ ತೆರಳಿದರು. ಅಲ್ಲಿ ದೊಡ್ಡ

ರೋಮನ್ ಸೈನ್ಯವಿತ್ತು. ಮುಸ್ಲಿಮರ ಆಗಮನದ ಸುದ್ದಿಯನ್ನು ಕೇಳಿದ ಅವರು ತಮ್ಮ ಕೋಟೆಗಳ ಬಾಗಿಲುಗಳನ್ನು ಮುಚ್ಚಿದರು ಮತ್ತು ಮುಸ್ಲಿಮರ ಮುತ್ತಿಗೆಯನ್ನು ಸಹಿಸಿಕೊಳ್ಳಬೇಕಾಯಿತು. ಮುತ್ತಿಗೆ ಒಂದು ತಿಂಗಳ ಕಾಲ ನಡೆಯಿತು ಆದರೆ ಮುಸ್ಲಿಮರಿಗೆ ಹೆಚ್ಚಿನ ಯಶಸ್ಸು ಸಿಗಲಿಲ್ಲ. ತರಾಬಿಲಸ್‌ನ ಹಿಂದೆ ನಗರಕ್ಕೆ ಹೊಂದಿಕೊಂಡಂತೆ ಸಮುದ್ರವು ಹರಿಯುತ್ತಿತ್ತು ಮತ್ತು ಸಮುದ್ರ ಮತ್ತು ನಗರದ ನಡುವೆ ಯಾವುದೇ ಗೋಡೆ ಇರಲಿಲ್ಲ. ಮುಸಲ್ಮಾನರ ಗುಂಪೊಂದು ರಹಸ್ಯವನ್ನು ಕಂಡುಹಿಡಿದು ಸಮುದ್ರದ ಹಿಂದಿನಿಂದ ನಗರವನ್ನು ಪ್ರವೇಶಿಸಿತು. ಜೋರಾಗಿ ತಕ್ಬೀರ್ ಕೂಗಿದರು. ಈಗ ಸೈನ್ಯಕ್ಕೆ ತಮ್ಮ ದೋಣಿಗಳಲ್ಲಿ ಆಶ್ರಯ ಪಡೆಯುವುದನ್ನು ಬಿಟ್ಟು ಬೇರೆ ದಾರಿ ಇರಲಿಲ್ಲ. ಅವರೆಲ್ಲರು ಓಡಿಹೋದರು ತಕ್ಷಣ, ಅಮ್ರ್ ಇಬ್ನ್ ಅಸ್(ರ)ರವರು ಅವರ ಮೇಲೆ ಹಿಂದಿನಿಂದ ದಾಳಿ ಮಾಡಿದರು. ದೋಣಿಗಳಿಂದ ತಪ್ಪಿಸಿಕೊಂಡವರನ್ನು ಹೊರತುಪಡಿಸಿ ಹೆಚ್ಚಿನವರನ್ನು ಹಿಡಿದುಕೊಂಡರು. ಮುಸ್ಲಿಮರು ನಗರದಲ್ಲಿದ್ದ ಸರಕು ಮತ್ತು ಆಸ್ತಿಯನ್ನು ಯುದ್ಧದಲ್ಲಿ ಗೆದ್ದ ಸಂಪತ್ತು ಎಂದು ವಶಪಡಿಸಿಕೊಂಡರು.

ತರಾಬೀಲಸ್‌ನೊಂದಿಗೆ ವ್ಯವಹರಿಸಿದ ನಂತರ, ಅಮ್ರ್ ಬಿನ್ ಆಸ್(ರ) ತನ್ನ ಸೈನ್ಯವನ್ನು ಸುತ್ತಮುತ್ತಲ ಪ್ರದೇಶದಲ್ಲಿ ಹರಡಿಸಿದರು. ನೀವು ಪಶ್ಚಿಮಕ್ಕೆ ಟುನೀಶಿಯಾ ಮತ್ತು ಆಫ್ರಿಕಾಕ್ಕೆ ತಿರುಗಲು ಉದ್ದೇಶಿಸಿದ್ದರು. ಆದ್ದರಿಂದ ಅವರು ಈ ವಿಳಯದಲ್ಲಿ ಉಮರ್ ಇಬ್ನ್ ಅಲ್-ಖತ್ತಾಬ್(ರ)ರವರಿಗೆ ಪತ್ರ ಬರೆದರು, ಹಝ್ರತ್ ಉಮರ್(ರ) ಇಸ್ಲಾಮಿನ ಸೈನ್ಯವನ್ನು ಹೊಸ ಮುಂಭಾಗಕ್ಕೆ ಕಳುಹಿಸಲು ಇಚ್ಛವಿರಲಿಲ್ಲ, ವಿಶೇಷವಾಗಿ ವಶಪಡಿಸಿಕೊಂಡ ಪ್ರದೇಶಗಳು ಸಿರಿಯಾದಿಂದ ತರಾಬೀಲಸ್‌ವರೆಗಿನ ಕ್ಷಿಪ್ರ ವಿಜಯಗಳಿಂದ ಸಾಕಷ್ಟು ತೃಪ್ತರಾಗಿದ್ದ ಪರಿಸ್ಥಿತಿಯಲ್ಲಿ ಇರಲಿಲ್ಲ ಆದ್ದರಿಂದ ಅವರು ಇಸ್ಲಾಮಿನ ಸೈನ್ಯವನ್ನು ತರಾಬೀಲಸ್‌ನಲ್ಲಿ ಉಳಿಯಲು ಆದೇಶಿಸಿದರು.

ಹಝ್ರತ್ ಉಮರ್ ಫಾರೂಖ್‌ರ ಖಿಲಾಫತ್ ಕಾಲದಲ್ಲಿ, ಇಸ್ಲಾಮಿನ ಆಡಳಿತ ಪೂರ್ವದಲ್ಲಿ ಜೈಜೂನ್ ನದಿ ಮತ್ತು ಸಿಂಧ್ ನದಿಯಿಂದ ಪಶ್ಚಿಮದಲ್ಲಿ ಆಫ್ರಿಕದ ಮರುಭೂಮಿ ತನಕ ಹಾಗೂ ಉತ್ತರ ದಿಕ್ಕಿನ ಏಶ್ಯದ ಕೋಚಕ್ ಪರ್ವತಗಳು ಮತ್ತು ಆರ್ಮೇನಿಯದಿಂದ ದಕ್ಷಿಣದಲ್ಲಿ ಅಲ್‌ಕಾಹಿಲ್ ಸಮುದ್ರ ಮತ್ತು ನೋಬ ತನಕ ಒಂದು ಜಾಗತಿಕ ದೇಶದ ರೂಪದಲ್ಲಿ ಲೋಕದ ನಕಾಶೆಯಲ್ಲಿ ಪ್ರಕಟವಾಗಿತ್ತು. ಎಲ್ಲರೂ ಇಸ್ಲಾಮಿನ ನ್ಯಾಯ ಮತ್ತು ಕರುಣೆಯ ನೆರಳಿನಲ್ಲಿ ಶಾಂತಿ ಮತ್ತು ನೆಮ್ಮದಿಯ ಜೀವಿತವನ್ನು ಕಳೆದರು. ಇಸ್ಲಾಂ ಧರ್ಮವು ತಮ್ಮ ವಿರೋಧಿಗಳಿಗೂ, ಸಾವಿರಾರು ವಿರೋಧಗಳಿದ್ದರೂ ಈ ಲೋಕದಲ್ಲಿ ಸಂಪೂರ್ಣ ಹಕ್ಕುಗಳನ್ನು ನೀಡಿತು. ಅವರ ಜೀವಿತವನ್ನು ಸಂಪೂರ್ಣವಾಗಿ ಗೌರವಿಸಿದರು.

(ಸಯ್ಯದ್ನಾ ಉಮರ್ ಬಿನ್ ಖತ್ತಾಬ್, ಮುಹಮ್ಮದ್ ಸಲಬಿಯವರ ವ್ಯಕ್ತಿತ್ವ ಮತ್ತು ಕಾರ್ಯಗಳು, ಪುಟಗಳು 765-766) (ಮುಜಮುಲ್ ಬಲದಾನ್, ಸಂಪುಟ-1, ಪುಟ-462, ದಾರುಲ್ ಕುತುಬ್ ಇಲ್‌ಮಿಯ ಬೈರೂತ್) (ಮುಜಮುಲ್ ಬಲದಾನ್, ಸಂಪುಟ-5, ಪುಟ-357, ನಭ, ದಾರುಲ್ ಕುತುಬ್ ಇಲ್‌ಮಿಯ ಬೈರೂತ್)

ಯುದ್ಧಗಳ ವೇಳೆ ಮುಸ್ಲಿಮರ ಆರಾಧನೆಯ ಮಟ್ಟ ಹೇಗಿತ್ತು ಎಂಬುದರ ಬಗ್ಗೆ ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಲೋಕದಲ್ಲಿ ಎಲ್ಲ ಸಂಗತಿಯೂ ಮೆಲ್ಲಮೆಲ್ಲನೆ ಅಭಿವೃದ್ಧಿಗೊಳ್ಳುತ್ತದೆ. ದೊಡ್ಡ ದೊಡ್ಡ ಕೆಲಸಗಳು ಸಹ ಒಂದೇ ಸವನೇ ಆಗುವುದಿಲ್ಲ. ಬದಲಾಗಿ ಮೆಲ್ಲಮೆಲ್ಲನೆ ಆಗುತ್ತದೆ. ಹಝ್ರತ್ ಪೈಗಂಬರರ(ಸ) ಕಾಲದಲ್ಲೂ ಎಲ್ಲ ಮುಸ್ಲಿಮರು ತಹಜ್ಜುದ್ ನಮಾಝ್ ನಿರ್ವಹಿಸುತ್ತಿರಲಿಲ್ಲ. ಮೆಲ್ಲಮೆಲ್ಲನೇ ಅವರಿಗೆ ಅದರ ಅಭ್ಯಾಸ ಮಾಡಲಾಗುತ್ತಿತ್ತು. ಯುದ್ಧದ ದಿನಗಳಲ್ಲಿ ಹಝ್ರತ್ ಪೈಗಂಬರ್(ಸ) ತಹಜ್ಜುದ್ ನಿರ್ವಹಿಸಿರಬಹುದು. ಆದರೆ ಕೆಲವೊಮ್ಮೆ ತಹಜ್ಜುದ್‌ಗಾಗಿ ಏಳುತ್ತಿರಲಿಲ್ಲವೆಂದು ವರದಿಗಳಲ್ಲಿ ಇವೆ. ಹೇಗಿದ್ದರೂ ಹಝ್ರತ್ ಉಮರರ(ರ) ಕಾಲದಲ್ಲಿ, ಮುಸ್ಲಿಮರು ಯುದ್ಧದ ದಿನಗಳಲ್ಲೂ ತಹಜ್ಜುದ್ ನಿರ್ವಹಿಸುತ್ತಿದ್ದರು. ಎಲ್ಲಿಯ ವರೆಗೆ ಎಂದರೆ, ಒಂದು ಸಲ ಹಿರ್ಖಲ್ ಮುಸ್ಲಿಮರ ಮೇಲೆ ರಾತ್ರಿ ಸಮಯದಲ್ಲಿ ಹಲ್ಲೆ ನಡೆಸಲು ನಿರ್ಧರಿಸಿದನು. ಇದರ ಬಗ್ಗೆ ಬಹಳ ಚರ್ಚೆಯಾಯಿತು. ಕೊನೆಗೆ ರಾತ್ರೆ ಸಮಯದಲ್ಲಿ ಹಲ್ಲೆ ನಡೆಸದೇ ಇರುವುದು ಲೇಸೆಂದು ತೀರ್ಮಾನವಾಯಿತು. ಏಕೆಂದರೆ, ಮುಸ್ಲಿಮರ ಮೇಲೆ ರಾತ್ರೆ ಸಮಯದಲ್ಲಿ ಹಲ್ಲೆ ನಡೆಸುವುದರಿಂದ ಯಾವುದೇ ಪ್ರಯೋಜನವಿಲ್ಲ. ಏಕೆಂದರೆ, ಅವರು ಮಲಗುವುದೇ ಇಲ್ಲ. ಅವರು ತಹಜ್ಜುದ್ ನಿರ್ವಹಿಸುತ್ತಾರೆ. ಇದು ಸಹ ಅಭಿವೃದ್ಧಿಯ ಲಕ್ಷಣವಾಗಿದೆ. ಇದು ಆರಂಭದಲ್ಲಿ ಇರಲಿಲ್ಲ. ಆರಂಭದಲ್ಲಿ ಹಝ್ರತ್ ಪೈಗಂಬರ್(ಸ) ಇದಕ್ಕಾಗಿ ಉಪದೇಶಿಸಬೇಕಾಗುತ್ತಿತ್ತು. ಆದರೆ ನಂತರ ಮೆಲ್ಲಮೆಲ್ಲನೆ ದುರ್ಬಲರಿಗೂ ತಹಜ್ಜುದ್ ನಿರ್ವಹಿಸುವ ಅಭ್ಯಾಸವಾಯಿತು. (ಖುತ್‌ಬಾತೆ ಮಹ್ಮೂದ್, ಸಂಪುಟ-13, ಪುಟ-189)

ಖಲೀಫರ ಕಾಲದಲ್ಲಿ ನಡೆದ ಯುದ್ಧಗಳ ಪ್ರಸ್ತಾಪ ನಡೆಸುತ್ತಾ ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಹೋರಾಟ ನಡೆಸಲು ಮಾತ್ರ ಇಸ್ಲಾಂ ಆಜ್ಞಾಪಿಸುವುದಿಲ್ಲ. ಕೆಲವೊಮ್ಮೆ ಸಂದರ್ಭಾನುಸಾರ ದೌರ್ಜನ್ಯಗಳನ್ನು ಸಹಿಸಲು ನಿರ್ದೇಶನ ನೀಡುತ್ತದೆ. ನಿಮ್ಮ ಕೆನ್ನೆಗೆ ಯಾರಾದರೂ ಹೊಡೆದರೆ, ನೀವು ಸಹ ಕೆನ್ನೆಗೆ ಹೊಡೆಯಬಹುದು ಎಂಬ ಅನುಮತಿಯನ್ನು ಅಲ್ಲಾಹನು ಕೊಟ್ಟಿದ್ದರೂ, ಪ್ರತಿಕಾರ ಮಾಡುವುದು ಸರಿಯಲ್ಲವೆಂದು ತೋರುವ ಸಂದರ್ಭಗಳಲ್ಲಿ ಸುಮ್ಮನಿರಲು ಮತ್ತು ಕೆನ್ನೆಗೆ ಹೊಡೆದದಕ್ಕೆ ಬದಲಾಗಿ ಹೊಡೆಯಲು ಹೋಗಬೇಡಿ ಎಂದೂ ಅಲ್ಲಾಹನು ಹೇಳಿದ್ದಾನೆ. ಹಝ್ರತ್ ಅಬೂಬಕರ್(ರ) ದೌರ್ಜನ್ಯ ಮಾಡಿರಲಿಲ್ಲ, ಬದಲಾಗಿ ಸೀಸರ್ ದೌರ್ಜನ್ಯ ಮಾಡಿದ್ದನು, ಹಝ್ರತ್ ಉಮರ್(ರ) ದೌರ್ಜನ್ಯ ಮಾಡಿರಲಿಲ್ಲ, ಬದಲಾಗಿ ಕೊಸ್ರೋ ದೌರ್ಜನ್ಯ ಮಾಡಿದ್ದನು. ಹಝ್ರತ್ ಉಸ್ಮಾನ್(ರ) ದೌರ್ಜನ್ಯ ಮಾಡಿರಲಿಲ್ಲ ಬದಲಾಗಿ ಅಫ್ಘಾನಿಸ್ತಾನ, ಬುಖಾರದ ಗೋತ್ರಗಳು ಮತ್ತು ಕುರ್ದಿಗಳು ದೌರ್ಜನ್ಯಗಳನ್ನು ಮಾಡಿದ್ದರು ಎಂಬುದಾಗಿ ಪುರಾವೆಗಳ ಸಹಿತ ನಾವು ಸಾಬೀತುಪಡಿಸುತ್ತೇವೆ. ಆದರೆ ಹಝ್ರತ್ ಅಬೂಬಕರ್(ರ), ಹಝ್ರತ್ ಉಮರ್(ರ), ಹಝ್ರತ್ ಉಸ್ಮಾನ್(ರ) ಏಕೆ ಕ್ಷಮಿಸಲಿಲ್ಲ ಎಂಬುದಕ್ಕೆ ಪುರಾವೆಗಳು ಸಿಗುವುದಿಲ್ಲ. ಇದಕ್ಕೆ ಕಾರಣವೇನೆಂದರೆ, ಕೆಲವು ಗೋತ್ರಗಳು ಮುಸ್ಲಿಮರ ಮೇಲೆ ದಾಳಿ ಮಾಡಿರಲಿಲ್ಲ, ಬದಲಾಗಿ ಮುಸ್ಲಿಮರು ಎಚ್ಚರಗೊಳ್ಳಲು ಮತ್ತು ಮುಸ್ಲಿಮರಲ್ಲಿ ಒಂದು ಹೊಸ ಸ್ಫೂರ್ತಿ ಹಾಗೂ ಹೊಸ ಜೀವಿತ ಉಂಟಾಗಲಿಕ್ಕಾಗಿ ಅಲ್ಲಾಹನು ದಾಳಿ ನಡೆಸಿದ್ದನು ಎಂದು ಅವರು ಮೂವರಿಗೂ ಗೊತ್ತಿತ್ತು. (ಖುತ್‌ಬಾತೆ ಮಹ್ಮೂದ್, ಸಂಪುಟ-30, ಪುಟ-175-176)

ಹಝ್ರತ್ ಮುಸ್ಲಿಹ್ ಮೌಊದ್(ರ) ಈ ಸಂಬಂಧವಾಗಿ ಒಂದು ಖುತ್ಬದಲ್ಲಿ ಜಮಾಅತಿಗೆ ಹೀಗೆ ಉಪದೇಶ ನೀಡಿದರು: ಆಪತ್ತುಗಳು ಮತ್ತು ಕಷ್ಟತೆಗಳು ನಮ್ಮನ್ನು ಅಲ್ಲಾಹನ ಸಮೀಪಗೊಳಿಸುವಂತದ್ದಾಗಿರಬೇಕು. ಇವೇ ಅನಂತರ ವಿಜಯಕ್ಕೆ ಕಾರಣವಾಗುತ್ತವೆ. ನಾವು ಕೇವಲ ಈ ಸಂಗತಿಗಳಿಗೆ ಹೆದರಿ ಹಿಂದೆಸರಿಯುವುದಾದರೆ ಮತ್ತು ತಮ್ಮ ಸುಧಾರಣೆಯ ಕಡೆಗೆ ಗಮನಹರಿಸುವುದಿಲ್ಲವೆಂದಾದರೆ, ಪ್ರಗತಿ ಉಂಟಾಲಾರದು. ಅಭಿವೃದ್ಧಿಗಳು ಲಭಿಸುವ ಮತ್ತು ವಿಪತ್ತುಗಳೂ ಕೊನೆಗೊಳ್ಳುವ ದಿನಗಳಲ್ಲಿ ಅಲ್ಲಾಹನ ಕಡೆಗೆ ವಿಶೇಷವಾಗಿ ಹೆಚ್ಚು ಗಮನಹರಿಸಬೇಕಾಗಿದೆ. ನಾವು ನಮ್ಮ ಆಧ್ಯಾತ್ಮಿಕ ಏಳಿಗೆ ಮತ್ತು ಆಧ್ಯಾತ್ಮಿಕ ಒಳಿತಿನ ಕಡೆಗೆ ಗಮನಹರಿಸಬೇಕು. ಇಂದು ಸಹ ಅಹ್ಮದಿಯರು ಈ ಸಂಗತಿಯನ್ನು ಅರಿಯಬೇಕು.

*(ಪುಟ ಸಂಖ್ಯೆ 11ರ ಉಳಿದ ಭಾಗ)*

ಅವರು ಬೀಮಾ ಮಾಡಿಸಬೇಕಾಗಿದೆ ಎಂದು ಉತ್ತರ ಪ್ರದೇಶ ಸರಕಾರವು ಆಜ್ಞೆ ಹೊರಡಿಸಿದೆ. ಇದು ಜಾಯಝ್ ಆಗಿದೆಯೇ?

ಹುಝೂರ್ ನುಡಿದರು. ಈ ಸಂಬಂಧ ನೆನಪಿಡಬೇಕಾದ ವಿಷಯವೇನೆಂದರೆ ಈ ಆಜ್ಞೆ ಕೇವಲ ಉತ್ತರ ಪ್ರದೇಶ ಸರಕಾರ ಮಾತ್ರವಲ್ಲ. ಪಂಜಾಬ್ ಸರಕಾರದ್ದು ಆಗಿದೆ. ಈ ಬೀಮಾ ಕಾನೂನಿನನ್ವಯವಾಗಿದೆ. ಸರಕಾರ ಅದನ್ನು ಕಡ್ಡಾಯಗೊಳಿಸಿದೆ. ಆದುದರಿಂದ ಅದು ತನ್ನ ವೈಯಕ್ತಿಕ ಲಾಭಗೋಸ್ಕರವಲ್ಲ. ಬದಲು ಸರಕಾರ ಆಜ್ಞೆ ಮೇರೆಗೆ ಆಗಿದೆ. ಆದುದರಿಂದ ಜಾಯಝ್ ಆಗಿದೆ." (ಅಲ್-ಫಝ್ಲ್, 04-11-1961)

ಬೀಮಾ ಕುರಿತು ಫತ್ವಾ ಕಮಿಟಿ ಈ ಕೆಳಗಿನ ಶಿಫಾರಸ್ಸನ್ನು ಹಝ್ರತ್ ಖಲೀಫತುಲ್ ಮಸೀಹ್ ತೃತೀಯರ (ರಹ) ಸಮ್ಮುಖ ಪ್ರಸ್ತುತಪಡಿಸಲಾಯಿತು. ಅದನ್ನು ಮಸೀಹ್ ಮೌಊದ್[ಅ] ಮತ್ತು ಹಝ್ರತ್ ಖಲೀಫತುಲ್ ಮಸೀಹ್ ದ್ವಿತೀಯರ ಫತ್ವಾದ ಅನ್ವಯ ಎಲ್ಲಿಯವರೆಗೆ ಬೀಮಾ ಕಂಪನಿಗಳ ಒಡಂಬಡಿಕೆ ಬಡ್ಡಿ ರಹಿತ, ಜೂಜಿನಿಂದ ಮುಕ್ತವಾಗಿರುವುದಿಲ್ಲವೋ ನಾಜಾಯಝ್ ಆಗಿದೆ. ಈ ಫತ್ವಾ ಶಾಶ್ವತ ರೀತಿಯ ಮತ್ತು ಅಪರಿವರ್ತನೀಯವಾಗಿದೆ. ಆದರೆ ಸಮಯ ಸಮಯಕ್ಕೆ ಅದರ ಮೇಲೆ ಪರಿಶೀಲನೆ ಮಾಡಬಹುದು. ಬೀಮಾ ಕಂಪನಿಗಳು ತಮ್ಮ ಕಾನೂನು ಪದ್ಧತಿಗಳಲ್ಲಿ ಜೂಜು ಅಥವಾ ಬಡ್ಡಿ ವಿಷಯದಲ್ಲಿ ಏನಾದರೂ ಬಿಡುವು ನೀಡುತ್ತದೆಯೇ ಎಂದು.

ಮಜ್ಲಿಸ್ ಇಫ್ತಾ ಈ ನೆಲೆಯಲ್ಲಿ ಬೀಮಾ ಕಂಪನಿಗಳ ಪ್ರಸಕ್ತ ಪದ್ಧತಿ ಕಾರ್ಯವೈಖರಿಯ ಮೇಲೆ ದೃಷ್ಟಿ ಹಾಯಿಸಿ ಈ ನಿರ್ಣಯ ಕೈಗೊಂಡಿದೆ. ಪ್ರಸಕ್ತ ಜಾಗತಿಕ ಸಾಂಪತ್ತಿಕ ವ್ಯವಹಾರಗಳು ಬಡ್ಡಿರಹಿತವಾಗಿಲ್ಲ. ಆದರೆ ಈಗ ಕಂಪನಿ ಮತ್ತು ಪಾಲಿಸಿದಾರರ ಮಧ್ಯೆ ಇಂತಹ ಒಡಂಬಡಿಕೆಯ ಸಾಧ್ಯತೆ ಇದೆ. ಅದು ಬಡ್ಡಿ ಜೂಜುಗಳಿಂದ ಮುಕ್ತವಾಗಬಹುದು. ಆದುದರಿಂದ ಈ ಶರತ್ತಿನೊಂದಿಗೆ ಬೀಮಾ ಮಾಡಿಸಲು ಅಡ್ಡಿ ಏನಿಲ್ಲ. ಬೀಮಾ ಕಂಪನಿಯಿಂದ ಪಾಲಿಸಿದಾರನು ಯಾವ ಬಡ್ಡಿಯೂ ಪಡೆಯುವುದಿಲ್ಲ. (ರಿಜಿಸ್ಟರ್ ಫೈಸ್ಲಾಜಾತ್ ಮಜ್ಲಿಸ್ ಇಫ್ತಾ, ಪುಟ-60)

**(ಮುಂದುವರಿಯುವುದು)**

*(ಪುಟ ಸಂಖ್ಯೆ 02ರ ಉಳಿದ ಭಾಗ)*

ಹೀಗಿದೆ. ಅಲ್ಲಾಹನು ಮನುಷ್ಯನಿಗೆ ಜನ್ಮ ನೀಡಬಯಸಿದಾಗ ಅವನಿಗೆ ನೆಲದ ಎಲ್ಲ ಗುಣಗಳುಳ್ಳ ಶಕ್ತಿಯಿಂದ ಸೃಷ್ಟಿಸಿದನು. ಅದು ಹೊಸತನದಿಂದ ಪರಿಶುದ್ಧತೆ ಪಡೆದಿತ್ತು. ಅವನ ಹೆಸರು ಸಂಬೋಧ ರೂಪದಲ್ಲಿ ಮತ್ತು ಗ್ರಂಥದಲ್ಲಿ ಆದಮ್ ಎಂದು ಕರೆಯಲಾಗಿದೆ ಏಕೆಂದರೆ ಅವನಿಗೆ ಮಣ್ಣಿನಿಂದ ಸೃಷ್ಟಿಸಲಾಯಿತು. ಎಲ್ಲಾ ಲೋಕಗಳ ಗುಣಗಳು ಅವನಲ್ಲಿ ತುಂಬಲಾಯಿತು. ಅಲ್ಲದೇ ಅವನ ಸ್ವಭಾವದಲ್ಲಿ ಎರಡು ರೀತಿಯ ಪ್ರೇಮಭಾವವನ್ನು ಇಡಲಾಯಿತು. ಒಂದು ಮಾನವೀಯ ಪ್ರೇಮ ಎರಡನೆಯದಾಗಿ ಸೃಷ್ಟಿಕರ್ತನ ಪ್ರೇಮ. ಉದಾಹರಣೆಗೆ ಮಕ್ಕಳಲ್ಲಿ ತಾಯಿ ತಂದೆಯವರೊಂದಿಗೆ ಇದ್ದಂತಹ ಪ್ರೇಮ. ಅದಕ್ಕಾಗಿಯೇ ಅವನ ಹೆಸರು "ಇನ್ಸಾನ್" ಎಂದು ಇಡಲಾಗಿದೆ. ಈ ಪದನಾಮವು ತಸ್ನಿಯಾ (ದ್ವಿಅರ್ಥ) ಆಗಿದೆ. ಏಕೆಂದರೆ ಸದಾಕಾಲಕ್ಕೆ ಈ ಎರಡು ರೀತಿಯ ಪ್ರೇಮದ ಪದ ಅವನ ಎರಡು ಗುಣಗಳನ್ನು ಸಂಕೇತಿಸುವಂತಿರಬೇಕು. ಮತ್ತೆ ಅಲ್ಲಾಹನ ಇರಾದೆಯಂತೆ ದೈವನಿಯಮದಲ್ಲಿ ಹೀಗೆ ಬದಲಾವಣೆ ಉಂಟಾಯಿತು. ಹಲವು ಬದಲಾವಣೆ ನಂತರ ತಾಯಿಯ ಉದರ ಪರವಾಗಿ ಅದರ ಸೃಷ್ಟಿ ಆಗತೊಡಗಿತು. ಅಂದ ಹಾಗೆ.

1) ಮೊದಲ ಬೆಳವಣಿಗೆಯ ಹೆಸರು ವೀರ್ಯ ಅಂಟಿಕೊಳ್ಳುವ ವಸ್ತು ಎಂದು ಸಾರಿದೆ.

2) ಎರಡನೆಯ ದರ್ಜೆಯಲ್ಲಿ ಮನುಷ್ಯನ ಬೆಳವಣಿಗೆಗೆ, ಜೀವನ ಪ್ರಗತಿಯ ಸಂಕೇತವಾಗಿ ಗರ್ಭಾಶಯದಲ್ಲಿ ಅಂಟಿಕೊಳ್ಳುವ ಮಾಂಸಪಿಂಡದಿಂದ ಸೃಷ್ಟಿಸಿದೆ ಎಂದಿದ್ದಾನೆ.

3) ಅನಂತರ ಆ ಮಾಂಸಮುದ್ದೆಯನ್ನು ಅಸ್ಥಿಗಳನ್ನಾಗಿ ರೂಪಾಂತರಗೊಳಿಸಿದ್ದಾನೆ.

4) ಅನಂತರ ನಾವು ಅದನ್ನು ಇನ್ನೊಂದು ಸೃಸ್ಟಿಯಾಗಿ ಮಾರ್ಪಡಿಸಿದೆವು. ಹೀಗೆ ಅತ್ಯುತ್ತಮವಾಗಿ ಸೃಷ್ಟಿಸುವ ಅಲ್ಲಾಹನು ಅನುಗ್ರಹಪೂರ್ಣನಾಗಿದ್ದಾನೆ.

5) ಐದನೆಯ ಬೆಳವಣಿಗೆಯ ಹೆಸರು ಮಾಂಸ ಮುದ್ದೆ (ಲಹಮ್) ಎಂದು ಹೆಸರಾಗಿದೆ. ಲಹಮ್ ಅರಬಿಯಲಿ ಒಂದು ವಸ್ತು ಅಂಟಿಕೊಳ್ಳುವುದು ಅಥವ ಸಂಬಂಧ ಜೋಡಿಸುವುದು ಎಂದಾಗುತ್ತದೆ. ಆ ವಸ್ತು ಇನ್ನೊಂದು ವಸ್ತುವಿನೊಂದಿಗೆ ಸಂಬಂಧಪಟ್ಟಾಗ ಮಾಂಸವು ವಸ್ತು ರೀತಿಯಲ್ಲಿ ಶರೀರವನ್ನು ಮುಚ್ಚಿಕೊಳ್ಳುತ್ತದೆ. ಅಲ್ಲದೇ ಮಾಂಸವು ಎಲುಬಿನೊಂದಿಗೆ ಸೇರಿಕೊಳ್ಳುತ್ತದೆ. ಅದನ್ನು ಪರಸ್ಪರ ಜೋಡಿಸುತ್ತದೆ. ಮತ್ತು ಸಾನಿಧ್ಯ ದೊರಕಿಸಿಕೊಡುತ್ತದೆ.

6) ಆರನೇ ಘಟ್ಟವನ್ನು ಅಂತಿಮ ಸೃಷ್ಟಿ ಎನ್ನಲಾಗಿದೆ. ಅತ್ಯುತ್ತಮ ಸೃಷ್ಟಿಯಾದ ಕಾರಣ ಅದನ್ನು ಆತ್ಮ ಎಂದು ಕರೆಯಲಾಗಿದೆ.

7) ಮತ್ತು ಆ ಎಲ್ಲಾ ಸಂಕಲನ ಹೆಸರು ರಕ್ತನಾಳ ಎಂದಾಯಿತು.

8) ರಕ್ತನಾಳವು ತಾಯಿ ಉದರದಿಂದ ಉದ್ಭವವಾದಾಗ ಅದರ ಹೆಸರು "ವಲೀದ್" ಎಂದಾಯಿತು

9) ಮತ್ತೆ ಹಾಲು ಕುಡಿಯಲು ತಾಯಿಯ ಮೊಲೆಯ ಕಡೆ ತಿರುಗಿದಾಗ ದರ ಹೆಸರು "ಸಬಿ" ಎಂದಾಯಿತು.

10) ಮತ್ತು ಹಾಲುಣುವ ಅವಧಿಯವರೆಗೆ ಅದರ ಹೆಸರು "ರಝೀ" ಎಂದಾಯಿತು.

11) ಹಾಲುಣುವುದು ಬಿಟ್ಟಾಗ ಅದರ ಹೆಸರು –ಫತೀಮ್ ಹಾಗೂ ಖತೀಅ ಎಂದಾಯಿತು.

12) ಮತ್ತಷ್ಟು ಬೆಳವಣಿಗೆ ಹೊಂದಿದಾಗ "ದಾರಿಜ್" ಎಂದಾಯಿತು.

13) ಮತ್ತು ನಾಲ್ಕು ಅಂಗುಲಷ್ಟಾದಾಗ "ರುಬಾಯಿ" ಎಂದಾಯಿತು.

14) ಐದಷ್ಟಾಗುವಾಗ "ಖಮಾಸಿ".

15) ಹಾಲಿನ ದಂತುಗಳು ಬಿದ್ದು ಹೊದ ಮೇಲೆ – ಮಝ್ಗುರು".

16) ಮತ್ತೆ ಉಗಮವಾದಾಗ "ಮತ್ಗರ್".

17) ಹತ್ತು ವರ್ಷದವ ಆದಾಗ–ಮತ್ರರಅ.

18) ವೀರ್ಯ ಸ್ಖಲನ ಪ್ರಾರಂಭವಾದಾಗ "ಯಾಫಅ" ಮತ್ತು "ತುರಾಹಖ್.

19) ಪರಿಪೂರ್ಣ ಯೌವನ ಅವಸ್ಥೆಗೆ ತಲುಪಿದಾಗ–'ಹಝೂರ್".

20) ಮತ್ತೆ 30 ವರ್ಷದಿಂದ 40 ವರ್ಷದವರೆಗೆ "ಶಬಾಬ್".

21) ಮತ್ತೆ 60 ವರ್ಷದವರೆಗೆ "ಸಹಲ್"

22) ಮತ್ತೆ "ಶೇಖ್,"

23) ಮತ್ತೆ "ಖರಫ್," ಹೀಗೆ ವಯಸ್ಸಿನ ಪ್ರತಿಯೊಂದು ಹಂತಕ್ಕೆ ಅರಬಿ ಭಷೆಯಲ್ಲಿ ಬೇರೆ ಬೇರೆ ಹೆಸರುಗಳಿವೆ.

24) ಮರಣ ಹೊಂದಿದಗ "ಮುತವಫ್ಫಿ" ಹೆಸರಾಯಿತು. ಈ ಪದ ಸಂಬಂಧವಾಗಿ ಮೂಢರು ಇಲ್ಲಿಯವರೆಗೂ ವಿವಾದಲ್ಲಿ ಸಿಲುಕಿದ್ದಾರೆ.

ಅದೇ ಆಧಾರದಲ್ಲಿ ಮನುಷ್ಯನ ಪ್ರತಿಯೊಂದು ಭೌತಿಕ ಸ್ಥಿತಿಯ ಸಲುವಾಗಿ ಅರಬಿಯಲ್ಲಿ ಒಂದು ಪದ ಶೀರ್ಷಿಕೆಯಾಗುವುದು, ಪ್ರತಿಯೊಬ್ಬನಿಗೆ ಭಾವಿಸಲು, ಅನುಭವಿಸಲು ಅದರಲ್ಲಿ ಒಂದು ಪದ ಅವಶ್ಯವಾಗಿ ಉಪಸ್ಥಿತವಿರುತ್ತದೆ. ಬೇರೆ ಭಾಷೆಗಳಲ್ಲಿ ಅದರ ಉದಾಹರಣೆ ದೊರಕುವುದಿಲ್ಲ. ಅದರ ಉದಾಹರಣೆ ದೊರಕದಿದ್ದಾಗ ಅದಕ್ಕಿಂತ ಬೇರೆ ಸಾಕ್ಷ್ಯ ಏನು ಬೇಕಾಗಿದೆ? ವಿವೇಕದ ದೀಪ ಹಿಡಿದುಕೊಂಡು ಹುಡುಕಾಡಿರಿ ಮತ್ತು ಯೋಚಿಸಿರಿ. (ಅದೇ ಪುಟ–244)

**ಇಶ್ತಿರಾಕ್ (ಸಮ್ಮಿಶ್ರತೆ) ಅಲ್‌ಸಿನಾದ ಉದಾಹರಣೆ ಬಗ್ಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಂರವರು ನುಡಿಯುತ್ತಾರೆ.**

ಇಶ್ತಿರಾಕ್ ಅಲ್–ಸಿನಾದ ಉದಾಹರಣೆ ಬಯಸುವಿರಾದರೆ ಉಮ್ ಮತ್ತು ಉಮ್ಮ ಪದ ಸಾಕಾಗಿದೆ. ಈ ಪದ ಹಿಂದಿ, ಅರಬಿ, ಫಾರ್ಸಿ, ಇಂಗ್ಲೀಷ್ ಅಲ್ಲದೇ ಎಲ್ಲಾ ಭಾಷೆಗಳಲ್ಲೂ ಮಿಶ್ರಿತಗೊಂಡಿದೆ. ಅನುಭವ ಅದರ ಮೇಲೆ ಸಾಕ್ಷ್ಯವಾಗಿದೆ. ಆ ಹೆಸರಿಗೆ ಕಾರಣ ಸೂಚಿಸುತ್ತದೆ. ಈ ಪದ ಅರಬಿ ಭಾಷೆಯಿಂದ ಅರಬಿಯೇತರ (ಅಜಮಿ) ಭಾಷೆಯಲ್ಲಿ ಬಂದು ಸೇರಿದೆ. ಏಕೆಂದರೆ ಕಾರಣ ಸಹಿತ ಹೆಸರುಗಳ ವಾಸ್ತವ ಅರಬಿ ಭಾಷೆಯದ್ದೇ ವೈಶಿಷ್ಟ್ಯವಾಗಿದೆ ಬೇರೆ ಭಾಷೆಗಳಲ್ಲಿ ನ್ಯೂನತೆ ಮತ್ತು ಆಡಂಬರವಿದೆ. ಏಕೆಂದರೆ ವಾಸ್ತವ ಕಾರಣ ಸಹಿತ ಹೆಸರುಗಳ ಮಹಿಮೆಯೇನೆಂದರೆ ಯಾವ ಕಾಲಘಟ್ಟದಲ್ಲೂ ಅದು ಗುಣಾತ್ಮಕ ಹೆಸರಿನಿಂದ ಬೇರ್ಪಟ್ಟಿಲ್ಲ ಎಂದೂ ಯಾರೂ ಸಹ ಅದನ್ನು ಬೇರ್ಪಡಿಸಲು ಸಫಲವಾಗಲಿಲ್ಲ, ಮಾನವ ಪ್ರಯತ್ನಗಳು ವಿಫಲವಾದವು. ನೋಡುವವನು, ಆಲಿಸುವವನು ಆ ಬಗ್ಗೆ ಹೇಳಬಲ್ಲನು, ನಿಸ್ಸಂಶಯವಾಗಿಯೂ ಅದು ದೈವಿಕ ಭಾಷೆ ಆಗಿದೆ ಎಂದು. (ಅದೇ ಪುಟ–247)

**ಅರಬಿಯಲ್ಲಿ ಪದಗಳು ಕಡಿಮೆ ಇರುತ್ತವೆ. ಆದರೆ ಅರ್ಥಗಳು ಹೆಚ್ಚಿರುತ್ತವೆ.**

ಸಯ್ಯಿದ್ನಾ ಹಝ್ರತ್ ಮಸೀಹ್ ಮೌಊದ್(ಅ) ನುಡಿಯುತ್ತಾರೆ. ಅರಬಿ ಭಾಷೆಯು ಒಬ್ಬ ವಿವೇಕಯುತ ಸೂಕ್ಷ್ಮಜ್ಞಾನಿ ರೀತಿಯಲ್ಲಿ ಕಾರ್ಯ ನಿರ್ವಹಿಸುತ್ತದೆ. ಅದು ವಿವಿಧ ಮಾಧ್ಯಮದಿಂದ ತಮ್ಮ ಗುರಿಯನ್ನು ಸಾಧಿಸಬಲ್ಲದು. ಉದಾಹರಣೆಗೆ ಒಬ್ಬ ವಿವೇಕವಂತನು ಒಮ್ಮೊಮ್ಮೆ ಕಣ್ಣು ಅಥವಾ ಮೂಗು ಅಥವಾ ಕೈಗಳಿಂದಲೇ ಭಾಷೆಯು ಕೈಗೊಳ್ಳುವ ರೀತಿಯಲ್ಲಿ ಕಾರ್ಯ ಸಾಧನೆಯಲ್ಲಿ ಸಫಲರಾಗುತ್ತಾರೆ. ಅಂದರೆ ಸಾಂಕೇತಿಕವಾಗಿಯೇ ತನ್ನ ಇಂಗಿತ ವ್ಯಕ್ತಪಡಿಸುವುದರಲ್ಲಿ ಸಫಲರಾಗುತ್ತಾರೆ. ಅದೇ ನೈಪುಣ್ಯತೆ ಅರಬಿ ಭಾಷೆಗಿದೆ ಅಂದರೆ ಈ ಭಾಷೆ ಒಮ್ಮೆ "ಅಲಿಫ್ 'ಲಾಮ್" ಅಕ್ಷರದಿಂದಲೇ ಬೇರೆ ಭಾಷೆಗಳು ಕೆಲ ಪದಗಳಲ್ಲಿ ಸಹ ಸಾಧಿಸಲಾರದಂತಹ ಸಾಧನೆ ಮಾಡಿ ತೋರಿಸುತ್ತದೆ. ಒಮ್ಮೆ ಕೇವಲ "ತನ್ವೀನ್" ಯಿಂದಲೆ ಬೇರೆ ಭಾಷೆಗಳು ವಿವಿಧ ವಾಕ್ಯಗಳಲ್ಲಿ ಮಾಡದಂತಹ ಸಾಧನೆ ಮಾಡಿ ತೋರಿಸುತ್ತದೆ. ಝೇರ್ ಝುಬರ್ ಪೇಶ್ (ಇ. ಅ ಉ ಸ್ವರಗಳು) ಸ್ವರಗಳಿಂದಲೇ ಬೇರೆ ಭಾಷೆಗಳು ವಾಕ್ಯಗಳಿಂದಲೂ ಸ್ಪರ್ಧಿಸದಂತಹ ವೈಶಿಷ್ಟ್ಯತೆ ಹೊಂದಿರುತ್ತದೆ. ಅರಬಿ ಭಾಷೆಯ ಕೆಲ ಪದಗಳು ಸಹ ಅತಿ ಸಣ್ಣ ಸಣ್ಣವಾಗಿದ್ದರೂ ಆಳವಾದ ದೀರ್ಘವಾದ ಅರ್ಥ ಹೊಂದಿರುತ್ತವೆ. ಅದನ್ನು ನೋಡಿ ಆಶ್ಚರ್ಯವಾಗುತ್ತದೆ. ಈ ಅರ್ಥಗಳು ಹೇಗೆ ಉದ್ಭವವಾದವು ಎಂದು. ಉದಾಹರಣೆಗೆ "ಅರಝ್ತ್" ವಿನ ಅರ್ಥ ನಾನು ಮಕ್ಕ, ಮದೀನಾ ಮತ್ತು ಅದರ ಸುತ್ತಮುತ್ತಲಿರುವ ಎಲ್ಲಾ ಸ್ಥಳಗಳನ್ನು ನೋಡಿ ಬಂದಿರುತ್ತೇನೆ ಎಂದು, ಮತ್ತು "ತಹಫಲ್ತು" ವಿನ ಅರ್ಥ, ನಾನು ಸಕ್ಕರೆಯ ರೊಟ್ಟಿ ತಿನ್ನುತ್ತೇನೆ, ಮತ್ತು ಯಾವಾಗಲೂ ಸಕ್ಕರೆಯ ರೊಟ್ಟಿ ತಿನ್ನುವ ಪ್ರತಿಜ್ಞೆ ಮಾಡಿದ್ದೇನೆ. ಹಾಗೆಯೇ "ಜಸ್ಮುನ್" ಅರ್ಥ–ಅರ್ಧ ರಾತ್ರಿ ಕಳೆದಾಯಿತು ಮತ್ತು "ಹೀಅಲ್" ಅರ್ಥ ಬನ್ನಿ ನಮಾಝ್ ನಿರ್ವಹಿಸಿ, ನಮಾಝಿನ ಸಮಯವಾಗಿದೆ. ಅದೇ ರೀತಿ ಹಲವು ಪದಗಳು ಹೀಗಿವೆ ಅದು ಕೇವಲ ಒಂದು ಅಕ್ಷರವಾಗಿರುತ್ತದೆ. ಆದರೆ ಎರಡು ಅಥವಾ ಮೂರು ಪದಗಳಷ್ಟು ಅರ್ಥಕೊಡುತ್ತದೆ. ಉದಾಹರಣೆಗೆ:

ಶಿ

ತನ್ನ ಬಟ್ಟೆ ಮೇಲೆ ಅಚ್ಚು ಹಾಕು

ಖಿ ಯ್

ನಿಗಾವಹಿಸು ಸಮೀಪವಾರು ನೆನಪಿಸು ವಾಗ್ದನ ಮಾಡು

ಲಿ

ನಿಧಾನವಾಗಲಿ, ಅವರಸರವಾಗಿ ಆಗಲಿ ಚಲಿಸಬೇಡ, ಬದಲು ಮಧ್ಯಮಗತಿಯನ್ನು ಅನುಸರಿಸು

ಇ

ಹರಿದುಹೋಗು, ದುರ್ಬಲನಾಗು. (ಅದೇ ಪುಟ 132)

**ಅರಬಿ ಭಾಷೆಯು ಎಲ್ಲಾ ಭಾಷೆಗಳ ಮೇಲೆ ಪ್ರಭುತ್ವ ಹೊಂದಿದೆ.**

ಸಯ್ಯಿದ್ನಾ ಹಝ್ರತ್ ಮಸೀಹ್ ಮೌಊದ್(ಅ)

ನುಡಿಯುತ್ತಾರೆ. ಗಾಢವಾದ ಸಂಶೋಧನೆಯಿಂದ ಮತ್ತು ದೂರದೃಷ್ಟಿಯಿಂದ ಯೋಚಿಸಿ. ಅವಲೋಕಿಸಿ ನೋಡಿದಾಗ ನಾವು ಒಪ್ಪಬೇಕಾಗುತ್ತದೆ. ಅರಬಿ ನಿಘಂಟು ಎಲ್ಲಾ ನಿಘಂಟುಗಳಿಂದಲೂ ವಿಶಾಲತೆ ಹೊಂದಿದೆ. ಅದು ದರ್ಜೆಯಲ್ಲಿ ಸರ್ವಶ್ರೇಷ್ಠವಾಗಿದೆ. ಕಾರಣ್ಯಗಳಲ್ಲಿ ಎಲ್ಲರಿಗಿಂತ ಮಿಗಿಲಾದುದಾಗಿದೆ ಮತ್ತು ತತ್ವಜ್ಞಾನದಲ್ಲಿ ಎಲ್ಲದಕ್ಕಿಂತ ಮಿಂಚುಳ್ಳ ಮತ್ತು ಶಬ್ದಗಳ ವ್ಯವಸ್ಥೆಯಲ್ಲಿ ಎಲ್ಲದಕ್ಕಿಂತ ಪರಿಪೂರ್ಣ, ಸಂಕಲನದ (ಮುರಕ್ಕಬಾತ್) ದರ್ಜೆಗಳಲ್ಲಿ ಅತ್ಯಧಿಕ ಉಚಿತಸ್ಥಾನಕ್ಕೆ ತಲುಪಿದ ಹಾಗೂ ಸಾಹಿತ್ಯ ಮತ್ತು ಸಂಸ್ಕೃತಿಯಲ್ಲಿ ಹೆಚ್ಚು ಸಾಕ್ಷ್ಯವುಳ್ಳ ಮತ್ತು ಎಲ್ಲಾ ಗುಣಗಳಲ್ಲಿ ಅಲ್ಲಾಹನ ಕಡೆಯಿಂದ ಸರ್ವಾಧಿಕ ಪರಿಪೂರ್ಣತೆ ಮತ್ತು ಅದರ ಹೆಸರಿನ ರಚನೆಯಲ್ಲಿ ಹಲವು ರಹಸ್ಯಗಳು ಅಡಗಿರುತ್ತವೆ. ಅವುಗಳನ್ನು ಉಚ್ಛರಿಸುವ ಮತ್ತು ಶ್ರೇಣಿಗಳು ಜರುಗಿಸುತ್ತವೆ. (ಅದೇ ಪುಟ 217).

**ಐದು ಸಾವಿರ ರೂಪಾಯಿ ಬಹುಮಾನ ಪಂಥಾಹ್ವಾನದ ಪುನರುಚ್ಛಾರ**

ಸಯ್ಯಿದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ನುಡಿಯುತ್ತಾರೆ.

ನಾವು ಈ ಮೊಕದ್ದೊಮೆಯನ್ನು ಕೇವಲ ವಾದಕ್ಕೆ ಸೀಮಿತಗೊಳಿಸುವುದಿಲ್ಲ. ನಾವು ಅದನ್ನು ಬಗೆಹರಿಸಲು ಐದು ಸಾವಿರ ರೂಪಾಯಿಗಳ ಜಾಹೀರಾತು ಈ ಗ್ರಂಥಧೊಂದಿಗೆ ಸೇರಿಸಿದ್ದೆವು. ಮ್ಯಾಕ್ಸ್ ಮಿಲ್ಲರ್ ಆಗಲಿ ಅಥವಾ ಯಾರೇ ಆಗಲಿ ಈ ತರ್ಕವನ್ನು ಅಲ್ಲಗಳೆದರೆ, ಅವರಿಗಿರುವ ನೇರ ಮಾರ್ಗವೆಂದರೆ ಅವರು ತನ್ನ ಮಾತುಗಾರಿಕೆ ಬಿಟ್ಟು ಸಮ್ಮತವಾದ ಸಾಕ್ಷ್ಯಗಳ ಸಮೇತ ಸಾಬೀತು ಮಾಡಿ ತೋರಿಸಿ, ಐದು ಸಾವಿರ ರೂಪಾಯಿಗಳು ನಗದಾಗಿ ಪಡೆದುಕೊಳ್ಳಲಿ. (ಅದೆ ಪುಟ 161 ಟಿಪ್ಪಣಿ)

**ಸಯ್ಯಿದ್‌ನಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಈ ಬಗ್ಗೆ ಮರುನುಡಿದರು.**

ಅಪಮಾನಿತನಾಗಿ ಜೀವಿಸುವುದು ಯಾವ ಜೀವನ. ನಿಮಗೆ ಸ್ವಲ್ಪವಾದರೂ ಸ್ವಾಭಿಮಾನವಿದ್ದರೆ ಎದ್ದೇಳಿರಿ. ಅಥವಾ ಯಾವುದೇ ಆಳವಾದ ಭಾಷೆಯಲ್ಲಿ ಮುಳುಗಿ ಸಾಯಿರಿ. ನಾಚಿಕೆ ಹೊಂದಿರುವ ಜನರ ಹಾಗೆ ಹೋಗಿ ಸಾಯಿರಿ. ಸ್ಪರ್ಧೆಗೆ ಬರುವುದಾದರೆ ನಾನು ನಿಮಗೆ ಐದು ಸಾವಿರ ರೂಪಾಯಿಗಳನ್ನು ನೀಡುವೆನು. ಶರತ್ತೇನೆಂದರೆ, ನೀವು ವಿಧಿಬದ್ಧ ರೀತಿಯಲ್ಲಿ ಉತ್ತರ ನೀಡಿರಿ. ಮತ್ತು ಎರಡು ತೀರ್ಪುಗಾರರನ್ನು ಮಧ್ಯಸ್ಥಿಕೆ ವಹಿಸಿ ಆಣೆ ಮಾಡಿ ಸಾಕ್ಷಿ ವಹಿಸಿರಿ. ಏಕೆಂದರೆ ವಿವೇಕವಂತರಿಗೆ ನ್ಯಾಯ ತೀರ್ಮಾನ ಆಗಲಿ ಮತ್ತು ಯಾವ ನೆಪಗಾರಿಕೆಗೆ ಅವಕಾಶ ದೊರೆಯದಂತಾಗಲಿ. ಇದು ನನ್ನ ಮೇಲೆ ದಂಡವಿದ್ದಂತೆ, ನಾನು ಸುಳ್ಳುಗಾರನಾದರೆ, ಈ ಬಹುಮಾನವನ್ನು ಪಡೆಯಲು ಸಿದ್ಧರಾಗಿರಿ. ಅಥವಾ ತಮ್ಮ ಭಾಷೆಯ ಪರವಾಗಿ ವಾದಿಸಲು ಏನಾದರೂ ಸಾಹಸ ತೋರಿಸಿರಿ ನನ್ನ ಶರತ್ತಿನ ರೂಪಾಯಿಗಳನ್ನು ಬಯಸಿದ್ದಲ್ಲಿ ಜಮಾ ಮಾಡಿಕೊಳ್ಳಿರಿ. ನಿಮಗೇನಾದರೂ ಸಂಶಯವಿದ್ದರೆ ಅಥವಾ ಭಯವಿದ್ದರೆ, ನೀವು ಬಯಸಿದ್ದನ್ನು ಸ್ವೀಕರಿಸುವೆನು. ನೀವು ಬರೆಸುವುದನ್ನು ಬರೆಯುವೆನು. ನೀವು ಕೇಳುವುದಕ್ಕೆಲ್ಲ ಸಮಂಜಸವಾದ ಉತ್ತರ ನೀಡುವೆನು. ಏಕೆಂದರೆ ನೀವು ತೃಪ್ತಿಪಡುವಂತಾಗಲಿ ಮತ್ತು ನಿಮಗೆ ನಿಶ್ಚಿತವಾಗಲಿ, ನೀವು ಹೇಳಿದೆಲ್ಲಾ ನಾನು ಮಾಡುವೆನು, ನೀವು ನ್ಯಾಯಸಮ್ಮತವಾಗಿ ಆಜ್ಞೆ ನೀಡಿದರೆ, ನಾನು ನಿಮ್ಮ ಮೇಲೆ ಒತ್ತಡ ಹೇರಲು ಬಯಸುವುದಿಲ್ಲ. ನಾನು ಕೆಟ್ಟದ್ದನ್ನು ಬಯಸುವವರಲ್ಲಿ ಇಲ್ಲ. ನನ್ನನ್ನು ಇನ್‌ಶಾಅಲ್ಲಾಹ್ ನ್ಯಾಯವಂತನಾಗಿ ಭಾವಿಸುವಿರಿ. ನಾನು ನೋಡುತ್ತಿದ್ದೇನೆ. ಸಮೀಪದಲ್ಲೇ ನಿಮ್ಮೆಲ್ಲರ ಬಾಯಿ ಮುಚ್ಚಿ ಹೋಗುವುದು. ಶಂಕೆ ಅನುಮಾನಗಳು ಸೆರೆಯಲ್ಪಡುವುದು ನ್ಯಾಯಪೂರ್ತಿಕರಣ ಆಗಿ ತೀರುವುದು. ಶತ್ರುಗಳು ನಮ್ಮ ಮುರಾವೆಗಳನ್ನು ನೋಡಿ ಪಲಾಯನ ಮಾಡುವರು(ಅದೇ ಪುಟ 239)

ಮುಂದೆ ಇನ್‌ಶಾಅಲ್ಲಾಹ್ ನಾವು ಸಯ್ಯಿದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ರವರ ಇನ್ನೊಂದು ಬಹುಮಾನದ ಪಂಥ್ವಾನ ಓದುಗರ ಸೇವೆಯಲ್ಲಿ ಪ್ರಸ್ತುತಪಡಿಸುವೆವು.

**(ಮನ್ಸೂರ್ ಅಹ್ಮದ್ ಮಸ್ರೂರ್)**

*(ಪುಟ ಸಂಖ್ಯೆ 01ರ ಉಳಿದ ಭಾಗ)*

ಸಂಕೇತವಾಗಿರುತ್ತದೆ. ದಣಿವಿನ ಅರ್ಥವೇ ಮನುಷ್ಯನ ಶರೀರದಲ್ಲಿ ಕೆಲ ಎಣ್ಣೆ ಅಂಶಗಳು ಅಥವಾ ಉಪಯುಕ್ತ ಅಂಶಗಳ ಹೊರ ಹೋಗುವಿಕೆ ಆಗಿರುತ್ತದೆ ಮತ್ತು ದಣಿವು ಕೆಲಸ ಬಿಟ್ಟು ತುಸು ವಿಶ್ರಾಂತಿ ಪಡೆಯಬೇಕಾದ ಸುಲಿವು ಆಗಿರುತ್ತದೆ. ಅಥವಾ ಆಹಾರ ಬೇಕಾಗುತ್ತದೆ. ನಾನು ಒಂದು ವೈದ್ಯ ಗ್ರಂಥದಲ್ಲಿ ಓದಿದ್ದೇನೆ. ಕೈಯ ಒಂದು ಚಳಕದಲ್ಲಿ ಮಾನವ ಶರೀರದ ಎಷ್ಟೋ ಮಿಲಿಯನ್ ಸೆಲ್‌ಗಳು ವ್ಯರ್ಥವಾಗುತ್ತವೆ. ಅಂದ ಹಾಗೆ ಕೆಲ ಅವಧಿ ಕೆಲಸ ಮಾಡಿದ ನಂತರ ದಣಿವು ಆದಾಗ ಶರೀರದ ಸ್ವಲ್ಪ ಮಟ್ಟಿನ ಶಕ್ತಿ ಕಳೆದುಹೋಯಿತು ಎಂಬ ಭಾವನೆ ಬರುತ್ತದೆ. ಅದರೆ ನಷ್ಟ ಭರಿಸಬೇಕಾಗುತ್ತದೆ. ಅಂದಹಾಗೆ ದಣಿವು ನಷ್ಟದ ಸಂಕೇತವಾಗಿದೆ, ಅಲ್ಲಿ (ಸ್ವರ್ಗದಲ್ಲಿ) ದಣಿವು ಆಗುವುದಿಲ್ಲ ಎಂಬ ಮಾತು ಅಲ್ಲಿ ದೇಹದಲ್ಲಿ ಬದಲಾವಣೆ ಉಂಟಾಗುವುದಿಲ್ಲ ಎಂದೇ ಅರ್ಥ. ಅದರಿಂದ ಅದರ ಕಾರ್ಯ ನಷ್ಟ ಹೊಂದಿದನ್ನು ಮತ್ತೆ ಪಡೆಯುವುದು ಆಗಿರುವುದಿಲ್ಲ. ಬದಲು ಶಕ್ತಿ ನೀಡುವುದೇ ಆಗಿರುವುದು ಅಂದರೆ ಆ ಜೀವನದಲ್ಲಿ ಎಂದೂ ಯಾವ ರೀತಿಯಲ್ಲೂ ಹೆಜ್ಜೆ ಹಿಂಜರಿಯದು ಕೇವಲ ಮುನ್ನಡೆಯುವುದೇ ಅದರ ಕಾರ್ಯವಾಗುವುದು.

ಅದಾಗ್ಯೂ ಈ ತಾತ್ಕಾಲಿಕ ನಷ್ಟದ ಪರಿಣಾಮವಾಗಿ ಅದು ದಣಿವಿನ ರೂಪದಲ್ಲಿ ಪ್ರಕಟಗೊಳ್ಳುತ್ತದೆ ಮತ್ತು ಮನುಷ್ಯನಿಗೆ ಮರಣವು ಬರುತ್ತದೆ. ಏಕೆಂದರೆ ನಿಧಾನವಾಗಿ ಶರೀರದ ಶಕ್ತಿಗಳು ಕ್ಷೀಣಿಸುತ್ತವೆ. ಸ್ವರ್ಗದಲ್ಲಿ ಈ ತರಹ ಕ್ಷೀಣಿಸುವಿಕೆಯನ್ನು ಅಲ್ಲಗಳೆಯಲಾಗಿದೆ. ಅದಕ್ಕಾಗಿಯೇ ಹೇಳಲಾಗಿದೆ. ಅಲ್ಲಿಂದ ಹೊರಹಾಕಲ್ಪಡುವುದಿಲ್ಲ ಅಂದರೆ ಅಲ್ಲಿ ಅವರಿಗೆ ಯಾವ ಮರಣವು ಇಲ್ಲ.

ನೆನಪಿರಲಿ. ಸ್ವರ್ಗ ಎಂಬುದು ಒಂದು ಆಧ್ಯಾತ್ಮಿಕ ಸ್ಥಾನವಾಗಿದೆ. ಅಲಂಕಾರಿಕ ರೂಪದಲ್ಲಿ ಅವುಗಳನ್ನು ಲೌಕಿಕ ಅನುಗ್ರಹಗಳಿಗೆ ಹೋಲಿಸಿ ಹೇಳಲಾಗಿದೆ. ಆದರೆ ವಾಸ್ತವದಲ್ಲಿ ಆ ಅನುಗ್ರಹಗಳು ಹೇಗಿವೆ ಎಂದರೆ ಮಾನವ ಮಿದುಳು ಅದನ್ನು ಊಹಿಸಲು ಸಾಧ್ಯವಿಲ್ಲ. ಈ ವಚನದಲ್ಲಿ ತಿಳಿಸಲಾಗಿದ್ದೇನೆಂದರೆ ಇಹಲೋಕದಲ್ಲಿ ಅವರಿಗೆ ಶೈತಾನರೊಂದಿಗೆ ಹೋರಾಡಬೇಕಾಗಿತ್ತು. ಅಲ್ಲಿ ಈ ಹೋರಾಟದಿಂದ ಮುಕ್ತರಾಗುವರು. ಅಲ್ಲಿ ಅವರು ಎಲ್ಲ ನಷ್ಟಗಳಿಂದ ಸುರಕ್ಷಿತವಾಗಿರುವರು. ಶೈತಾನನು ಅವರಿಗೆ ತಾತ್ಕಾಲಿಕವಾಗಲಿ, ಶಾಶ್ವತರೂಪದಲ್ಲಾಗಲಿ ನಷ್ಟ ಉಂಟುಮಾಡಲಾರನು.

ಈ ವಚನದಿಂದ ಸಮರ್ಥಿಸಲಾಗಿದೆ. ಸ್ವರ್ಗವು ಆಲಸಿಗಳ ತಾಣವಲ್ಲ. ಬದಲು ಅಲ್ಲಿ ವಾಸಿಸುವವರು ಸಹ ಕಾರ್ಯನಿರತವಾಗಿರುತ್ತಾರೆ. ಏಕೆಂದರೆ ಅಲ್ಲಿ ಕೆಲಸವಿಲ್ಲದಿರುತ್ತಿದ್ದರೆ ದಣಿವನ್ನು ಅಲ್ಲಗಳೆಯಲಾಗುತ್ತಿರಲಿಲ್ಲ. ಅಂದ ಹಾಗೆ ಸ್ವರ್ಗವು ಒಂದು ಊಟ ಮಾಡುವ ಕುಡಿಯುವ ಮತ್ತು ಮೋಜು ಮಾಡುವ ಸ್ಥಾನವಾಗಿದೆ ಎಂದು ಭಾವಿಸುವವರು ತಪ್ಪು ಮಾಡುತ್ತಿದ್ದಾರೆ. ಸ್ವರ್ಗವು ಆರಾಧನೆಯ ನಿಜವಾದ ಸ್ಥಾನವಾಗಿದೆ. ಉದಾಹರಣೆಗೆ ಅಲ್ಲಾಹನು ಹೇಳಿದನು. **"ಫದ್‌ಖುಲೀ ಫೀ ಇಬಾದೀ ವದ್ ಖುಲೀ ಜನ್ನತಿ"** (ಸೂರ: ಅಲ್‌ಫಜ್ರ್) ಸ್ವರ್ಗ ಪ್ರವೇಶ ಮಾಡಿದಾಗಲೇ ಸಂತೃಪ್ತ ದಾಸನಾಗಿರುವನು ಮತ್ತು ಅವನ ಆರಾಧನೆ ಮಾಡುತ್ತಿರುವನು, ಆಲಸಿಯಾಗಿ ಕುಳಿತುಕೊಳ್ಳುವುದಿಲ್ಲ. ಅಂದ ಹಾಗೆ ನಿಜವಾದ ಸ್ಥಳ ಸ್ವರ್ಗವೇ ಆಗಿದೆ. ಅಲ್ಲಿಯೇ ಮನುಷ್ಯನು ಪರಿಪೂರ್ಣ ಸಂತೃಪ್ತ ದಾಸನಾಗುವನು. ಸ್ವರ್ಗದ ಸರ್ವ ರೀತಿಯ ರುಚಿ ಭಾವನೆಗಳ ತಳಮಳದಿಂದ ಸ್ವತಂತ್ರಗೊಂಡು ಮನುಷ್ಯನು ತನ್ನ ಆರಾಧನೆಗಳಲ್ಲಿಯೇ ರುಚಿ ಅನುಭವಿಸುವನು. ಯಾವ ಕಾರ್ಯದಲ್ಲಿ ಸ್ವಾರ್ಥವಿರುತ್ತದೆಯೋ ಅಲ್ಲಿ ದಣಿವು ಭಾಸವಾಗುವುದಿಲ್ಲ. ಸಾಮಾನ್ಯವಾಗಿ ಮುಸಲ್ಮಾನರು ಸ್ವರ್ಗವನ್ನು ನಿರ್ಗತಿಕರ ತಾಣ ಎಂದು ಭಾವಿಸುತ್ತಾರೆ. ಅಲ್ಲಿ ಯಾವ ಕೆಲಸವು ಇರದು. ಪುಕ್ಕಟೆಯಾಗಿ ಊಟ ದೊರೆಯುವುದು. ಅಲ್ಲಿಂದ ಯಾರು ಹೊರ ಹಾಕುವುದಿಲ್ಲ. **ಲಾ ಹೌಲ ವಲಾ ಖುವ್ವತ ಇಲ್ಲಬಿಲ್ಲಾಹಿಲ್ ಅಝೀಮ್.**

(ತಫ್ಸೀರ್ ಕಬೀರ್, ಸಂಪುಟ-4, ಪುಟ-83, ಮುದ್ರಣ ಖಾದಿಯಾನ್)

**ಆಡಂಬರ ಮತ್ತು ತೋರ್ಪಡಿಕೆಗೋಸ್ಕರ ಹಕ್ಕ್ ಮಹರನ್ನು ನಿಶ್ಚಯಿಸುವುದು ತಪ್ಪು ಸಂಪ್ರದಾಯವಾಗಿರುತ್ತದೆ.**

ಹಝ್ರತ್ ಮಸೀಹ್ ಮೌಊದ್(ಅ) ನುಡಿಯುತ್ತಾರೆ:

ವಧು ಹಾಗೂ ವರನ ಕಡೆಯವರು ಇಬ್ಬರು ಸೇರಿ ರಾಜಿಯಾಗಿ ಹಕ್ಕ್ ಮಹರ್ ನಿಶ್ಚಯಿಸಿ ಕೊಳ್ಳುತ್ತಾರೆ ಇದಕ್ಕೆ ಯಾವುದೇ ಆಕ್ಷೇಪವಿಲ್ಲ. ಆದರೆ ಶರೀಅತ್ತಿನಲ್ಲಿ ಹಕ್ಕ್ ಮಹರ್ ಇಷ್ಟೇ ನೀಡಬೇಕೆಂಬ ನಿಯಮ ಅಧಿಕೃತವಾಗಿ ಹದೀಸುಗಳಲ್ಲಿ ಯಾವುದೇ ಉಲ್ಲೇಖವಿಲ್ಲ. ಆದರೆ ಆ ಸಂಧರ್ಭಕನ್ನುಸಾರ ಹಕ್ಕ್ ಮಹರ್ ನಿಶ್ಚಯಿಸಿಕೊಳ್ಳಬಹುದು. ಅಂದರೆ ಪ್ರಸಕ್ತ ಸಮಯದಲ್ಲಿನ ಜನರ ಜೀವನ ಮಟ್ಟವೇ ಆಧಾರವಾಗಿರುತ್ತದೆ.

ನಮ್ಮ ಪ್ರಾಂತ್ಯದಲ್ಲಿರುವ ಒಂದು ಕೆಟ್ಟ ಸಂಪ್ರದಾಯವೆಂದರೆ ಕೇವಲ ಹೊರ ಜಗತ್ತಿನ ತೋರಿಕೆಗಾಗಿ ಹಾಗೂ ಆಡಂಬರಕ್ಕಾಗಿ ಲಕ್ಷಾಂತರ ಹಕ್ಕ್ ಮಹರ್ ಅನ್ನು ನಿಶ್ಚಿಸಿಕೊಳ್ಳುತ್ತಾರೆ. ಆದರೆ ಅವರ ಉದ್ದೇಶ ಬೇರೆಯೇ ಅಗಿರುತ್ತದೆ. ಅದೇ ರೀತಿ ವಧುವಿನ ಕಡೆಯವರು ವರನನ್ನು ತನ್ನ ಹಿಡಿತದಲ್ಲಿ ಇರಿಸಿಕೊಳ್ಳಲು ಈ ರೀತಿಯ ಹಕ್ಕ್ ಮಹರ್‌ಅನ್ನು ನಿಶ್ಚಯಿಸಿಕೊಳ್ಳುತ್ತಾರೆ. ಆದರೆ ಇದರಿಂದ ಬೇರೆ ಅನೇಕ ಸಮಸ್ಯೆಗಳು ಉದ್ಭವವಾಗುತ್ತದೆ. **(ಮಲ್‌ಫೂಝಾತ್, ಸಂಪುಟ-3, ಪುಟ-284)**

**(ರಿಶ್ತನಾತ ವಿಭಾಗ, ನಝಾರತ್ ಇಸ್ಲಾಹ್ ವ ಇರ್ಷಾದ್, ಖಾದಿಯಾನ್)**

**ತಂದೆಯ ಆಶೀರ್ವಾದ (ಪ್ರಾರ್ಥನೆಗಳಿಂದ) ದಿಂದ ಲಾಭಾನ್ವಿತರಾಗಿರಿ ಮತ್ತು ಅವರ ಶಾಪಗಳಿಂದ ಉಳಿದುಕೊಳ್ಳಿರಿ.**

**ವಿವಾಹನಂತರ ವಖ್‌ಫೇ ನೌ ಮಹಿಳೆಯ ಪ್ರಮುಖ ಕರ್ತವ್ಯವೇನೆಂದರೆ ತಮ್ಮ ಮಕ್ಕಳನ್ನು ಅಲ್ಲಾಹನೊಂದಿಗೆ ಸಂಬಂಧವಿರಿಸುವಂತಹ ರೀತಿಯಲ್ಲಿ ತರಬೇತಿ ನೀಡುವುದಾಗಿರಬೇಕು. ತಮ್ಮ ಹೊಸ ಪೀಳಿಗೆಯನ್ನು ಅಹ್ಮದಿಯತ್ತಿನ ಮೇಲೆ ದೃಢವಾಗಿ ನಿಲ್ಲುವಂತೆ ಮಾಡಬೇಕು ಮತ್ತು ಅಲ್ಲಾಹನೊಡನೆ ಅವರು ಸಂಬಂಧ ಹೊಂದುವಂತೆ ಮಾಡಬೇಕು.**

## ಸಯ್ಯದ್‌ನಾ ಹಝ್ರ್‌ರತ್ ಅಮೀರುಲ್ ಮುಮಿನೀನ್ ಖಲೀಫತುಲ್ ಮಸೀಹ್ ಖಾಮಿಸ್ (ಅಬಿಅ) ರೊಡನೆ ಕೇಳಲಾದ ಪ್ರಮುಖ ಪ್ರಶ್ನೆಗಳ ವಿವೇಕಪೂರ್ಣ ಉತ್ತರಗಳು

**ಸೂಚನೆ:–** ಸಯ್ಯದ್‌ನಾ ಹಝ್ರ್‌ರತ್ ಅಮೀರುಲ್ ಮುಮಿನೀನ್ ಖಲೀಫತುಲ್ ಮಸೀಹ್ ಖಾಮಿಸ್(ಅಬಿಅ) ವಿವಿಧ ಸಂದರ್ಭಗಳಲ್ಲಿ ತನ್ನ ಪತ್ರಗಳಲ್ಲಿ ಮತ್ತು MTA ಯ ವಿವಿಧ ಕಾರ್ಯಕ್ರಮಗಳಲ್ಲಿ ಪ್ರಮುಕ ಸಮಸ್ಯೆಗಳ ಕುರಿತು ನೀಡಲಾದ ನಿರ್ದೇಶನಗಳು. ಅವುಗಳಲ್ಲಿ ಕೆಲವು ಓದುಗರ ಹಿತದೃಷ್ಟಿಯಿಂದ ಅಲ್–ಫಝ್ಲ್ International ನ ಕೃಪೆಯಿಂದ ಪ್ರಕಟಿಸಲಾಗುತ್ತದೆ.

### ಭಾಗ–3

**ಪ್ರಶ್ನೆ: ಖುತುಬ ಜುಮುಅ ಒಂದರಲ್ಲಿ ಹುಝೂರೆ ಅನ್ವರ್ ವಿವರಿಸಿದ ಒಂದು ಘಟನೆ ಕುರಿತು: ಹಝ್ರ್‌ರತ್ ರಸೂಲುಲ್ಲಾಹ್(ಸ) ಹಝ್ರ್‌ರತ್ ಘತಾದ ಬಿನ್ ನೋಮಾನ್‌ರವರಿಗೆ ಒಂದು ಬೆತ್ತ ಕೊಟ್ಟು ಇದರಿಂದ ನಿಮ್ಮ ಮನೆಯಲ್ಲಿರುವ ಜಿನ್ನನ್ನು ಹೊಡೆದೋಡಿಸಬೇಕು ಉಪದೇಶಿಸಿದ್ದರು. ಇದರ ಬಗ್ಗೆ ಮಹಿಳೆಯೊರ್ವರು ಹುಝೂರೆ ಅನ್ವರ್ ಅವರಿಂದ ಹೆಚ್ಚಿನ ವಿವರಣೆ ಬಯಸಿದರು. ಆಗ ಹುಝೂರೆ ಅನ್ವರ್ ದಿನಾಂಕ 29 ಆಗಸ್ಟ್ 2019 ತನ್ನ ಪತ್ರದಲ್ಲಿ ಈ ಘಟನೆಯ ಹೆಚ್ಚಿನ ವಿವರಣೆ ನೀಡುತ್ತಾ ಈ ಕೆಳಗಿನ ಉತ್ತರ ನೀಡಿದರು.**

**ಉತ್ತರ:** ಹುಝೂರ್(ಸ) ರವರ ಈ ಹದೀಸ್ ಮತ್ತು ಈ ತರಹದ ಇತರ ಹದೀಸುಗಳಲ್ಲಿ, ಹುಝೂರೆ(ಸ) ಅಥವಾ ಅವರ ಸಹಾಬರ ಮೇಲೆ ಪ್ರಕಾಶ ಬೀರುವಂತಹ ಘಟನೆಗಳನ್ನು ವಿವರಿಸಿದರು.

ವಾಸ್ತವವಾಗಿ ಅವು ಹುಝೂರ್(ಸ) ರವರ ಪವಾಡಗಳ ಮೇಲೆ ನಿರ್ಭರವಾಗಿವೆ. ಈ ತರಹದ ಪವಾಡಗಳನ್ನು ಅಲ್ಲಾಹನು ಎಲ್ಲಾ ಕಾಲಘಟ್ಟಗಳಲ್ಲೂ ತನ್ನ ಪ್ರವಾದಿಗಳ ಸತ್ಯತೆಗಳಿಗಾಗಿ ಪ್ರದರ್ಶಿಸುತ್ತಾ ಬಂದಿದ್ದಾನೆ. ಅಂದ ಹಾಗೆ ಹಝ್ರ್‌ರತ್ ರಸೂಲುಲ್ಲಾಹ್(ಸ) ರವರ ಪೂರ್ವ ಪ್ರವಾದಿಗಳ ಜೀವನಗಳಲ್ಲೂ ಇಂತಹ ಘಟನೆಗಳು ಕಾಣಸಿಗುತ್ತವೆ. ಹಾಗೆಯೇ ಹುಝೂರ್(ಸ) ರವರ ಸತ್ಯಸಂಧಕ ಸೇವಕರಾದ ಹಝ್ರ್‌ರತ್ ಮಸೀಹ್ ಮೌಊದ್(ಅ) ರವರ ಸತ್ಯತೆಗಾಗಿಯೂ ಅಲ್ಲಾಹನು ಇಂತಹ ಹಲವು ಘಟನೆಗಳನ್ನು ಪ್ರಕಟಪಡಿಸಿದ್ದಾನೆ.

ಈ ಹದೀಸಿನಲ್ಲಿ ಇರುವ ಜಿನ್ನ್ ಅಥವಾ ಶೈತಾನನನ್ನು ಬೆತ್ತದಿಂದ ಹೊಡೆಯುವುದರ ಅರ್ಥ, ಜಿನ್ನ್ ಮನುಷ್ಯರ ದೇಹಗಳಲ್ಲಿ ಸೇರಿಕೊಳ್ಳುತ್ತವೆ. ಅವುಗಳನ್ನು ಹೊಡೆದೋಡಿಸಬಹುದು ಎನ್ನುವುದು ಶುದ್ಧ ತಪ್ಪು ಅಭಿಪ್ರಾಯವಾಗಿದೆ.

ಈ ಹದೀಸಿನ ಪ್ರಕಾರ ಜಿನ್ನ್‌ನ ಅರ್ಥ ಯಾವುದೋ ಕಳ್ಳ ಅಥವಾ ನಷ್ಟವನ್ನುಂಟುಮಾಡುವ ಯಾವುದೋ ಪ್ರಾಣಿಯಾಗಿದೆ. ಅದು ರಾತ್ರಿಯ ಅಂಧಕಾರದ ಪ್ರಯೋಜನ ಪಡೆದು ಹಝ್ರ್‌ರತ್ ಖತಾದ ಬಿನ್ ನೋಮಾನ್ ಅವರ ಮನೆಯಲ್ಲಿ ಸೇರಿಕೊಂಡಿತ್ತು.

ಆದುದರಿಂದ ಹುಝೂರ್(ಸ) ಹಝ್ರ್‌ರತ್ ಖತಾದ ಬಿನ್ ನೋಮಾನ್ ಅವರಿಗೆ ಈ ಅಪಾಯವನ್ನು ಸೂಚಿಸುತ್ತಾ ಬೆತ್ತದಿಂದ ಆ ಕಳ್ಳ ಅಥವಾ ಜಾನುವಾರನ್ನು ಹೊಡೆದೋಡಿಸಲು ಹೇಳಿದರು. ಅಂದ ಹಾಗೆ ಕೆಲ ಇತರ ಗ್ರಂಥಗಳಲ್ಲಿ ಈ ಘಟನೆಯ ಬಗ್ಗೆ ವಿವರವಾಗಿ ಇದರ ಬಗ್ಗೆ ವಿವರಿಸಲಾಗಿದೆ. ಹಝ್ರ್‌ರತ್ ಖತಾದ ಬಿನ್ ನೋಮಾನ್ ತಮ್ಮ ಮನೆ ತಲುಪಿದಾಗ ಅವರ ಮನೆಯವರೆಲ್ಲರೂ ಮಲಗಿಕೊಂಡಿದ್ದರು ಮತ್ತು ಮನೆಯ ಒಂದು ಮೂಲೆಯಲ್ಲಿ ಒಂದು ಸೇಹ್ (ಜಾನುವಾರು) ಅಡಗಿ ಕುಳಿತಿತ್ತು. ಅದನ್ನು ಅವರು ಆ ಬೆತ್ತದಿಂದ ಹೊಡೆದೋಡಿಸಿದರು.

**ಪ್ರಶ್ನೆ: ಮಿತ್ರರೊಬ್ಬರು ಹುಝೂರ್ ಅನ್ವರ್ (ಅಬಿಅ) ರೊಡನೆ ಕೇಳಿದರು. ವ್ಯಾಪಾರದಲ್ಲಿ ವಿವಿಧ ರೀತಿ ಲಾಭಗಳಿಸಲು ಮತ್ತು ಆಕಸ್ಮಿಕವಾಗಿ ಉಂಟಾಗುವ ನಷ್ಟಗಳಿಂದ ಸುರಕ್ಷತೆಗಾಗಿ insurance (ಬೀಮಾ) ಮಾಡುವ ಕುರಿತು ಇಸ್ಲಾಮಿ ಆಜ್ಞೆ ಏನಿದೆ? ಆಗ ಹುಝೂರ್ ಅನ್ವರ್ ದಿನಾಂಕ: 11 ಏಪ್ರಿಲ್ 2016 ತನ್ನ ಪತ್ರದಲ್ಲಿ ನೀಡಿದ ಉತ್ತರ ಈ ಕೆಳಗೆ ನಮೂದಿಸಲಾಗಿದೆ. ಹುಝೂರ್ ಹೇಳಿದರು.**

**ಉತ್ತರ:–** insurance (ಬೀಮಾ) ಮಾಡಿಸುವುದು ಕೇವಲ ಲಾಭ ನಷ್ಟ ಹೊಂದುವ ಶರತ್ತಿನೊಂದಿಗೆ ಮಾತ್ರ ಜಾಯಝ್ ಇದೆ. ಜೂಜು ರೀತಿಯಲ್ಲಿರಬಾರದು. ಕೇವಲ ಲಾಭ ಬರುವ ಶರತ್ತುಗಳೊಂದಿಗೆ ಇದ್ದರೆ ಅದು ಬಡ್ಡಿ ಆಗಿರುವ ಕಾರಣ ಜಾಯಝ್ ಅಲ್ಲ.

ಅದೇ ರೀತಿ ಪಾಲಿಸಿದಾರನು ಕಂಪನಿ ಜೊತೆಗೆ ಕೇವಲ ತಾನು ಕಟ್ಟಿದ ಹಣ ಪಡೆಯುವ ಒಡಂಬಡಿಕೆ ಮಾಡಿಕೊಂಡಿದ್ದರೆ ಅದರ ಮೇಲೆ ಬಡ್ಡಿ ತೆಗೆದುಕೊಳ್ಳುವುದಿಲ್ಲ ಎಂದಾದರೆ ಇಂತಹ insurance (ಬೀಮಾ) ಮಾಡಿಸುವುದರಲ್ಲಿ ಅಡ್ಡಿ ಇಲ್ಲ.

ಹಝ್ರ್‌ರತ್ ಮಸೀಹ ಮೌಊದ್(ಅ) insurance (ಬೀಮಾ) ಕುರಿತು ನುಡಿದರು. ಬಡ್ಡಿ ಮತ್ತು ಜೂಜು ಹೊರತುಪಡಿಸಿ ಬೇರೆ ಇತರ ಒಪ್ಪಂದಗಳನ್ನು ಮತ್ತು ಜವಾಬ್ಧಾರಿಗಳನ್ನು ಶರೀಅತ್ ಒಪ್ಪಿಕೊಳ್ಳುತ್ತದೆ. ಜೂಜಿನಲ್ಲಿ ಹೊಣೆಗಾರಿಕೆ ಇರುವುದಿಲ್ಲ. ಲೋಕದ ವ್ಯಾಪಾರ ವ್ಯವಸ್ಥೆಯಲ್ಲಿ ಹೊಣೆಗಾರಿಕೆಯ ಅವಶ್ಯಕತೆ ಇರುತ್ತದೆ. (ಅನ್ನೂರ್ ಬದರ್ ನಂಖ್ಯೆ–10, ಸಂಪುಟ–2 ದಿನಾಂಕ)

ಹಝ್ರ್‌ರತ್ ಖಲೀಫತುಲ್ ಮಸೀಹ್ ದ್ವಿತೀಯರು(ರ) ತಮ್ಮ ಒಂದು ಭಾಷಣದಲ್ಲಿ ಹೇಳಿದರು. ಯಾವುದೇ ಕಂಪನಿಯಾಗಿರಲಿ ಲಾಭ ನಷ್ಟ ಶರತ್ತಿನೊಂದಿಗೆ ಬೀಮಾ ಮಾಡಿಸಿಕೊಂಡರೆ ಅದು ಜಾಯಝ್ ಆಗಿರುತ್ತದೆ." (ಅಲ್–ಫಝ್ಲ್ 7 ಜನವರಿ 1930)

"ಒಂದು ಪತ್ರಕ್ಕೆ ಉತ್ತರಿಸುತ್ತಾ ಹಝ್ರ್‌ರತ್ ಮುಸ್ಲಿಹ್ ಮೌಊದ್(ರ) ಬರೆದರು. ನಾವು insurance (ಬೀಮಾ) ಅನ್ನು ಬಡ್ಡಿ ಶಾಮೀಲಾದ ಕಾರಣ ನಾಜಾಯಝಾ (ಅಸಿಂಧು) ಎನ್ನುತ್ತೇವೆ. ಕೇವಲ ಈ ಕಾರಣದಿಂದಲೇ ನಾನು ಅದನ್ನು ನಾಜಾಯಝ್ ಎನ್ನುವುದಿಲ್ಲ. ಅದು ನಾಜಾಯಝ್ ಆಗಿರಲು ಹಲವು ಕಾರಣಗಳಿವೆ. ಅವುಗಳಲ್ಲಿ ಅದು ಬಡ್ಡಿಯ ಇನ್ನೊಂದು ವಿಭಾಗ ಆದ ಕಾರಣ insurance ಅನ್ನು ಅಸಿಂಧು (ನಾಜಾಯಿಝ್) ಎನ್ನುತ್ತೇವೆ. ಯಾವುದೋ ಒಂದು ವ್ಯಾಪಾರದ ಬುನಾದಿಯೇ ಬಡ್ಡಿಯ ಮೇಲಾಗಿರುವುದು ಬೇರೆ ವಿಷಯವಾಗಿದೆ, ಮತ್ತು ಒಂದು ವ್ಯಾಪಾರದಲ್ಲಿ ಬಡ್ಡಿ ಮಿಶ್ರಿತವಾಗಿರುವುದು ಬೇರೆ ವಿಷಯವಾಗಿದೆ. ಸರಕಾರದ ಕಾನೂನಿನ್ವಯ ಸರಕಾರ ಖುದ್ದು ಒಂದು ಲಕ್ಷ ಠೇವಣಿಗಳನ್ನು ಖರೀದಿಸದೇ ಯಾವ ಕಂಪನಿಯು ಜಾರಿಯಲ್ಲಿರುವುದಿಲ್ಲ. ಆದುದರಿಂದ ಅದರಲ್ಲಿ ಮಿಶ್ರಣದ ಪ್ರಶ್ನೆ ಬರುವುದಿಲ್ಲ, ಬದಲು ಅನಿವಾರ್ಯತೆಯ ಪ್ರಶ್ನೆ ಬರುತ್ತದೆ.

(2) ಎರಡನೆಯದಾಗಿ insurance ತತ್ವ ಬಡ್ಡಿ ಆಧಾರಿತವಾಗಿದೆ. ಏಕೆಂದರೆ ಇಸ್ಲಾಮಿ ಶರಿಅತ್ತಿನ ಪ್ರಕಾರ ಒಬ್ಬನು ಇನ್ನೊಬ್ಬನಿಗೆ ಹಣ ಕೊಡುವವನಾದರೆ ಅದು ಪಾರಿಶೋತಕ (Gift) ರೂಪದಲ್ಲಾಗಿರುತ್ತದೆ, ಅಮಾನತ್ ಆಗಿರುತ್ತದೆ, ಸಹಭಾಗಿತ್ವವಾಗಿರಬಹುದು ಅಥವಾ ಸಾಲವಾಗಿರಬಹುದು. ಆದರೆ ಇದು (insurance) ಪಾರಿಶೋತಕ (Gift) ಅಲ್ಲ, ಅಮಾನತ್ ಸಹ ಅಲ್ಲ. ಏಕೆಂದರೆ ಅಮಾನತ್ತಿನಲ್ಲಿ ಹೆಚ್ಚು ಕಡಿಮೆ ಮಾಡಲು ಬರುವುದಿಲ್ಲ. ಇದು ಸಹಭಾಗಿತ್ವವು ಅಲ್ಲ. ಏಕೆಂದರೆ ಕಂಪನಿಯ ಲಾಭ ನಷ್ಟದ ನಿರ್ವಹಣೆಯಲ್ಲಿ ಪಾಲಿಸಿದಾರನು ಸಹಭಾಗಿತ್ವ ಹೊಂದಿರುವುದಿಲ್ಲ. ನಾವು ಅದನ್ನು ಸಾಲ ಎಂದೇ ಹೇಳಬಹುದು. ವಾಸ್ತವದಲ್ಲಿ ಅದು ಸಾಲವೇ ಆಗಿರುತ್ತದೆ. ಏಕೆಂದರೆ ಈ ಹಣವನ್ನು ಬೀಮಾದವರು ತಮ್ಮ ಆಶಯದಂತೆ ಬಳಕೆಯಲ್ಲಿ ತರುತ್ತಾರೆ. ಬೀಮಾದಲ್ಲಿ ನಷ್ಟ ಉಂಟಾದರೆ, ಹಣ ಕೊಡುವವರ ಮೇಲೆ ಯಾವ ಹೊಣೆಯು ಹಾಕುವುದಿಲ್ಲ. ಆದುದರಿಂದ ಇದು ಸಾಲವಾಗಿದೆ ಮತ್ತು ಯಾವ ಸಾಲ ಹೊಣೆಗಾರಿಕೆಯಿಲ್ಲದೆ ಮುಂಚಿತವಾಗಿ ಲಾಭ ನೀಡುವುದೋ ಅದು ಇಸ್ಲಾಮಿ ಶರಿಅತಿನ ಪ್ರಕಾರ ಬಡ್ಡಿಯಾಗಿರುತ್ತದೆ. ಅಂದ ಹಾಗೆ ಬೀಮಾದ ತಳಪಾಯವೇ ಬಡ್ಡಿ ಆಗಿರುತ್ತದೆ.

(3) ಮೂರನೆಯದಾಗಿ ಬೀಮಾ ಪದ್ಧತಿಯು, ಇಸ್ಲಾಮಿ ಶರಿಯತ್ತ್ ಬಯಸುವ ಬುನಾದಿಯನ್ನೇ ಸುಳ್ಳಾಗಿಸುತ್ತದೆ. ಬೀಮಾ ಪೂರ್ಣ ರೂಪದಲ್ಲಿ ಜಾರಿಗೆ ತಂದ ನಂತರ, ಪರಸ್ಪರ ಸಹಕಾರ, ಕರುಣೆ ಮತ್ತು ಸಹೋದರತೆಯನ್ನು ತಳ್ಳಿ ಹಾಕುತ್ತದೆ." (ಅಖ್ಬಾರ್ ಅಲ್–ಫಝ್ಲ್ ಖಾದಿಯಾನ್ ದಿನಾಂಕ: 18 ಸೆಪ್ಟೆಂಬರ್ 1934 ಪುಟ 5)

ಕೆಲ ರಾಷ್ಟ್ರಗಳಲ್ಲಿ ಸರಕಾರದ ಕಾನೂನಿನ್ವಯು ಬೀಮಾ ಮಾಡಿಸುವುದು ಕಡ್ಡಾಯವಾಗಿರುತ್ತದೆ. ಅಂತಹ ಬೀಮಾವನ್ನು ಮಾಡಿಸುವುದು ಜಾಯಝ್ ಆಗಿದೆ. ಹಝ್ರ್‌ರತ್ ಮುಸ್ಲಿಹ್ ಮೌಊದ್(ರ) ರೊಡನೆ ಮಿತ್ರರೊಬ್ಬರು 25 ಜೂನ್ 1942 ರಂದು ಒಂದು ಪ್ರಶ್ನೆ ಕೇಳಿದ್ದರು. ಯಾರ ಬಳಿ ಮೋಟಾರ್ ಗಾಡಿ ಇರುವುದೋ

*(ಪುಟ ಸಂಖ್ಯೆ–08 ರಲ್ಲಿ ಮುಂದುವರಿಸಲಾಗಿದೆ)*

EDITOR
TARIQ AHMED IDRIS.
Mobile : +91 8050330779
e-mail: kannadabadar@gmail.com
website:www.akhbarbadarqadian.in

REGISTERED WITH THE REGISTRAR OF THE NEWSPAPER FOR INDIA AT NO RN PUNKAN/2020/78613

Weekly **BADAR** Qadian

Distt: Gurdaspur (Pb.) INDIA Qadian - 143516

Postal Reg. No: 3000039689/2020-22 Vol No.02, Thursday, 04 November 2021, Issue No. 44

MANAGER
SHAIKH MUJAHID AHMAD.
Mobile : +91 99153 79255
e-mail:managerbadrqnd@gmail.com
www.alislam.org/badr

ANNUAL SUBSCRIPTION:Rs.575/- (Per Issue: 10/- ) (WEIGHT: 20-50, grms / issue)

## *ಸಯ್ಯದನಾ ಹಝ್ರತ್ ಅಮೀರುಲ್ ಮೂಮಿನೀನ್ ಖಲೀಫತುಲ್ ಮಸೀಹ್ ಖಾಮಿಸ್‌ರವರ ಜರ್ಮನಿಯ ಪ್ರವಾಸ (ಮೇ, ಜೂನ್ 2015)*

**(ಬದರ್ ಸಂಚಿಕೆ 43ರ ವರದಿಯ ಉಳಿದ ಭಾಗ)**

* ಮುಹಮ್ಮದ್ ಅಲಿ ಸಾಹಿಬ್ ಎಂಬ ಅತಿಥಿಯೋರ್ವರು ಹೇಳುತ್ತಾರೆ. ನಾನು ಒಬ್ಬ ವೃದ್ಧ ವ್ಯಕ್ತಿಯಾಗಿದ್ದೇನೆ. ಇಲ್ಲಿಯ ಪರಿಸರದಲ್ಲಿ ಏಳು ದಿನಗಳನ್ನು ಕಳೆದಿದ್ದೇನೆ. ಅದನ್ನು ಪದಗಳಲ್ಲಿ ವಿವರಿಸಲು ಸಾಧ್ಯವಿಲ್ಲ. ಹುಝೂರರೊಂದಿಗಿನ ಈ ಭೇಟಿ ನನ್ನ ಜೀವನದ ಒಂದು ವಿಶೇಷ ಘಟನೆಯಾಗಿದೆ. ಅದು ಜೀವನದ ಅತಿ ಸುಂದರ ಘಟನೆಗಳಲ್ಲಿ ಒಂದಾಗಿದೆ. ಈ ಜಮಾಅತಿನ ಶಿಕ್ಷಣವೆ ಇಸ್ಲಾಮಿನ ನಿಜವಾದ ಶಿಕ್ಷಣವಾಗಿದೆ. ಪ್ರತಿಯೊಬ್ಬರು ಅದಕ್ಕೆ ಬದ್ಧರಾಗಿದ್ದಾರೆ.

* ಓರ್ವ ಮಹಿಳಾ ಅತಿಥಿ ಹೇಳಿದರು. ನಾನು ಬೋಸ್ನಿಯಾದಿಂದ ಬಂದಿರುತ್ತೇನೆ. ಇಲ್ಲಿ ಬಂದು ನಾನು ಬಹಳಷ್ಟು ಕಲಿತುಕೊಂಡಿದ್ದೇನೆ. ಹುಝೂರ್ ಅನ್ವರ್ ಅವರಿಗೆ ನೋಡಿ ಮತ್ತು ಭೇಟಿಯಾಗಿ ನನ್ನ ಸಾಹಸ ಇಮ್ಮಡಿಗೊಂಡಿದೆ. ಇಂದಿನ ಇಸ್ಲಾಮಿಕ್ ಸ್ಥಿತಿ ನೋಡಿ ನಾನು ನಿರಾಶೆಗೊಂಡಿದ್ದೆ. ಆದರೆ ತಮ್ಮ ಭಾಷಣಗಳನ್ನು ಕೇಳಿ ಮತ್ತು ತಮ್ಮನ್ನು ನೋಡಿ ತುಂಬಾ ನೆಮ್ಮದಿ ದೊರೆತಿದೆ. ಇಸ್ಲಾಮಿನ ಪ್ರಗತಿಗೋಸ್ಕರ, ಇಸ್ಲಾಮಿನ ರಕ್ಷಣೆಗೋಸ್ಕರ ಹಗಲಿರುಳು ಪ್ರಯತ್ನಶೀಲ ಒಬ್ಬ ವ್ಯಕ್ತಿಯಿದ್ದಾನೆ ಎಂಬ ಖಾತರಿ ಉಂಟಾಯಿತು.

ಆಗ ಹುಝೂರ್ ಹೇಳಿದರು. ಅಲ್ಲಾಹನು ನಿಮಗೆ ಧೈರ್ಯ ನೀಡಲಿ, ಈ ಕಾಲಘಟ್ಟದಲ್ಲಿ ಇಸ್ಲಾಮ್ ಧರ್ಮದ ಸೇವೆ ಮಾಡುವ ಜನರಲ್ಲಿ ನೀವು ಸೇರುವಂತಾಗಲಿ.

* ಮಹಿಳೆಯೋರ್ವಳು ಹೇಳಿದರು. ನಾನು ಐದು ವರ್ಷಗಳಿಂದ ಅಹ್ಮದಿಯಾಗಿದ್ದೇನೆ. ಇದು ನನ್ನ ಪ್ರಥಮ ಜಲ್ಸ ಸಾಲಾನ ಆಗಿದೆ. ಮತ್ತು ನನ್ನ ಆಶಯಗಳಿಗೆ ಮೀರಿದ್ದಾಗಿದೆ. ಅದರಿಂದ ಬಹಳಷ್ಟು ಕಲಿತುಕೊಳ್ಳುವಂತೆ ಆಗಿದೆ. ನನ್ನ ಕುಂದು ಕೊರತೆಗಳನ್ನು ಕಾಣುವಂತಾಗಿದೆ. ಮನುಷ್ಯನು ಜಲ್ಸದಿಂದ ಬಹಳಷ್ಟು ಕಲಿಯಬಹುದು. ನನ್ನ ಕುಟುಂಬ ಸಹ ಅಹ್ಮದಿಯತ್ತಿಗೆ ಸೇರುವಂತಾಗಲಿ ಎಂದು ಪ್ರಾರ್ಥಿಸಿರಿ. ನನ್ನ ಕುಟುಂಬದಲ್ಲಿ ನಾನೊಬ್ಬಳೇ ಅಹ್ಮದಿಯಾಗಿದ್ದೇನೆ. ನನ್ನ ಹೆತ್ತವರು ನನ್ನನ್ನು ಮನೆಯಿಂದ ಹೊರಗೆ ಹಾಕಿದ್ದರು. ನನ್ನ ವಿವಾಹ ಪಾಕಿಸ್ತಾನದ ಓರ್ವ ಅಹ್ಮದಿಯೊಂದಿಗಾಗಿದೆ. ನಾನು ಭಾಷಾಂತರ ಕಾರ್ಯದಲ್ಲಿ ನೆರವು ನೀಡುತ್ತಿದ್ದೇನೆ. ಬೋಸ್ನಿಯನ್ ಜಮಾಅತಿಗಾಗಿ ಪ್ರಾರ್ಥಿಸಲು ವಿನಂತಿಸುತ್ತೇನೆ.

* ಓರ್ವ ಅಹ್ಮದಿ ಮಹಿಳೆ ಮದೀನಾ ಸಾಹಿಬಾ ಹೇಳುತ್ತಾರೆ. ನಾನು ನನ್ನ ಕುಟುಂಬದಲ್ಲಿ ಒಬ್ಬಳೇ ಅಹ್ಮದಿಯಾಗಿದ್ದೆ. ಇದಕ್ಕಿಂತ ಮುಂಚೆ ಜಲ್ಸಗಳಲ್ಲಿ ಭಾಗವಹಿಸಲು ಸಾಧ್ಯವಿರಲಿಲ್ಲ. ಆದರೆ ಈಗ ಅಲ್ಲಾಹನು ಅನುಗ್ರಹದಿಂದ ನನ್ನ ವಿವಾಹ ಓರ್ವ ಅಹ್ಮದಿಯೊಂದಿಗೆ ಆಗಿದೆ. ಜಲ್ಸದಲ್ಲಿ ಭಾಗವಹಿಸುವುದು ನನ್ನ ಮೊದಲ ಬಯಕೆಯಾಗಿತ್ತು. ಅವರು ಹೇಳಿದರು. ಈ ಜಲ್ಸದಲ್ಲಿ ಭಾಗವಹಿಸಿ, ಹುಝೂರರೊಡನೆ ಭೇಟಿಯಾಗಿ ಮತ್ತು ಹುಝೂರ್‌ರ ಭಾಷಣಗಳನ್ನು ಕೇಳಿ ಭಾಸವಾಯಿತು. ಇನ್ನೂ ತಮ್ಮಲ್ಲಿ ಬಹಳಷ್ಟು ನ್ಯೂನತೆಗಳಿವೆ, ತಮ್ಮ ಸುಧಾರಣೆಗೋಸ್ಕರ ತುಂಬಾ ಶ್ರಮವಹಿಸಬೇಕಾಗಿದೆ. ಮತ್ತು ಅವರು ಹೇಳಿದರು. ಹುಝೂರ್ ನಮ್ಮ ಕುಟುಂಬದಲ್ಲಿ ಎಲ್ಲರಿಗೂ ಅಹ್ಮದಿಯತ್ ಸ್ವೀಕರಿಸುವ ಭಾಗ್ಯ ದೊರೆಯಲಿ ಎಂದು ಪ್ರಾರ್ಥಿಸಿರಿ.

* Maid ಸಾಹಿಬ್ ಎಂಬ ಅಹ್ಮದಿಯೇತರ ಇಮಾಮರು ಬೈಅತ್ ಮಾಡಿ ಇತ್ತೀಚ್ಚೆಗೆ ಅಹ್ಮದಿಯತ್ತಿಗೆ ಸೇರಿದ್ದರು ಅವರು ಹೇಳುತ್ತಾರೆ. ನಾನು ಮೊದಲ ಬಾರಿಗೆ ಜಲ್ಸದಲ್ಲಿ ಭಾಗವಹಿಸಿರುತ್ತೇನೆ ಮತ್ತು ನಿನ್ನೆ ನಾನು ಬೈಅತ್ ಮಾಡಿದ್ದೆ. ಹುಝೂರ್‌ರ ದರ್ಶನದಿಂದಲೇ ನನ್ನ ವರ್ಷಾನುಗಟ್ಟಲೆಯ ಪ್ರಶ್ನೆಗಳ ಪರಿಹೀಹಾರ ದೊರೆತಂತಾಯಿತು. ನಾನು ಹುಝೂರ್‌ರ ಮುಖದಲ್ಲಿ ಒಂದು ಪ್ರಕಾಶ ಕಂಡಿದ್ದೇನೆ. ಹುಝೂರ್‌ರ ಪ್ರಕಾಶವೇ ಒಂದು ದೊಡ್ಡ ಪುರಾವೆಯಾಗಿದೆ. ಇನ್ನು ಅವರು ಹೇಳಿದರು. ನಾನು ಸಾಕ್ಷ್ಯ ವಹಿಸುತ್ತೇನೆ. ತಾವು ಖಲಿಫತುಲ್ ಮಸೀಹ್ ಆಗಿದ್ದೀರಿ. ಮತ್ತು ನಿಮ್ಮ ಮುಖ ಸಾಕ್ಷ್ಯ ನೀಡುತ್ತದೆ. ಅಹ್ಮದಿಯಾ ಜಮಾಅತ್ ಸತ್ಯವಾಗಿದೆ ಎಂದು.

ಆಗ ಹುಝೂರ್ ಹೇಳಿದರು. ಅಲ್ಲಾಹನು ನಿಮ್ಮ ವಿಶ್ವಾಸದಲ್ಲಿ ಪ್ರಗತಿ ಸಾಧಿಸುವಂತೆ ಕರುಣಿಸಲಿ.

* ಓರ್ವ ಅಹ್ಮದಿಯೇತರ ಮಿತ್ರರು ಫರೀದ್ ಸಾಹಿಬ್ ತಮ್ಮ ಭಾವನೆಗಳನ್ನು ಹೀಗೆ ವ್ಯಕ್ತಪಡಿಸುತ್ತಾರೆ.

ಹುಝೂರ್‌ರ ವ್ಯಕ್ತಿತ್ವ ಸ್ವಯಂ ತನ್ನ ವ್ಯಕಿತ್ವದಲ್ಲಿ ಒಂದು ಪವಾಡವಾಗಿದೆ. ಜಲ್ಸಕ್ಕೆ ಆಹ್ವಾನಿಸಿದಕ್ಕೆ ತುಂಬಾ ಧನ್ಯವಾದಗಳು. ಅವರ ಕುರಿತು ಮುಬಲ್ಲಿಗ್ ಸಾಹಿಬರು ಹೇಳುತ್ತಾರೆ. ಜಲ್ಸದಲ್ಲಿ ಭಾಗವಹಿಸುವ ಮುಂಚೆ ಜಮಾಅತಿನೊಂದಿಗೆ ಅವರ ಅಷ್ಟೊಂದು ಸಂಬಂಧವೇನೂ ಇರಲಿಲ್ಲ. ಆದರೆ ಹುಝೂರ್‌ರೊಂದಿಗೆ ಭೇಟಿಯಾದ ನಂತರ ಅವರಲ್ಲಿ ಒಂದು ಅಸಾಮಾನ್ಯ ಪರಿವರ್ತನೆ ಉಂಟಾಯಿತು. ಜಮಾಅತಿನ ಬಗ್ಗೆ ವಿಶೇಷವಾಗಿ ಖಲೀಫತುಲ್ ಮಸೀಹ್ ಕುರಿತು ಅವರ ಮನಸ್ಸಿನಲ್ಲಿ ಗೌರವಭಾವನೆ ಹೆಚ್ಚಾಯಿತು.

* ವಹೀದಾ ಸಾಹಿಬಾ ಮಹಿಳೆಯೊಬ್ಬರು ಹೇಳುತ್ತಾರೆ. ಮೊದಲ ಬಾರಿಗೆ ಇಂತಹ ಪರಿಸರದಲ್ಲಿ ಸಮಯ ಕಳೆಯುವ ಸಂದರ್ಭ ಒದಗಿದೆ. ನಾನು ಹುಝೂರ್‌ರ ಭಾಷಣಗಳಿಂದ ತುಂಬಾ ಪ್ರಭಾವಿತಗೊಂಡಿದ್ದೆನೆ ಮತ್ತು ಅದನ್ನು ಸ್ಪಷ್ಟಪಡಿಸದೆ ಇರಲು ಸಾಧ್ಯವಿಲ್ಲ. ಹುಝೂರ್‌ರ ಮುಖದಲ್ಲಿ ಏನು ಪ್ರಕಾಶವಿದೆಯೋ ಸ್ವಯಂ ಅದು ಅಲ್ಲಾಹನ ಪ್ರಿಯರು ಎಂಬುದಕ್ಕೆ ಸಾಕ್ಷ್ಯವಿದೆ. ಹುಝೂರ್‌ರೊಡನೆ ಭೇಟಿಯ ಭಾವನೆಗಳನ್ನು ಪದಗಳಲ್ಲಿ ವರ್ಣಿಸಲು ಸಾಧ್ಯವಿಲ್ಲ. ಅದನ್ನು ಕೇವಲ ಅನುಭವಿಸಬಹುದಷ್ಟೇ.

ಬೋಸ್ನಿಯಾ ತಂಡದವರೊಂದಿಗೆ ಹುಝೂರ್‌ರ ಈ ಭೇಟಿ 12.25 ಗಂಟೆಯವರೆಗೆ ನಡೆಯಿತು.

ಭೇಟಿಯ ನಂತರ ಕೊನೆಯಲ್ಲಿ ಎಲ್ಲ ಸದಸ್ಯರು ಹುಝೂರ್‌ರೊಂದಿಗೆ ಭಾವಚಿತ್ರ ತೆಗೆಯಿಸಿಕೊಲ್ಲುವ ಭಾಗ್ಯ ಪಡೆದರು.

### ಕೊಸೋವೋದಿಂದ ಆಗಮಿಸಿದ ತಂಡದೊಂದಿಗೆ ಹುಝೂರ್‌ರವರ ಭೇಟಿ

* Kosovo ದಿಂದ 17 ಜನರ ಒಳಗೊಂಡ ತಂಡವಿತ್ತು. ಅದರಲ್ಲಿ ಇಬ್ಬರು ಮಹಿಳೆಯರು ಮತ್ತು ಇಬ್ಬರು ಮಕ್ಕಳು ಸಹ ಸೇರಿದ್ದರು. ಹುಝೂರ್ ಅನ್ವರ್ ಸದಸ್ಯರೊಡನೆ ಕೇಳಿದರು. ಯಾರೆಲ್ಲ ಮೊದಲ ಬಾರಿಗೆ ಜಲ್ಸಕ್ಕೆ ಬಂದವರಾಗಿದ್ದೀರಿ ಮತ್ತು ಜಲ್ಸದ ಕುರಿತು ನಿಮ್ಮ ಅಭಿಪ್ರಾಯವೇನು?

**(ಮುಂದುವರಿಯುವುದು)**

### *126 ನೇ ಜಲ್ಸಾ ಸಾಲಾನ ಖಾದಿಯಾನ್*

ಸಯ್ಯದನಾ ಹುಝೂರ್ ಅನ್ವರ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್‌ರವರು 126ನೇ (ವಾರ್ಷಿಕ ಸಮ್ಮೇಳನ) ಜಲ್ಸಾ ಸಾಲನ ಖಾದಿಯಾನಿಗೆ 24, 25 ಮತ್ತು 26ನೇ ಡಿಸೆಂಬರ್ 2021 (ಶುಕ್ರವಾರ, ಶನಿವಾರ ಮತ್ತು ಭಾನುವಾರ) ದ ದಿನಾಂಕಗಳ ಅನುಮತಿ ನೀಡಿದ್ದಾರೆ. ಎಲ್ಲಾ ಸದಸ್ಯರು ಇಂದಿನಿಂದಲೇ ದುಆ ಮಾಡಬೇಕಾಗಿ ಹಾಗೂ ಈ ಸಮ್ಮೇಳನದಲ್ಲಿ ಭಾಗವಹಿಸಲು ವಿನಂತಿ. ಅಲ್ಲಾಹನು ನಮಗೆಲ್ಲ ಈ ಸಮ್ಮೇಳನದಲ್ಲ ಭಾಗಿಯಾಗಲು ತೌಫೀಕ್ ನೀಡಲೀ. ಜಲ್ಸಾ ಸಾಲಾನ ಪ್ರತಿಯೊಂದು ವಿಷಯದಲ್ಲೂ ಅನುಗ್ರಹದಾಯಕವಾಗಲಿ ಅದೇ ರೀತಿ ಶುದ್ಧ ಆತ್ಮಗಳ ಮಾರ್ಗದರ್ಶನಕ್ಕೆ ಕಾರಣವಾಗಲಿ ಎಂದು ದುಆ ಮಾಡುತ್ತಾಯಿರಿ.

**ಜಝಾಕುಮಲ್ಲಾಹ್.**

**(ನಾಝಿರ್ ಇಸ್ಲಾಹ್-ವ-ಇರ್‌ಶಾದ್ ಖಾದಿಯಾನ್)**

**ಇಸ್ಲಾಮ್ ಮತ್ತು ಅಹ್ಮದಿಯ್ಯತ್‌ನ ಮಾಹಿತಿಗಾಗಿ ನಮ್ಮನ್ನು ಸಂಪರ್ಕಿಸಿ:**

**NATIONAL TOLL FREE**

**1800-103-2131**

Printed & Published by: Jameel Ahmed Nasir on behalf of Nigran Board of Badar. Name of Owner: Nigran Board of Badar. And printed at Fazle-Umar Printing Press. Harchowal Road, Qadian, Distt. Gurdaspur-143516, Punjab. And published at office of the Weekly Badar Mohallah - Ahmadiyya, Qadian Distt. Gsp-143516, Punjab. India. Editor: Tariq Ahmed Idris.